ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜುಲೈ 16 ಭಾನುವಾರ 2023

ಸಂಪುಟ: 44 | ಸಂಚಿಕೆ: 91 | ಪುಟಗಳು: 12 | ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ಮೈಸೂರಿನ ಕೆಟಿ ಸ್ಟ್ರೀಟ್‌ನಲ್ಲಿ ಶನಿವಾರ ನಗರಪಾಲಿಕೆ ಮಾಜಿ ಸದಸ್ಯ ಶಿವಣ್ಣ ಅವರ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ನಗರ ಕಾಂಗ್ರೆಸ್ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ಮುಖಂಡರಾದ ರಘು, ಅಶೋಕ್ ಸೇವಾದಳ, ಯೋಗೀಶ್ ಉಪ್ಪಾರ್, ಸುನಿಲ್, ಅಶೋಕ್ ಇದ್ದರು.

ಮಹತ್ವದ ಶೈಕ್ಷಣಿಕ ಮಾಹಿತಿ

ನೀಟ್ ಪಾಸಾದವರು ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಜು.21 ಕೊನೆ ದಿನ



ಬೆಂಗಳೂರು, ಜು.15– ರಾಜ್ಯದಲ್ಲಿ ನೀಟ್ ಪರೀಕ್ಷೆಯಲ್ಲಿ ಪಾಸ್ ಆಗಿರುವ ಅಭ್ಯರ್ಥಿಗಳು ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಜು.21 ಕೊನೆಯ ದಿನಾಂಕವಾಗಿದೆ. ಕೂಡಲೇ ನೀಟ್ ಉತ್ತೀರ್ಣರಾದ ಅಭ್ಯರ್ಥಿಗಳು ಒಂದು ವಾರದೊಳಗೆ ಅರ್ಜಿ ಸಲ್ಲಿಕೆ ಮಾಡುವಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸೂಚನೆ ನೀಡಲಾಗಿದೆ.

ರಾಜ್ಯದಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಲು ಜುಲೈ 21 ಕೊನೆಯ ದಿನವಾಗಿದೆ. ನೀಟ್ ಪರೀಕ್ಷೆಯಲ್ಲಿ ಪಾಸ್ ಆಗಿರುವ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸೂಚನೆ ನೀಡಿದೆ. ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಯುನಾನಿ, ಹೋಮಿಯೋಪತಿ ಕೋರ್ಸ್‌ಗಳಿಗೆ ಸೇರುವ ವಿದ್ಯಾರ್ಥಿಗಳಿಗೆ ಈ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಅನ್ವಯ ಆಗಲಿದೆ. ನಿಗದಿತ ಶುಲ್ಕ ಪಾವತಿ ಮಾಡಲು ಜುಲೈ 22 ಕೊನೆಯ ದಿನ.

ಅರ್ಜಿ ಸಲ್ಲಿಕೆಗೆ ವೆಬ್‌ಸೈಟ್ ಲಿಂಕ್: ಇನ್ನು ನೀಟ್ ಪರೀಕ್ಷೆ ಪಾಸಾದ ಅಭ್ಯರ್ಥಿಗಳು ಅರ್ಜಿ ತುಂಬಲು ಕೆಇಎ ವೆಬ್‌ಸೈಟ್ ಪ್ರಕಟಗೊಳಿಸಿದೆ. http://kea.kar.nic.inನಲ್ಲಿ ಪ್ರಕಟಿಸಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ ನಮೂದಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಮಾಹಿತಿ ನೀಡಿದ್ದಾರೆ. ಇನ್ನು ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡುವ ವಿಧಾನಗಳನ್ನು ಕೂಡ ನೀಡಲಾಗಿದೆ. ಅಗತ್ಯ ದಾಖಲೆಗಳು, ಪ್ರಮಾಣಪತ್ರಗಳನ್ನು ಇಟ್ಟುಕೊಂಡು ವಿದ್ಯಾರ್ಥಿಗಳೇ ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಬಹುದು.

ಸಿಇಟಿ–2023 ದಾಖಲಾತಿ ಪರಿಶೀಲನೆಗೆ ಕೊನೇ ಅವಕಾಶ: ಜು.17ರಂದು ಅಂತಿಮ

ಬೆಂಗಳೂರು, ಜು.15– ಇಂಜಿನಿಯರಿಂಗ್ ಸೇರಿದಂತೆ ಹಲವು ವೃತ್ತಿಪರ ಕೋರ್ಸು ಗಳಿಗೆ ಪ್ರವೇಶ ಬಯಸಿ, 'ಎ' ಕಂಡಿಕೆಯಲ್ಲಿ ಸೀಟು ಬಯಸಿರುವ ಅಭ್ಯರ್ಥಿಗಳಿಗೆ ಕೊನೆಯದಾಗಿ ಜುಲೈ 17ರಂದು ಅಂತಿಮ ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶನಿವಾರ ತಿಳಿಸಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ, ಕಳೆದ 15 ದಿನಗಳಿಂದ ಅಭ್ಯರ್ಥಿಗಳ ವ್ಯಾಸಂಗ ಪ್ರಮಾಣಪತ್ರ ಮತ್ತಿತರ ದಾಖಲೆಗಳ ಪರಿಶೀಲನೆಯು ಬಿಇಒ ಕಚೇರಿಗಳಲ್ಲಿ ನಡೆದಿದ್ದು, ಇಂದು ಕೊನೆ ದಿನವಾಗಿತ್ತು. ಆದರೂ ಕೆಲವು ವಿದ್ಯಾರ್ಥಿಗಳು ಈ ಪ್ರಕ್ರಿಯೆ ಪೂರೈಸಿಲ್ಲ. ಆದ್ದರಿಂದ ಈಗ ಕೊನೆಯ ಅವಕಾಶವನ್ನು ಕೊಡಲಾಗುತ್ತಿದೆ. ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆಯಲು ಇದು ಕಡ್ಡಾಯವಾಗಿದೆ ಎಂದಿದ್ದಾರೆ.

ರಾಜ್ಯದಲ್ಲಿ ಸಿಇಟಿ ಪರೀಕ್ಷೆ ಬರೆದಿರುವ ಅಭ್ಯರ್ಥಿಗಳು ಇಂಜಿನಿಯರಿಂಗ್, ಆರ್ಕಿಟೆಕ್ಚರ್, ಯೋಗ ಮತ್ತು ನ್ಯಾಚು ರೋಪತಿ, ವೆಟರ್ನರಿ, ಕೃಷಿ ವಿಜ್ಞಾನ, ಬಿ.ಫಾರ್ಮ ಮತ್ತು ಡಿ.ಫಾರ್ಮ ಕೋರ್ಸುಗಳಿಗೆ ಈ ಪ್ರಕ್ರಿಯೆ ಅನ್ವಯಿಸುತ್ತದೆ ಎಂದು ಪ್ರಕಟಣೆ ತಿಳಿಸಿದೆ. ಈ ದಿನಾಂಕದೊಳಗೆ ಸಿಇಟಿ ಬರೆದ ಅಭ್ಯರ್ಥಿಗಳು ತಮ್ಮ ದಾಖಲಾತಿಗಳನ್ನು ಪರಿಶೀಲನೆ ಮಾಡಿಕೊಳ್ಳದಿದ್ದಲ್ಲಿ ಮುಂದಿನ ಆಗು–ಹೋಗುಗಳಿಗೆ ಪ್ರಾಧಿಕಾರ ಜವಾಬ್ದಾರಿ ಆಗಿರುವುದಿಲ್ಲ. ಇನ್ನು ಮುಂದಿನ ಪ್ರವೇಶಾತಿ ಪ್ರಕ್ರಿಯೆ ಆರಂಭವಾಗಲಿದೆ.

ರಾಜ್ಯದಲ್ಲಿ 2022–23ನೇ ಸಾಲಿನಲ್ಲಿ ಪಿಯುಸಿ ವಿಜ್ಞಾನ ವಿಷಯದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹಾಗೂ ಇಂಜಿನಿಯರಿಂಗ್ ಪ್ರವೇಶಾತಿ ಸೇರ ಬಯಸುವ ವಿದ್ಯಾರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪರೀಕ್ಷೆಯನ್ನು ನಡೆಸಿದೆ. ಇನ್ನು ಪರೀಕ್ಷೆಯ ಫಲಿತಾಂಶವನ್ನೂ ಬಿಡುಗಡೆ ಮಾಡಿದ್ದು, ವಿದ್ಯಾರ್ಥಿಗಳು ಪಡೆದ ರ್‍ಯಾಂಕಿಂಗ್ ಪಟ್ಟಿಯನ್ನೂ ಬಿಡುಗಡೆ ಮಾಡಲಾಗಿದೆ. ಈಗ ಕೆಲವು ವೃತ್ತಿಪರ ಕೋರ್ಸ್‌ಗಳಿಗೆ ಸರ್ಕಾರಿ ಕೋಟಾದಡಿ ಪ್ರತಿಷ್ಠಿತ ಕಾಲೇಜುಗಳಿಗೆ ಪ್ರವೇಶ ಪಡೆಯಲು ಅನುಕೂಲ ಆಗುವಂತೆ ದಾಖಲಾತಿ ಪರಿಶೀಲನೆ ಕಾರ್ಯವನ್ನು ಮಾಡಲಾಗುತ್ತಿದೆ. ಈಗ ಇಂಜಿನಿಯರಿಂಗ್ ಸೇರ ಬಯಸುವ ವಿದ್ಯಾರ್ಥಿಗಳಿಗೆ ಅನುಕೂಲ ಆಗುವಂತೆ ದಾಖಲಾತಿ ಪರಿಶೀಲನೆ ಕಾರ್ಯಕ್ಕೆ ಕೆಇಎ ಮುಂದಾಗಿದೆ.

ಸಿಯುಇಟಿ–ಯುಜಿ ಫಲಿತಾಂಶ ಪ್ರಕಟ



ನವದೆಹಲಿ,ಜು.15–ವಿಶ್ವವಿದ್ಯಾಲಯ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಯುಇಟಿ–ಯುಜಿ) ಫಲಿತಾಂಶವನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಪ್ರಕಟಿಸಿದ್ದು, 22,000ಕ್ಕೂ ಹೆಚ್ಚು ವಿದ್ಯಾರ್ಥಿಗಳು 100 ಪರ್ಸೆಂಟೇಜ್ ಗಳಿಸಿದ್ದಾರೆ. ಇಂಗ್ಲಿಷ್‌ನಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಗರಿಷ್ಠ ಅಂಕ ಗಳಿಸಿದ್ದಾರೆ. ನಂತರದ ಸ್ಥಾನದಲ್ಲಿ ಜೀವ ವಿಜ್ಞಾನ ಮತ್ತು ಅರ್ಥಶಾಸ್ತ್ರ ಇದೆ. ಸಿಯುಇಟಿ–ಯುಜಿ 2ನೇ ಆವೃತ್ತಿಯ ಪ್ರವೇಶ ಪರೀಕ್ಷೆಗೆ ದೇಶದಾದ್ಯಂತ 11.11 ಲಕ್ಷ ಅಭ್ಯರ್ಥಿಗಳು ಹಾಜರಾಗಿದ್ದರು. ಇಂಗ್ಲಿಷ್‌ನಲ್ಲಿ 5,685 ಅಭ್ಯರ್ಥಿಗಳು 100 ಪರ್ಸೆಂಟೈಲ್ ಅಂಕಗಳನ್ನು ಪಡೆದಿದ್ದರೆ, ಜೀವ ವಿಜ್ಞಾನ/ಜೈವಿಕ ತಂತ್ರಜ್ಞಾನ/ಬಯೋ ಕೆಮಿಸ್ಟ್ರಿ ವಿಷಯಗಳಲ್ಲಿ 4,850 ಹಾಗೂ ಅರ್ಥಶಾಸ್ತ್ರದಲ್ಲಿ 2,836 ಅಭ್ಯರ್ಥಿಗಳು ಗರಿಷ್ಠ ಅಂಕಗಳನ್ನು ಪಡೆದಿದ್ದಾರೆ. ಸಿಯುಇಟಿ ದೇಶದ ಎರಡನೇ ಅತಿದೊಡ್ಡ ಪ್ರವೇಶ ಪರೀಕ್ಷೆಯಾಗಿದೆ. ಇದರ ಮೊದಲ ಆವೃತ್ತಿಯಲ್ಲಿ 12.5 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ನೋಂದಾಯಿಸಿದ್ದರು.

ನಿಧನ

ಸಾವಿತ್ರಮ್ಮ



ಮೈಸೂರು, ಜು.15– ಮೈಸೂರಿನ ಮಂಚೇಗೌಡನಕೊಪ್ಪಲು 3ನೇ ಕ್ರಾಸ್ ನಿವಾಸಿ ಹಾಗೂ ದಿವಂಗತ ಶಿವಲಿಂಗೇಗೌಡರ ಪತ್ನಿ ಶ್ರೀಮತಿ ಸಾವಿತ್ರಮ್ಮ (80) ಅವರು ಇಂದು ಮುಂಜಾನೆ ನಿಧನರಾದರು. ಇವರು ಗುಡ್ಡಪ್ಪ ನಾಗರಾಜು ಸೇರಿದಂತೆ ಐವರು ಪುತ್ರರು ಹಾಗೂ ಇಬ್ಬರು ಪುತ್ರಿಯರು, ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ಹೆಬ್ಬಾಳು ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಜಿ.ರಾಮಚಂದ್ರ ಗುರೂಜಿ



ನಿವೃತ್ತ ಟೆಲಿಕಾಂ ಇಲಾಖೆಯ ನೌಕರರಾದ ಕೆ.ಜಿ.ರಾಮಚಂದ್ರ ಗುರೂಜಿ (84) ಇವರು ನೆನ್ನೆ ಮೈಸೂರಿನ ವಿಜಯನಗರ 2ನೇ ಹಂತದಲ್ಲಿನ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ, ಮೂವರು ಮಕ್ಕಳು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿತು ಎಂದು ಬಂಧು ಮೂಲಗಳು ತಿಳಿಸಿವೆ.

ಎನ್.ವೆಂಕಟೇಶಮೂರ್ತಿ



ಮೈಸೂರಿನ ಕೇಂದ್ರೀಯ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ (ಸಿಎಸ್‌ಆರ್‌ಟಿಐ)ಯ ನಿವೃತ್ತ ಕಾರು ಚಾಲಕ ಎನ್.ವೆಂಕಟೇಶ ಮೂರ್ತಿ (57) ನೆನ್ನೆ ನಿಧನರಾದರು. ಇವರು ಮೈಸೂರಿನ ಶ್ರೀನಗರ ಸಿ–ಬ್ಲಾಕ್‌ನ ನಿವಾಸಿ. ಮೃತರು ಪತ್ನಿ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೊಬೈಲ್ ಫೋನ್‌ಗಳಿಂದ ನೆನಪಿನ ಶಕ್ತಿ ಕ್ಷೀಣ

ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ ಚಿತ್ರನಟ ವಿಜಯ ರಾಘವೇಂದ್ರ; ಮಹಾರಾಣಿ ಕಾಲೇಜಲ್ಲಿ ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ

ಮೈಸೂರು,ಜು.15(ಪಿಎಂ)–ಅಂಗೈಯಲ್ಲಿ ಆಯುಧದಂತೆ ಬಂದಿರುವ ಮೊಬೈಲ್ ಫೋನ್ ನಮ್ಮ ನೆನಪಿನ ಶಕ್ತಿಯನ್ನೇ ಕ್ಷೀಣಿಸುತ್ತಿದೆ. ಹಾಗಾಗಿ ಅವುಗಳ ಅತಿಯಾದ ಬಳಕೆಯಿಂದ ದೂರವಿರಬೇಕು ಎಂದು ಕನ್ನಡ ಚಲನಚಿತ್ರರಂಗದ ನಾಯಕ ನಟ ವಿಜಯರಾಘವೇಂದ್ರ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ಕಲಾ ಕಾಲೇಜು, ಸ್ನಾತಕ ಮತ್ತು ಸ್ನಾತಕೋತ್ತರ ಕೇಂದ್ರದ ವತಿಯಿಂದ ಕಾಲೇಜಿನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ 2022–23ನೇ ಸಾಲಿನ ಕಾಲೇಜಿನ ಸಾಂಸ್ಕೃತಿಕ ವೇದಿಕೆ, ಎನ್‌ಎಸ್‌ಎಸ್, ಸ್ಕೌಟ್ಸ್ ಮತ್ತು ಗೈಡ್ಸ್, ಯುವ ರೆಡ್‌ಕ್ರಾಸ್ ಹಾಗೂ ಎನ್‌ಸಿಸಿ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಅಂತರ್ಜಾಲ (ಇಂಟರ್‌ನೆಟ್), ಮೊಬೈಲ್ ಫೋನ್‌ನಿಂದ ಆದಷ್ಟು ದೂರವಿರಿ. ಆಗ ನಮಗೆ ವಿದ್ಯೆ ಮತ್ತು ಕಲೆಯತ್ತ ಹೆಚ್ಚು ಗಮನ ಕೊಡಲು ಸಾಧ್ಯವಾಗುತ್ತದೆ. ಇದು ನನ್ನ ಅನುಭವದ ಮಾತು. ಏಕೆಂದರೆ ಅಂಗೈಯಲ್ಲಿ ಆಯುಧದಂತೆ ಬಂದಿರುವ ಮೊಬೈಲ್ ಫೋನ್‌ಗಳು ನಮ್ಮ ನೆನಪಿನ ಶಕ್ತಿಯನ್ನೇ ಕ್ಷೀಣಿಸುತ್ತಿದೆ. ಮೊಬೈಲ್‌ನಲ್ಲಿ ಬೇಕಾದಷ್ಟು ಫೋಟೋಗಳು ಕ್ಲಿಕ್ಕಿಸುವುದು ಇಂದು ಸಾಮಾನ್ಯವಾಗಿದೆ. ಹೀಗೆ ಅಸಂಖ್ಯಾ ಫೋಟೋಗಳು ತೆಗೆದುಕೊಳ್ಳುವ ಹಿನ್ನೆಲೆಯಲ್ಲಿ ಅವುಗಳನ್ನು ಯಾವಾಗ ತೆಗೆದೆವು ಎಂಬ ನೆನೆಪು ಇರುವುದೇ ಬಹುತೇಕ ವಿರಳವಾಗುತ್ತಿದೆ. ಮೊಬೈಲ್ ಫೋನ್ ಬಳಕೆ ಅತಿಯಾಗಬಾರದು. ಪ್ರತಿಯೊಬ್ಬರು ನೀವು ಆಯ್ಕೆ ಮಾಡಿಕೊಂಡ ವಿಷಯದಲ್ಲಿ ಉತ್ತಮವಾಗಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೈಸೂರೆಂದರೆ ನಮ್ಮಮ್ಮನಂತೆ: ಮೈಸೂರಿಗೆ ಬರಲು ಸಣ್ಣ ನೆಪ ಸಿಕ್ಕಿದರೆ ಸಾಕು ಬರುತ್ತೇನೆ. ನಾನು ಹುಟ್ಟಿದ್ದೇ ಮೈಸೂರಿನಲ್ಲಿ. ಹಾಗಾಗಿ ನನಗೂ ಮೈಸೂರಿಗೂ ಅವಿನಾಭಾವ ಸಂಬಂಧ. ಮೈಸೂರಿನಲ್ಲೇ ನನ್ನ ಸಿನಿಮಾ ಜೀವನ ಶುರುವಾಯಿತು. 'ಚಿನ್ನಾರಿ ಮುತ್ತ' ಚಿತ್ರೀಕರಣ ಮಹದೇವಪುರದಲ್ಲಿ ನಡೆಯಿತು. 'ನಿನಗಾಗಿ' ಸಿನಿಮಾ ಚಿತ್ರೀಕರಣ ಬಹುಪಾಲು ಮೈಸೂರಿನಲ್ಲೇ ನಡೆಯಿತು. ಮೈಸೂರಿನಲ್ಲಿ ನನಗೆ ಸಿಗುವಂತಹ ಪ್ರೀತಿ, ವಿಶ್ವಾಸ, ಪ್ರೋತ್ಸಾಹ, ವಾತ್ಸಲ್ಯ ಎಂದಿಗೂ ಮರೆಯಲು ಸಾಧ್ಯವಿಲ್ಲ. ಮೈಸೂರೆಂದರೆ ನಮ್ಮ ಅಮ್ಮನಂತೆ. ಕಳೆದವಾರ ಬೆಟ್ಟಕ್ಕೆ ಭೇಟಿ ನೀಡಿ ತಾಯಿ ಚಾಮುಂಡಿ ದರ್ಶನ ಪಡೆದೆ ಎಂದು ಸ್ಮರಿಸಿದರು.

ಮಹಾರಾಣಿ ಮಹಿಳಾ ಕಲಾ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆದ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿಕ ಚಟುವಟಿಕೆ ಇರಬೇಕು. ಆಗಲೇ ಜೀವನದಲ್ಲಿ ಉತ್ಸಾಹ ಗಳಿಸಲು ಸಾಧ್ಯ. ಈ ಸಮಾರಂಭದಲ್ಲಿ ನಮ್ಮ ನೆಚ್ಚಿನ ನಾಯಕ ವಿಜಯರಾಘವೇಂದ್ರ ಭಾಗವಹಿಸಿರುವುದು ಈ ವೇದಿಕೆಗೆ ಕಳೆ ತಂದಿದೆ. ಅವರ ಸಿನಿಮಾ 'ಚಿನ್ನಾರಿ ಮುತ್ತ' ಸಿನಿಮಾದ ಹಾಡು ಪದೇಪದೆ ಕೇಳುತ್ತೇನೆ. ಯಾರಿಗಾದರೂ ಸ್ನೇಹಿತರಿಗೆ ತಮಾಷೆ ಮಾಡಲು 'ಹೇಗಿದ್ದ ಹೇಗಾದ ಗೊತ್ತಾ, ನಮ್ಮ ಚಿನ್ನಾರಿ ಮುತ್ತ' ಎನ್ನುತ್ತೇವೆ. ಆ ಹಾಡು ಸಾಕಷ್ಟು ಖ್ಯಾತಿಯಾಗಿದೆ ಎಂದು ತಿಳಿಸಿದರು.

ಮೈಸೂರು ಶಿಕ್ಷಣಕ್ಕೆ ಹೆಸರುವಾಸಿ. ಅಂದಿನಿಂದಲೂ ಮಹಾರಾಣಿ ಕಾಲೇಜು ಎಂದರೆ ಶಿಸ್ತಿಗೆ ಹೆಸರಾಗಿದೆ. ಅದೇ ರೀತಿ ಶಿಸ್ತು ಕಾಯ್ದುಕೊಂಡು ಉತ್ತಮ ರೀತಿಯಲ್ಲಿ ಕಾಲೇಜು ಮುಂದುವರೆಯಬೇಕು ಎಂದು ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಎನ್‌ಸಿಸಿಯಲ್ಲಿ ಉತ್ತಮ ಸೇವೆಗಾಗಿ 'ಮುಖ್ಯಮಂತ್ರಿಗಳ ಪ್ರಶಂಸನಾ ಪತ್ರ'ಕ್ಕೆ ಭಾಜನವಾಗಿರುವ ಕಾಲೇಜಿನ ವಿದ್ಯಾರ್ಥಿನಿಯರಾದ ಸುನಿತಾ ಶಿವಣ್ಣ, ಮಾನ್ಯ, ಹೆಚ್.ಜಿ. ಶಾಲಿನಿ ಹಾಗೂ ಎನ್‌ಸಿಸಿಯಲ್ಲಿ ಉತ್ತಮ ಶಿಸ್ತಿನ ಸೇವೆಗಾಗಿ ಕಾಲೇಜಿನಿಂದ ಗುರುತಿಸಿರುವ ವಿದ್ಯಾರ್ಥಿನಿಯರಾದ ವರಲಕ್ಷ್ಮೀ, ಭೂಮಿಕಾ ಅವರನ್ನು ಸನ್ಮಾನಿಸಲಾಯಿತು. ಸಮಾರೋಪ ಸಮಾರಂಭದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ವಿ.ವಸಂತ ಕುಮಾರ್, ಸಾಂಸ್ಕೃತಿಕ ವೇದಿಕೆ ಅಧ್ಯಾಪಕ ಕಾರ್ಯದರ್ಶಿ ಡಾ.ಆರ್.ಜಯರಾಜು, ಅಧ್ಯಾಪಕ ಖಜಾಂಚಿ ಡಾ.ಬಿ.ಸವಿತಾ, ವಿದ್ಯಾರ್ಥಿ ಅಧ್ಯಕ್ಷೆ ಕೆ.ಬಿ.ಪ್ರಿಯಾಂಕ, ವಿದ್ಯಾರ್ಥಿ ಕಾರ್ಯದರ್ಶಿ ಜೈಬಾ, ಎನ್‌ಸಿಸಿ ಅಧಿಕಾರಿ ಡಾ.ವಿಜಯಲಕ್ಷ್ಮೀ ಮತ್ತಿತರರು ಹಾಜರಿದ್ದರು.



ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪಠ್ಯೇತರ ಚಟುವಟಿಕೆ ಸಮಾರೋಪ ಸಮಾರಂಭವನ್ನು ನಟ ವಿಜಯರಾಘವೇಂದ್ರ ಮತ್ತು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು.

'ಜಾಜಿ ಮಲ್ಲಿಗೆ ನೋಡೆ...'

ಜಾಜಿ ಮಲ್ಲಿಗೆ ನೋಡೆ... ಸೋಜುಗದ ಹೂವೆ ನೋಡೆ... ಎನ್ನ ಮ್ಯಾಲ ಮುನಿವಾರೆ... ಕಮಲದ ಹೂ ನಿನ್ನ ಕಾಣದೆ ಇರಲಾರೆ... ಮಲ್ಲಿಗೆ ಮಾಯೆ.. ಓ... ಹೀಗೆ ವಿದ್ಯಾರ್ಥಿನಿಯರ ಅಭಿಮಾನದ ಒತ್ತಾಯದ ಮೇರೆಗೆ ವಿಜಯರಾಘವೇಂದ್ರ ತಮ್ಮ ಅಭಿನಯದ ಸಿನಿಮಾದ ಗೀತೆಯನ್ನು ಹಾಡಿದರು. ವಿಜಯ ರಾಘವೇಂದ್ರ ಹಾಡುತ್ತಿದ್ದಂತೆ ಒಂದೆಡೆ ತುಂತುರು ಮಳೆಯ ಸಿಂಚನವಾದರೆ, ಮತ್ತೊಂದೆಡೆ ವಿದ್ಯಾರ್ಥಿನಿಯರ ಅಭಿಮಾನದ ಹರ್ಷೋದ್ಗಾರ ಚಿಮ್ಮಿತು.

ಹಾಡುವ ಜೊತೆಗೆ ಡ್ಯಾನ್ಸ್ ಮಾಡುವಂತೆ ವಿದ್ಯಾರ್ಥಿನಿಯರು ಅಭಿಮಾನದಿಂದ ಒತ್ತಾಯಿಸಿದರು. ಸ್ವಲ್ಪ ಮೈಕೈ ನೋವು ಇದೆ. ಹಾಗಾಗಿ ನಿಮಗಾಗಿ ಒಂದು ಹಾಡು ಹಾಡುತ್ತೇನೆಂದು ಹೇಳಿದರು. ಬಳಿಕ ಮಾತು ಮುಂದುವರೆಸಿದ ಅವರು, ಚಿನ್ನಾರಿ ಮುತ್ತ, ನಿನಗಾಗಿ ಸಿನಿಮಾಗಳು ನಿಮ್ಮೆಲ್ಲರ ಪ್ರೀತಿ ಸಿಗುವಂತೆ ಮಾಡಿದವು. ಬಿಗ್ ಬಾಸ್ ಇನ್ನಷ್ಟು ಯಶಸ್ಸು ತಂದುಕೊಟ್ಟಿತು. ಬಿಗ್ ಬಾಸ್‌ನಲ್ಲಿ ನಾನು ಗೆದ್ದಿಲ್ಲ. ನೀವೆಲ್ಲಾ ಗೆಲ್ಲಿಸಿದ್ದೀರಿ ಎಂದು ನುಡಿದರು. ಶಾಸಕ ಕೆ.ಹರೀಶ್ ಗೌಡರು ನನ್ನನ್ನು ಮಹಾರಾಜರು ಎಂದರು. ಆದರೆ ನಾನು ಮಹಾರಾಜ, ಯುವರಾಜ ಅಲ್ಲ. ನಾನೊಬ್ಬ ಸೈನಿಕನಂತೆ ಎಂದು ಹೇಳಿದರು.

ಬಿಸಿಎ ಕೋರ್ಸ್ ಆರಂಭ

ಮೈಸೂರು: ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ 2023–24ನೇ ಸಾಲಿನಿಂದ ಬಿಸಿಎ ಕೋರ್ಸ್ ಆರಂಭಿಸಲಾಗಿದೆ. ಕಾಲೇಜಿನ ಆವರಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪಠ್ಯೇತರ ಚಟುವಟಿಕೆ ಸಮಾರೋಪ ಸಮಾರಂಭದಲ್ಲಿ ಬಿಸಿಎ ಕೋರ್ಸ್‌ನ ಪ್ರವೇಶಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು. ಪ್ರವೇಶಾತಿ ಸಂಬಂಧ ಹೆಚ್ಚಿನ ಮಾಹಿತಿಗೆ ಮೊ.ಸಂ. 90353 43717 ಅಥವಾ 87621 84347 ಸಂಪರ್ಕಿಸಬಹುದು.

ಅಧಿವೇಶನ ಮುಗಿದ ನಂತರ ಉನ್ನತ ಶಿಕ್ಷಣ ಸಚಿವರಿಂದ ಮೈಸೂರು ಪ್ರವಾಸ; ಕೆ.ಹರೀಶ್‌ಗೌಡ

ಮೈಸೂರು: ವಿಧಾನಮಂಡಲ ಅಧಿವೇಶನ ಮುಗಿದ ಬಳಿಕ ಪದವಿ ಕಾಲೇಜುಗಳ ಸಮಸ್ಯೆಗಳ ಪರಿಹಾರ ಸಂಬಂಧ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮೈಸೂರಿಗೆ ಭೇಟಿ ನೀಡಲಿದ್ದಾರೆ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದರು.

ಮಹಾರಾಣಿ ಕಲಾ ಕಾಲೇಜಿನಲ್ಲಿ ಮಾತನಾಡಿದ ಅವರು, ಮಹಾರಾಣಿ ಕಾಲೇಜು ವಿಚಾರವಾಗಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರೊಂದಿಗೆ ಮಾತನಾಡಿದ್ದೇನೆ. ಕಾಲೇಜಿನ ಸಮಸ್ಯೆಗಳು, ಕಟ್ಟಡ ನವೀಕರಣ ಸಂಬಂಧ ಮಾತನಾಡಿದ್ದು, ಹೆಚ್ಚುವರಿ ಕೊಠಡಿಗಳು ಅಗತ್ಯವೆಂದು ಗಮನಕ್ಕೆ ತಂದಿದ್ದೇನೆ. ಅವರು ಜು.21ರಂದು ಅಧಿವೇಶನ ಮುಗಿದ ನಂತರ ಮೈಸೂರಿಗೆ ಆಗಮಿಸುತ್ತೇನೆ. ಅಂದು ಕಾಲೇಜುಗಳಿಗೆ ಭೇಟಿ ನೀಡುತ್ತೇನೆ ಎಂದು ಹೇಳಿದ್ದಾರೆ. ಅವರ ಭೇಟಿ ವೇಳೆ ಈ ಕಾಲೇಜಿಗೆ ಸಂಬಂಧಿಸಿದಂತೆ ಅಗತ್ಯವಿರುವುದನ್ನು ದೊರಕಿಸಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು. ಶಾಸಕನಾದ ಮೇಲೆ ಸುಮಾರು ಕಾಲೇಜುಗಳ ಸಂಬಂಧ ಅನೇಕ ದೂರುಗಳು ಬಂದಿವೆ. ಆದರೆ ಮಹಾರಾಣಿ ಕಲಾ ಕಾಲೇಜಿನ ಬಗ್ಗೆ ಯಾವುದೇ ದೂರುಗಳು ಇಲ್ಲ. ಇದೇ ರೀತಿ ಉತ್ತಮವಾಗಿ ಕಾಲೇಜು ಮುನ್ನಡೆಯಬೇಕು ಎಂದು ಸಲಹೆ ನೀಡಿದರು.

ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಪೂರ್ಣ: ಸೋಮವಾರದ ನಂತರ ಆದೇಶ ಪತ್ರ

ಮೈಸೂರು, ಜು.15(ಎಸ್‌ಪಿಎನ್)– ಪಿಎಸ್‌ಟಿ, ಜಿಪಿಟಿ ಹಾಗೂ ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಂಡಿದೆ. 509 ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ 158 ಪ್ರೌಢಶಾಲಾ ಶಿಕ್ಷಕರು ಸೇರಿದಂತೆ ಒಟ್ಟು 667 ಶಿಕ್ಷಕರು ಈ ಬಾರಿ (2023) ವರ್ಗಾವಣೆಯಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳುವ ಮೂಲಕ ಶುಕ್ರವಾರ ಈ ಪ್ರಕ್ರಿಯೆ ತೆರೆಕಂಡಿತು.

ಪ್ರಾಥಮಿಕ ಶಾಲಾ ಸಹ ಶಿಕ್ಷಕರು 471, ಮುಖ್ಯ ಶಿಕ್ಷಕರು 15, ದೈಹಿಕ ಶಿಕ್ಷಕರು 21, ವಿಶೇಷ ಶಿಕ್ಷಕರು 2 ಸೇರಿದಂತೆ ಒಟ್ಟು 509 ಶಿಕ್ಷಕರು ವರ್ಗಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಸ್ಥಳ ಆಯ್ಕೆ ಮಾಡಿಕೊಂಡಿದ್ದಾರೆ. ಪ್ರೌಢಶಾಲಾ ವಿಭಾಗದಲ್ಲಿ ಸಹ ಶಿಕ್ಷಕರು 136, ದೈಹಿಕ ಶಿಕ್ಷಕರು 19, ವಿಶೇಷ ಶಿಕ್ಷಕರು 3 ಶಿಕ್ಷಕರು ಸೇರಿದಂತೆ ಒಟ್ಟು 158 ಶಿಕ್ಷಕರು ಸೇರಿದಂತೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ವತಿಯಿಂದ ಒಟ್ಟು 667 ಶಿಕ್ಷಕರು ಸ್ಥಳ ಆಯ್ಕೆ ಮಾಡಿಕೊಂಡಿದ್ದಾರೆ.


ಪ್ರಾಥಮಿಕ ಶಾಲಾ ವಿಭಾಗದಲ್ಲಿ 1986 ಶಿಕ್ಷಕರು, ಪ್ರೌಢಶಾಲಾ ವಿಭಾಗದಲ್ಲಿ 734 ಶಿಕ್ಷಕರು ವರ್ಗಾವಣೆಗಾಗಿ ಅರ್ಜಿ ಸಲ್ಲಿಸಿದ್ದರು. ಈ ಶಿಕ್ಷಕರು ಜು.11ರಿಂದ 14ರವರೆಗೆ ಘಟಕದೊಳಗಿನ ವರ್ಗಾವಣೆಯಲ್ಲಿ ಪಾಲ್ಗೊಂಡು ತಮಗೆ ಬೇಕಾದ ಶಾಲೆಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು ಮತ್ತು ಇತರೆ ಪದಾಧಿಕಾರಿಗಳು ಶಾಂತಿಯುತ ವರ್ಗಾವಣೆಗೆ ಸಹಕಾರ ನೀಡಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆ ಡಿಡಿಪಿಐ ಹೆಚ್.ಕೆ.ಪಾಂಡು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸೋಮವಾರದ ನಂತರ ಆದೇಶ ಪತ್ರ: ಈ ಬಾರಿ ವರ್ಗಾವಣೆಯಲ್ಲಿ ಸ್ಥಳ ಆಯ್ಕೆ ಮಾಡಿಕೊಂಡಿರುವ ಶಿಕ್ಷಕರು ಆಯಾ ತಾಲೂಕು ಬಿಇಓ ಕಚೇರಿಗೆ ಸೋಮವಾರ ನಂತರ ಭೇಟಿ ನೀಡಿ, ಆದೇಶ ಪತ್ರ ಪಡೆದುಕೊಳ್ಳಬಹುದು. ಜಿಲ್ಲೆಯೊಳಗೆ ನಡೆದಿರುವ ವರ್ಗಾವಣೆ ಪ್ರಕ್ರಿಯೆಗೆ ಶುಕ್ರವಾರ (ಜು.14) ತೆರೆ ಬಿದ್ದಿರುವ ಹಿನ್ನೆಲೆಯಲ್ಲಿ ಜಿಲ್ಲಾ ವರ್ಗಾವಣೆ ಪ್ರಾಧಿಕಾರದಿಂದ ತಾಲೂಕು ವರ್ಗಾವಣೆ ಪ್ರಾಧಿಕಾರಕ್ಕೆ ಸಂಬಂಧಪಟ್ಟ ವರ್ಗಾವಣೆ ಆದೇಶ ಪತ್ರವನ್ನು (ಶಿಕ್ಷಕರು, ಬಿಇಓ, ಆಯುಕ್ತರು ಹಾಗ ಕಚೇರಿ ಪ್ರತಿಯನ್ನು ಕಾಯ್ದಿರಿಸಿ) ತಲುಪಿಸಿ, ನಿಗದಿತ ಸಮಯದೊಳಗೆ ವರ್ಗಾವಣೆಗೊಂಡ ಶಿಕ್ಷಕರ ಹಾಜರಾತಿ/ಬಿಡುಗಡೆಗೆ ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಕಾರ್ಯಪಾಲಕ ಅಭಿಯಂತರರ ಹೆಚ್ಚುವರಿ ಪ್ರಭಾರ ಸ್ವೀಕಾರ

ಮೈಸೂರು,ಜು.15– ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮೈಸೂರು ವಿಭಾಗ ಕಚೇರಿಯ ಕಾರ್ಯಪಾಲಕ ಅಭಿಯಂತರರ ಹೆಚ್ಚುವರಿ ಪ್ರಭಾರವನ್ನು ಡಿ.ಉಮೇಶ ಚಂದ್ರ ವಹಿಸಿಕೊಂಡಿದ್ದು, ಅಧಿಕೃತವಾಗಿ ಬರುವ ಅರೆಸರ್ಕಾರಿ ಪತ್ರಗಳು, ಗೌಪ್ಯ ಪತ್ರಗಳು ಹಾಗೂ ಇತರ ಮುಖ್ಯ ಪತ್ರ ವ್ಯವಹಾರಗಳನ್ನು ಕಾರ್ಯಪಾಲಕ ಅಭಿಯಂತರರು ಕನನೀಸ ಮತ್ತು ಒಚ ಮಂಡಳಿ ವಿಭಾಗ ಕಚೇರಿ, ಜಲಭವನ, 1ನೇ ಮಹಡಿ ಪಿ–4, 10ನೇ ಹತ್ತನೇ ಮುಖ್ಯರಸ್ತೆ ಮೂರನೇ ಅಡ್ಡರಸ್ತೆ ಸರಸ್ವತಿಪುರಂ ಮೈಸೂರು–09, ದೂ.ಸಂ:0821–2543552, ಮೊ.ಸಂ: 9480813128 ಮತ್ತು ಇ–ಮೇಲ್ kwbmysdiv@gmail.com ವಿಳಾಸಕ್ಕೆ ಕಳುಹಿಸುವಂತೆ ಕನನೀಸ ಮತ್ತು ಒಳ ಮಂಡಳಿ ಮೈಸೂರು ವಿಭಾಗದ ಕಾರ್ಯಪಾಲಕ ಅಭಿಯಂತರರು ಪತ್ರಿಕಾ ಪ್ರಕಟಣೆಯಲ್ಲಿ ಕೋರಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.7.2023 ಭಾನುವಾರ, ಮಳೆ ನಕ್ಷತ್ರ: ಭರಣಿ 06.07.2023ರಿಂದ 19.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ,
ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

- **ಮಹಾರಾಜ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆರೋಗ್ಯ ಭಾರತಿ ಆವರಣ, ಗಾನಭಾರತಿ ಮುಂಭಾಗ, ಕುವೆಂಪುನಗರ, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರ ವಿಕಾರಗಳ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ
- **ವರ್ಲ್ಡ್ ಶಿಟೋರಿಯೋ ಕರಾಟೆ :** 26ನೇ ಅಖಿಲ ಭಾರತ ಶಿಟೋರಿಯೋ ಕರಾಟೆ ಚಾಂಪಿಯನ್‌ಶಿಪ್, ಸ್ಥಳ: ಸೇಂಟ್ ಫಿಲೋಮಿನಾ ಕಾಲೇಜು, ಬೆಳಗ್ಗೆ 10ಕ್ಕೆ.
- **ಜೈ ಭೀಮ್ ವಿವಿಧೋದ್ದೇಶ ಸಹಕಾರ ಸಂಘ, ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ :** ಬೃಹತ್ ಉಚಿತ ವೈದ್ಯಕೀಯ ತಪಾಸಣಾ ಶಿಬಿರ, ಸ್ಥಳ:ಶ್ರೀನಿವಾಸ ಹೆಲ್ತ್ ಕೇರ್, ನೃಪತುಂಗ ರಸ್ತೆ, ಕುವೆಂಪುನಗರ, ಬೆಳಗ್ಗೆ 10ರಿಂದ.
- **ಸುರಭಿ ಗಾನ ಕಲಾಮಂದಿರ ಚಾರಿಟೆಬಲ್ ಟ್ರಸ್ಟ್ :** ಅರಳು ಪ್ರತಿಭೆ, ಪ್ರತಿಭಾಂಕುರ – ನೂತನ ಸಂಗೀತ ಮಾಲಿಕೆ – ದ್ವಿತೀಯ ಸುಮ, ವಿದುಷಿ ಶ್ರೀಮತಿ ಮಾಲಿನಿ ರಾಮಸುಬ್ರಹ್ಮಣ್ಯ, ಬೆಂಗಳೂರು ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನ್‌ಕುಮಾರ್ –ವಯೋಲಿನ್, ವಿದ್ವಾನ್ ಎ. ರಾಧೇಶ್, ಮೈಸೂರು–ಮೃದಂಗ, ಸ್ಥಳ: ಬಡಗನಾಡು ಬಳಗ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ
- **ಕರ್ನಾಟಕ ರಾಜರ್ಷಿ ಫೌಂಡೇಷನ್:** ಕನ್ನಡ ಮಿನುಗು ಪ್ರತಿಭಾ ಪುರಸ್ಕಾರ, ಉಪಸ್ಥಿತರು : ಫೌಂಡೇಷನ್ ಅಧ್ಯಕ್ಷ ಸಿ.ಎಸ್.ಹರಿಪ್ರಸಾದ್, ಉಪಾಧ್ಯಕ್ಷ ಮಾದರಾಜೇ ಅರಸ್, ಕಾರ್ಯದರ್ಶಿ ಹೆಚ್.ಟಿ. ವೇಣುಗೋಪಾಲ್, ಸ್ಥಳ: ಮೋದಿಕೇರ್ ಕಟ್ಟಡ, 1ನೇ ಮಹಡಿ, ಜಗನ್ಮೋಹನ ಅರಮನೆ, ಬೆಳಗ್ಗೆ 10.30ಕ್ಕೆ.
- **ನಿರಂತರ ಫೌಂಡೇಶನ್:** ದೇವಕಿ ಧರ್ಮಿಷ್ಠೆಯವರ ಪುಸ್ತಕ 'ಎಲಿ ವೈಸಲ್‌ನ' ಆತ್ಮಕತೆ 'ದಿ ನೈಟ್'ನ ಕನ್ನಡಾನುವಾದ 'ದೇವರು ಎದ್ದು ಹೋದ ದಿನ' ಪುಸ್ತಕ ಬಿಡುಗಡೆ ಸಮಾರಂಭ, ಉಪಸ್ಥಿತರು: ವಿಮರ್ಶಕ ಪ್ರೊ.ನಾಗಭೂಷಣಸ್ವಾಮಿ, ಕವಿ ಆರಿಫ್ ರಾಜಾ, ರಂಗ ನಿರ್ದೇಶಕ ಪ್ರಸಾದ್ ಕುಂದೂರು, ಅಭಿರುಚಿ ಪ್ರಕಾಶನದ ಗಣೇಶ್, ಲೇಖಕಿ ದೇವಕಿ ಧರ್ಮಿಷ್ಠೆ, ಸ್ಥಳ: ಇಎಂಎಂಆರ್‌ಸಿ ಸಭಾಂಗಣ, ಬೆಳಗ್ಗೆ 10.30ಕ್ಕೆ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,** ಒಲವು ಫೌಂಡೇಷನ್: ಕನ್ನಡ ಕಸ್ತೂರಿ–2023, 2023ರ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಸಿಬಿಎಸ್‌ಇ ಪರೀಕ್ಷೆಯ ಕನ್ನಡ ವಿಭಾಗದಲ್ಲಿ ಪೂರ್ಣ ಅಂಕಗಳನ್ನು ಗಳಿಸಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ನಾವೂ ಹಾಡುತ್ತೇವೆ ಗಾಯನ ಸಂಗಮದ ಉದ್ಘಾಟನೆ, ಸಾನ್ನಿಧ್ಯ: ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ರೆ. ಫಾದರ್ ಸ್ಟ್ಯಾನಿ ಡಿ. ಅಲ್ಮೇಡ, ಸರ್ ಖಾಜಿ ಉಸ್ಮಾನ್ ಷರೀಫ್ ಸಾಬ್, ಉದ್ಘಾಟನೆ: ಶಾಸಕ ಕೆ.ಹರೀಶ್ ಗೌಡ, ನಾವೂ ಹಾಡುತ್ತೇವೆ ಗಾಯನ ಸಂಗ ಉದ್ಘಾಟನೆ: ಮಾಜಿ ಶಾಸಕ ಎಲ್.ನಾಗೇಂದ್ರ, ಕನ್ನಡ ಧ್ವಜಾರೋಹಣ: ವಿಶೇಷ ಕಾರ್ಯ ನಿರ್ವಾಹಕ ದಂಡಾಧಿಕಾರಿ ಮುತ್ತುರಾಜ್, ಅಧ್ಯಕ್ಷತೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಸಂಗೀತ ನಿರ್ದೇಶಕರಾದ ಪಳನಿ ಡಿ. ಸೇನಾಪತಿ, ಚಲನಚಿತ್ರ ನಿರ್ಮಾಪಕ ಲಯನ್ ಡಾ.ವೆಂಕಟೇಶ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ಬೆಳಗ್ಗೆ 10.30ಕ್ಕೆ.
- **ಶಿವಯೋಗ್ ದೇಸಿ ಗೋಶಾಲೆ, ವಿದ್ಯಾವಿಕಾಸ್ ಶಿಕ್ಷಣ ಸಂಸ್ಥೆಗಳು, ಡಾ.ಎಂ.ಎಚ್.ಮರಿಗೌಡ ಹಾರ್ಟಿಕಲ್ಚರಲ್ ಎಜುಕೇಷನ್ ಅಂಡ್ ರೀಸರ್ಚ್ ಫೌಂಡೇಷನ್:** ಪಾಸಿಟಿವ್ ತಮ್ಮಯ್ಯ ಅವರ ಆರೋಗ್ಯ ವಿಚಾರಧಾರೆಗಳನ್ನು ಆಧರಿಸಿದ ಕೆ.ಸಿ.ವೆಂಕಟೇಶ್ ನಿರೂಪಣೆಯ 'ನಮ್ಮ ಆರೋಗ್ಯ ನಮ್ಮ ಆಹಾರ, ನಮ್ಮ ಜವಾಬ್ದಾರಿ' ಕೃತಿ ಲೋಕಾರ್ಪಣೆ ಸಮಾರಂಭ, ಪುಸ್ತಕ ಲೋಕಾರ್ಪಣೆ: ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ಪುಸ್ತಕ ಕುರಿತು ಮಾತನಾಡುವವರು: ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ತಜ್ಞ ಕೆ.ಪಿ.ಸುರೇಶ, ಪ್ರಕೃತಿ ಚಿಕಿತ್ಸಾ ಕಾರ್ಯಕರ್ತ ಕೆ.ಎಸ್.ಗಿರಿರಾಜು, ಡಾ.ಬಿ.ಸಿ.ದೊಡ್ಡೇಗೌಡ, ಅಧ್ಯಕ್ಷತೆ: ನಿವೃತ್ತ ತೋಟಗಾರಿಕೆ ನಿರ್ದೇಶಕ ಡಾ.ಎಲ್.ಹನುಮಯ್ಯ, ಮುಖ್ಯ ಅತಿಥಿಗಳು: ಮಾಜಿ ಶಾಸಕ ವಾಸು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಉಪಸ್ಥಿತರು : ಪಾಸಿಟಿವ್ ತಮ್ಮಯ್ಯ, ಕೆ.ಸಿ. ವೆಂಕಟೇಶ್, ಡಾ. ನೀ.ಗೂ. ರಮೇಶ್, ಡಾ. ಕೆ. ಶಂಕರೇಗೌಡ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10.30ಕ್ಕೆ.
- **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಪತ್ರಕರ್ತರ ಕ್ರೀಡಾಕೂಟದ ಬಹುಮಾನ ವಿತರಣಾ ಸಮಾರಂಭ, ಮುಖ್ಯ ಅತಿಥಿಗಳು : ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಕೌಟಿಲ್ಯ ವಿದ್ಯಾಲಯ ಅಧ್ಯಕ್ಷ ಟಿ. ಬಾಬು, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸ್ಥಳ: ಸ್ಪೋರ್ಟ್ಸ್ ಪೆವಿಲಿಯನ್, ದೈಹಿಕ ಶಿಕ್ಷಣ ವಿಭಾಗ, ಸಂಜೆ 4ಕ್ಕೆ
- **ಅನ್ವೇಷಣಾ ಸೇವಾ ಟ್ರಸ್ಟ್:** ರಾಷ್ಟ್ರೀಯ ವೈದ್ಯರ ದಿನಾಚರಣೆ ಮತ್ತು ಸಾಧಕ ವೈದ್ಯರಿಗೆ ವೈದ್ಯಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಉಡುಪಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು, ಉದ್ಘಾಟನೆ: ಶ್ರೀ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್, ಅಧ್ಯಕ್ಷತೆ: ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಡಾ.ಬಿ.ಸಿ.ರಾಯ್ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಜಯದೇವ ಹೃದ್ರೋಗ ಸಂಸ್ಥೆ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಕೆ.ಎಸ್.ಸದಾನಂದ, ಮುಖ್ಯ ಅತಿಥಿಗಳು: ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ.ಹೇಮಂತ್‌ಕುಮಾರ್, ಪುಸ್ತಕ ತಾಂಬೂಲ ವಿತರಣೆ: ಡಾ.ಅರಸ್, ಸ್ಥಳ: ಗಾನಭಾರತಿ ಸಭಾಂಗಣ (ವೀಣೆ ಶೇಷಣ್ಣ ಭವನ), ಕುವೆಂಪುನಗರ, ಸಂಜೆ 4.45ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಶ್ರೀ ಶ್ರೀ ರಾಮಕೃಷ್ಣ ಆರಾತ್ರಿಕ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ರಂಗಾಯಣ :** ಮೈಸೂರಿನ ಸಮತೆಂತೋ ಕಲಾತಂಡದಿಂದ ಯು.ಆರ್. ಅನಂತಮೂರ್ತಿಯವರ ಕಾದಂಬರಿ ಆಧಾರಿತ ನಾಟಕ 'ಅವಸ್ಥೆ' ಪ್ರದರ್ಶನ, ರಂಗರೂಪ: ಪ್ರಕಾಶ್ ಬೆಳವಾಡಿ, ಸಂಗೀತ: ಸುಬ್ರಹ್ಮಣ್ಯ, ನಿರ್ದೇಶನ: ಬಿ.ಎನ್.ಶಶಿಕಲಾ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.
- **ರಂಗವಲ್ಲಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ:** ಹಿರಿಯ ರಂಗ ಕಲಾವಿದ ಮಾಯಸಂದ್ರ ಕೃಷ್ಣ ಪ್ರಸಾದ್ ರಚಿಸಿ, ನಿರ್ದೇಶಿಸಿರುವ ಪತ್ತೇದಾರಿ ಹಾಸ್ಯ ನಾಟಕ 'ತಟ್ಟೆ ಇಡ್ಲಿ ರಾದ್ಧಾಂತ' ನಾಟಕ ಪ್ರದರ್ಶನ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಕೆ.ರಘುಶೆಟ್ಟಿ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ.ಚಂದ್ರಶೇಖರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಶ್ರೀರಾಂಭಟ್, 9.05 ವಸುಸದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.40 ನಮ್ಮ ಆರೋಗ್ಯ–ಎಂಡೋಕ್ರೈನಾಲಜಿಸ್ಟ್ ತಜ್ಞರನ್ನು ಯಾವ ಸಂದರ್ಭಗಳಲ್ಲಿ ಭೇಟಿ ಮಾಡಬೇಕು–ಕುರಿತು ಡಾ.ಲಕ್ಷ್ಮೀ ನಾಗೇಂದ್ರ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಶ್ರೀ ಗುರುಕ್ಲಾ ಶಾಲೆಯ ಮಕ್ಕಳಿಂದ ಕಾರ್ಯಕ್ರಮ, 10.30 ಮಕ್ಕಳ ಮಂಟಪ–ನಂದ ಗೋಕುಲ, ಪ್ರಸ್ತುತಿ–ಕೆ.ಬಿ.ಮೀನಾ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ರೇಖಾ ವೆಂಕಟೇಶ್, 12.45 ಜನಪದ ಸಂಗೀತ–ಜಯಮ್ಮ ಮತ್ತು ಸಂಗಡಿಗರು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಕೆ.ಆರ್.ಹರ್ಷದೀಪ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಸ್ವರಾಜ್–ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಶೂರ ಪದ್ಮಾಸುರ ಕಾಳಗ, ಪ್ರಸ್ತುತಿ–ನೀಲಾವರ ಲಕ್ಷ್ಮೀನಾರಾಯಣರಾವ್ ಮತ್ತು ಬಳಗದವರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಪಶುರಂಗ–ಪ್ರಾಣಿ ಜನ್ಯ ರೋಗಗಳ ನಿಯಂತ್ರಣ ಕುರಿತು ಡಾ.ಎಂ.ರಂಜನ್ ಅವರೊಂದಿಗೆ ಸಂದರ್ಶನ ಸಂದರ್ಶಕರು–ಎನ್.ಕೇಶವಮೂರ್ತಿ, 8.00 ವಿಶಿಷ್ಟ ವ್ಯಕ್ತಿ–ವಿಶೇಷ ಯತ್ನ, ಬಾನುಲಿ ಸರಣಿ "ಓರಿಗೆಮಿ ಅಥವಾ ಕಾಗದ ಕಲೆಯ ಪರಿಚಾರಕ ಹೆಚ್.ವಿ.ಮುರಳೀಧರ ಅವರೊಂದಿಗೆ ಸಂವಾದ, ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 9.30 ರಾಷ್ಟ್ರೀಯ ನಾಟಕ "ಮಂತ್ರ", ಮೂಲಕಥೆ–ಪ್ರೇಮ್‌ಚಂದ್, ಬಾನುಲಿ ನಾಟಕ ರೂಪ–ಬಿ.ಆರ್. ನಾಗರ್, ಕನ್ನಡಾನುವಾದ–ಸೌಭಾಗ್ಯಲಕ್ಷ್ಮಿ, ನಿರ್ದೇಶನ ಹಾಗೂ ನಿರ್ಮಾಣ–ಪ್ರಭುಸ್ವಾಮಿ ಮಳಿಮಠ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಶಾಲ್ಮಲೀ ಜೋಶಿ–ಗಾಯನ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 16 ಭಾನುವಾರ 2023

ಸಂಪುಟ: 44 | ಸಂಚಿಕೆ: 91 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4



ಜು.19ರಿಂದ ಗೃಹಲಕ್ಷ್ಮಿ ನೋಂದಣಿ

- ಆಗಸ್ಟ್ 16 ಇಲ್ಲ 17ರಂದು ಯಜಮಾನಿ ಖಾತೆಗೆ 2000 ರೂ. ಸಂದಾಯ
- ನೋಂದಣಿ ಮಾಹಿತಿಗೆ ಕರೆ ಮಾಡಿ 1902 ಇಲ್ಲವೇ 8147500500 ಈ ನಂಬರ್‌ಗೆ ಎಸ್‌ಎಂಎಸ್ ಇಲ್ಲವೇ ವಾಟ್ಸಾಪ್ ಕಳಿಸಿ





ಬೆಂಗಳೂರು, ಜು.15(ಕೆಎಂಶಿ)–ಕುಟುಂಬದ ಮನೆಯೊಡತಿಗೆ ಮಾಸಿಕ ಎರಡು ಸಾವಿರ ನೀಡುವ ಗೃಹಲಕ್ಷ್ಮಿ ಯೋಜನೆಗೆ ಜುಲೈ 19ರಿಂದ ನೋಂದಣಿ ಆರಂಭವಾಗಲಿದೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಎಪಿಎಲ್, ಬಿಪಿಎಲ್ ಪಡಿತರ ಚೀಟಿ ಕುಟುಂಬದ ಯಜಮಾನಿ ಯಾರು ಎಂದು ನಿರ್ಧರಿಸಿದವರಿಗೆ ಯೋಜನೆ ಲಭ್ಯವಾಗುತ್ತದೆ ಎಂದರು.

ಕಳೆದ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಕಾಂಗ್ರೆಸ್ ನೀಡಿದ್ದ ಐದು ಗ್ಯಾರಂಟಿಗಳಲ್ಲಿ ಈಗಾಗಲೇ ಮೂರು ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಲಾಗಿದ್ದು, ಗೃಹಲಕ್ಷ್ಮಿ ಯೋಜನೆಗೆ ಫಲಾನುಭವಿಗಳು ಈ 19ರಿಂದ ನೋಂದಣಿ ಮಾಡಿಕೊಳ್ಳಬಹುದು ಎಂದರು. ಆಗಸ್ಟ್ 16 ಇಲ್ಲವೇ 17ರಿಂದ ಫಲಾನುಭವಿಗಳ ಖಾತೆಗೆ ಎರಡು ಸಾವಿರ ರೂ. ವರ್ಗಾವಣೆಯಾಗಲಿದೆ. ಈ ಯೋಜನೆ ಉದ್ಘಾಟನೆಗೆ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕಿ ಸೋನಿಯಾಗಾಂಧಿ ಇಲ್ಲವೇ ಪ್ರಿಯಾಂಕಾ ಗಾಂಧಿ ಚಾಲನೆ ಮಾಡುವ ಸಾಧ್ಯತೆ ಇದೆ. ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಪಕ್ಷದ ವರಿಷ್ಠರ ಸಂಪರ್ಕ ಮಾಡಿದ್ದಾರೆ ಎಂದರು.

ಜುಲೈ 19 ರಿಂದ ಯೋಜನೆಗೆ ಫಲಾನುಭವಿಗಳು ಅರ್ಜಿ ಹಾಕುವ ದಿನ ಆರಂಭಗೊಳ್ಳಲಿದ್ದು, ಇದಕ್ಕೆ ಅಂತಿಮ ಗಡುವು ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಕುಟುಂಬದ ಯಜಮಾನಿಯ ಪತಿ ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಪಾವತಿಸುತ್ತಿದ್ದರೆ, ಅಂತಹವರಿಗೆ ಯೋಜನೆ ಲಭ್ಯವಿರುವುದಿಲ್ಲ. ಅವರನ್ನು ಹೊರತುಪಡಿಸಿ, ಎಲ್ಲರಿಗೂ ಅವಕಾಶವಿರುತ್ತದೆ. ಯಜಮಾನಿ ಮಹಿಳೆಗೆ ಎಸ್‌ಎಂಎಸ್ ಮೂಲಕ ನೋಂದಣಿ ದಿನ, ● 9ನೇ ಪುಟಕ್ಕೆ



ವೀರಶೈವ ಲಿಂಗಾಯತ ಸಮುದಾಯದ ಎಲ್ಲಾ ಉಪ ಪಂಗಡಗಳಿಗೆ ಮೀಸಲಾತಿ

- ಸಮುದಾಯದ ಮುಖಂಡರೂ ಆದ ಅರಣ್ಯ ಸಚಿವ ಈಶ್ವರ ಖಂಡ್ರೆ ಪ್ರತಿಪಾದನೆ
- 12ನೇ ಶತಮಾನದಲ್ಲೇ ಸಾಮಾಜಿಕ ನ್ಯಾಯ ಕಲ್ಪಿಸಿದ ಸಮುದಾಯವೇ ಈಗ ತಾನೇ ನ್ಯಾಯ ಕೇಳುವಂತಾಗಿದೆ!

ಹೆಚ್.ಡಿ.ಕೋಟೆ, ಜು.15– ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ವೀರಶೈವ ಲಿಂಗಾಯತ ಸಮುದಾಯದ ಎಲ್ಲಾ ಉಪ ಪಂಗಡಗಳನ್ನು ಕೇಂದ್ರ ಸರ್ಕಾರ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡಿ, ಮೀಸಲಾತಿ ಕಲ್ಪಿಸಬೇಕಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಪ್ರತಿಪಾದಿಸಿದ್ದಾರೆ.

ಪಟ್ಟಣದ ಶ್ರೀ ಶಿವರಾತ್ರೀಶ್ವರ ಕಲ್ಯಾಣ ಮಂಟಪದ ಆವರಣದಲ್ಲಿ ಶನಿವಾರ ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕು ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಹಮ್ಮಿಕೊಂಡಿದ್ದ ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಕಲ ಜೀವಾತ್ಮರಿಗೂ ಲೇಸನ್ನೇ ಬಯಸಿ, 12ನೇ ಶತಮಾನದಲ್ಲೇ ಎಲ್ಲರಿಗೂ ಸಾಮಾಜಿಕ ನ್ಯಾಯ ನೀಡಿದ ವೀರಶೈವ ಮತ್ತು ಲಿಂಗಾಯತ ಸಮುದಾಯವೇ ಇಂದು ಸಾಮಾಜಿಕ ನ್ಯಾಯ ಕೇಳುವ ಸ್ಥಿತಿ ಬಂದಿದೆ ಎಂದು ವಿಷಾದಿಸಿದರು.

ವಿಶ್ವಗುರು ಬಸವಣ್ಣನವರು 12ನೇ ಶತಮಾನದಲ್ಲಿ ಮಾಡಿದ ಸುಧಾರಣೆ ಇಡೀ ವಿಶ್ವಕ್ಕೇ ಮಾದರಿಯಾಗಿದೆ. ಈ ರಾಜ್ಯಕ್ಕೆ ವೀರಶೈವ ಲಿಂಗಾಯತ ಮಠ–ಮಾನ್ಯಗಳು ನೀಡಿರುವ ಕೊಡುಗೆ ಅಪಾರವಾದದ್ದು, 'ಇವನಾರವ, ಇವನಾರವ ನೆಂದೆನಿಸದಿರಯ್ಯಾ, ಇವ ನಮ್ಮವ ಇವ ನಮ್ಮವ' ಎನ್ನುವ ಉದಾತ್ತ ಚಿಂತನೆಯನ್ನು ಬಸವಣ್ಣನವರು ನೀಡಿದ್ದಾರೆ. ಎಲ್ಲಾ ಜಾತಿ, ಜನಾಂಗ, ಸಮುದಾಯದವರನ್ನೂ ನಮ್ಮೊಂದಿಗೆ ಕರೆದುಕೊಂಡು ಮುಂದೆ ಸಾಗಬೇಕು ಎಂದು ಸಚಿವರು ಕರೆ ನೀಡಿದರು. ಮೂರನೆಯ ಬಾರಿಗೆ ಹೆಚ್.ಡಿ.ಕೋಟೆಗೆ ಆಗಮಿಸುತ್ತಿರುವ ನಾನು, ಪ್ರಸ್ತುತ ● 6ನೇ ಪುಟಕ್ಕೆ


ಮೈಸೂರು ಸೇರಿ ಕರ್ನಾಟಕದ ಐದು ನಗರಗಳು ಪ್ಲಾಸ್ಟಿಕ್ ಮುಕ್ತ ಮಾಡುತ್ತೇವೆ

- ಅರಣ್ಯ, ಜೀವಶಾಸ್ತ್ರ ಹಾಗೂ ಪರಿಸರ ಸಚಿವ ಈಶ್ವರ ಖಂಡ್ರೆ ಘೋಷಣೆ
- ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಬಟ್ಟೆ ಬ್ಯಾಗ್ ಬಳಕೆಗೆ ಸಚಿವರ ಸಲಹೆ

ಮೈಸೂರು, ಜು.15(ಬಿಎಲ್‌ಯು)– ಮೈಸೂರು ಸೇರಿದಂತೆ ಕರ್ನಾಟಕದ ಐದು ನಗರಗಳನ್ನು ಮೊದಲ ಹಂತದಲ್ಲಿ ಪ್ಲಾಸ್ಟಿಕ್ ಮುಕ್ತ ಮಾಡಲಾಗುವುದು ಎಂದು ಅರಣ್ಯ, ಜೀವಶಾಸ್ತ್ರ ಹಾಗೂ ಪರಿಸರ ಸಚಿವ ಈಶ್ವರ ಖಂಡ್ರೆ ತಿಳಿಸಿದರು.




ಮೈಸೂರಿನ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದ ನಂತರ ಈಶ್ವರ ಖಂಡ್ರೆ ಅವರು ಮಾಧ್ಯಮಗಳಿಗೆ ಈ ವಿಚಾರ ತಿಳಿಸಿದರು. ಪ್ಲಾಸ್ಟಿಕ್ ಬಹಳ ಅಪಾಯಕಾರಿ ವಸ್ತು. ನೀರಿನಲ್ಲಿ ಹಾಗೂ ಮಣ್ಣಿನಲ್ಲಿ ಇದು ● 6ನೇ ಪುಟಕ್ಕೆ



ನಾಳೆ, ನಾಳಿದ್ದು ಬೆಂಗಳೂರಲ್ಲಿ 26 ವಿಪಕ್ಷಗಳ ಪ್ರಮುಖ ನಾಯಕರ ಸಭೆ

ಬಿಜೆಪಿ ವಿರುದ್ಧ ಸೆಣಸಲು ಮತ್ತೆ ವಿರೋಧಿ ಪಡೆ ಸಜ್ಜು



- ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಸಭೆ ಆಯೋಜನೆ
- ಬೆಂಗಳೂರು ಐಷಾರಾಮಿ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಸಭೆ
- ಸೋನಿಯಾ ಗಾಂಧಿ ಪಾಲ್ಗೊಳ್ಳುವ ನಿರೀಕ್ಷೆ; ಮೊದಲ ಸಭೆ ಜೂನ್ 23ರಂದು ಪಾಟ್ನಾದಲ್ಲಿ ಬಿಹಾರ ಸಿಎಂ ನಿತೀಶ್ ಕುಮಾರ್ ನೇತೃತ್ವದಲ್ಲಿ ನಡೆದಿತ್ತು

ಬೆಂಗಳೂರು, ಜು.15 (ಕೆಎಂಶಿ)– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ವಿರುದ್ಧ ಪ್ರತಿಪಕ್ಷಗಳನ್ನು ಒಗ್ಗೂಡಿಸಲು ಕಾಂಗ್ರೆಸ್ ಜುಲೈ 17 ಮತ್ತು 18ರಂದು ನಗರದಲ್ಲಿ ವಿಪಕ್ಷಗಳ ಪ್ರಮುಖರ ನಾಯಕರ ಸಭೆ ಆಯೋಜಿಸಿದೆ.

ಪ್ರಧಾನಿ ಮೋದಿ ಅವರಿಗೆ ಪರ್ಯಾಯವಾಗಿ ವರ್ಚಸ್ವಿ ನಾಯಕನ ಆಯ್ಕೆ ಮತ್ತು ಸಂಘಟನಾತ್ಮಕವಾಗಿ ಎನ್‌ಡಿಎ ವಿರುದ್ಧ ಹೋರಾಡಲು ಈ ಸಭೆ ಭೂಮಿಕೆ ಸಿದ್ಧಪಡಿಸಲಿದೆ.

ಕಾಂಗ್ರೆಸ್‌ನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 26 ರಾಷ್ಟ್ರೀಯ ಪಕ್ಷಗಳ ಪ್ರಮುಖ ನಾಯಕರನ್ನು ಆಹ್ವಾನಿಸಿದ್ದಾರೆ. ನಗರದ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಎರಡು ದಿನಗಳ ಕಾಲ ಸಭೆ ಜರುಗಲಿದ್ದು, ಸೋಮವಾರ ಸಂಜೆ 4 ಗಂಟೆಯಿಂದಲೇ ಮೊದಲ ಸಭೆ ಆರಂಭವಾಗಲಿದೆ. ಈ ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಬೆಂಗಳೂರಿನಲ್ಲಿ ನಡೆಯಲಿರುವ ಏಕತಾ ಸಭೆಯಲ್ಲಿ ಭಾಗವಹಿಸಲು ಮಲ್ಲಿಕಾರ್ಜುನ ಖರ್ಗೆ ಈ 26 ಪಕ್ಷಗಳ ನಾಯಕರಿಗೆ ಸಂಪರ್ಕ ಮಾಡಿ, ಖುದ್ದು ಆಹ್ವಾನ ನೀಡುವ ಜೊತೆಗೆ ಪತ್ರದ ಮೂಲಕವೂ ಮನವಿ ಮಾಡಿಕೊಂಡಿದ್ದಾರೆ. ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಜೂನ್ 23 ರಂದು ಪಾಟ್ನಾದಲ್ಲಿ ವಿರೋಧ ಪಕ್ಷದ ನಾಯಕರ ಸಭೆ ನಡೆಸಿದ್ದರು. ಅದಾದ ನಂತರ ವಿರೋಧಿಗಳನ್ನು ಸಂಘಟಿಸಲು ಈ ಸಭೆ ಆಯೋಜಿಸಿದ್ದೇನೆ ಎಂದಿದ್ದಾರೆ.

ನಮ್ಮ ಪ್ರಜಾಸತ್ತಾತ್ಮಕ ರಾಜಕೀಯಕ್ಕೆ ಧಕ್ಕೆ ತರುವ ಹಲವಾರು ಪ್ರಮುಖ ವಿಷಯಗಳ ಕುರಿತು ಚರ್ಚಿಸಲು, ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಹೋರಾಡಲು ಸರ್ವಾನುಮತದ ಒಪ್ಪಂದಕ್ಕೆ ಬಂದಿದ್ದರಿಂದ ಅಂದಿನ ಸಭೆ ಯಶಸ್ವಿ ಕಂಡಿದೆ. ಪಾಟ್ನಾ ಸಭೆಯಲ್ಲೇ ಜುಲೈನಲ್ಲಿ ಮತ್ತೆ ಸಭೆ ಸೇರುವ ತೀರ್ಮಾನ ಕೈಗೊಂಡಿದ್ದೇವು. ಅದರಂತೆ ಬೆಂಗಳೂರಿನಲ್ಲಿ ಸಭೆ ಆಯೋಜಿಸಿದ್ದೇನೆ. ಪಾಟ್ನಾದಲ್ಲಿ ನಡೆಸಿದ ಚರ್ಚೆಗಳನ್ನು ಮುಂದುವರೆಸುವುದು, ನಾವು ಸೃಷ್ಟಿಸಿದ ವೇಗವನ್ನು ಮುಂದುವರೆಸುವುದು ಮುಖ್ಯವಾಗಿದೆ. ನಮ್ಮ ರಾಷ್ಟ್ರ ● 6ನೇ ಪುಟಕ್ಕೆ



ಬರ್ತ್‌ಡೇ ಪಾರ್ಟಿಗಾಗಿ ಕೆಆರ್‌ಎಸ್ ಹಿನ್ನೀರಿಗೆ ತೆರಳಿದ್ದ ಐವರು ವಿದ್ಯಾರ್ಥಿಗಳಲ್ಲಿ ಮೂವರು ಜಲಸಮಾಧಿ

ಮೈಸೂರು, ಜು. 15– ಹುಟ್ಟುಹಬ್ಬದ ಪಾರ್ಟಿಗಾಗಿ ಕೆಆರ್‌ಎಸ್ ಹಿನ್ನೀರಿಗೆ ತೆರಳಿದ್ದ ಮೂವರು ವಿದ್ಯಾರ್ಥಿಗಳು ಜಲಸಮಾಧಿಯಾದ ಘಟನೆ ಮೈಸೂರು ತಾಲೂಕು ಇಲವಾಲ ಹೋಬಳಿ ಮೀನಾಕ್ಷಿಪುರ ಗ್ರಾಮದ ಕೆಆರ್‌ಎಸ್ ಹಿನ್ನೀರಿನಲ್ಲಿ ಶನಿವಾರ ಸಂಜೆ ಸಂಭವಿಸಿದೆ.

ಪಡುವಾರಹಳ್ಳಿ ನಿವಾಸಿ ಗುತ್ತಿಗೆದಾರ ದೇವೇಗೌಡ ಮತ್ತು ಪಾರ್ವತಿ ದಂಪತಿ ಪುತ್ರ ಭರತ್(20), ರಾಮಕೃಷ್ಣನಗರದ ನೋಯೆಲ್ ಎಂಬುವರ ಪುತ್ರ ಪ್ರವೀಣ್ ನೋಯೆಲ್(20) ಮತ್ತು ಮೂಲತಃ ಬಲ್ಲೇನಹಳ್ಳಿಯವರಾಗಿದ್ದು, ಹಾಲಿ ಹೆಬ್ಬಾಳಿನ ಸೂರ್ಯ ಬೇಕರಿ ಬಳಿ ವಾಸವಿರುವ ಪಾಪಣ್ಣ ಎಂಬುವರ ಪುತ್ರ ವರುಣ್(21) ನೀರುಪಾಲಾದವರಾಗಿದ್ದು, ಇವರೊಂದಿಗೆ ತೆರಳಿದ್ದ ಸ್ನೇಹಿತರಾದ ಮನೋಜ್ ಮತ್ತು ವಿಘ್ನೇಶ್ ಬದುಕುಳಿದಿದ್ದಾರೆ.


ಭರತ್

ವಿವರ: ಪಡುವಾರಹಳ್ಳಿಯ ಗುತ್ತಿಗೆದಾರ ದೇವೇಗೌಡರ ಪುತ್ರ ಭರತ್ ಕಳೆದ 2 ದಿನದ ಹಿಂದೆ ಹುಟ್ಟುಹಬ್ಬ ಆಚರಿಸಿಕೊಂಡಿದ್ದ. ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಪದವಿ ವ್ಯಾಸಂಗ ಮಾಡುತ್ತಿರುವ ಭರತ್ ತನ್ನ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ತನ್ನ ಸಹಪಾಠಿಗಳಿಗೆ ಪಾರ್ಟಿ ಕೊಡಲು ಶನಿವಾರ ಸಂಜೆ ಮೀನಾಕ್ಷಿಪುರದ ಕೆಆರ್‌ಎಸ್ ಹಿನ್ನೀರಿಗೆ ಕರೆದೊಯ್ದಿದ್ದಾನೆ. ಒಟ್ಟು ಐವರು ತೆರಳಿದ್ದು, ಎಲ್ಲರೂ ಸಂಜೆ 4.30ರ ಸುಮಾರಿನಲ್ಲಿ ನೀರಿಗಿಳಿದಿದ್ದಾರೆ. ಈ ವೇಳೆ ವಿಘ್ನೇಶ್ ಮೊಬೈಲ್ ಅನ್ನು ನದಿ ದಡದಲ್ಲಿಟ್ಟು ಬರುವುದಾಗಿ ತಿಳಿಸಿ, ನೀರಿಗೆ ಇಳಿಯದೇ ತನ್ನ ಬಟ್ಟೆಗಳಿರುವ ಸ್ಥಳಕ್ಕೆ ಬಂದಿದ್ದಾನೆ. ಈ ವೇಳೆ ನಾಲ್ವರೂ ನೀರಿನಲ್ಲಿ ಮುಳುಗುತ್ತಿದ್ದು, ಈಜು ಬರುತ್ತಿದ್ದ ಮನೋಜ್ ಈಜಿ ದಡ ಸೇರಿದರೆ ಉಳಿದ ಮೂವರು ಮುಳುಗಿ, ಸಾವನ್ನಪ್ಪಿದ್ದಾರೆ. ಈಜುಗಾರರು ಭರತ್‌ನ ಮೃತದೇಹವನ್ನು ನೀರಿನಿಂದ ಹೊರ ತೆಗೆದಿದ್ದು, ಕತ್ತಲು ಆವರಿಸಿದ್ದರಿಂದ ಕಾರ್ಯಾಚರಣೆ ಸ್ಥಗಿತಗೊಂಡಿದೆ. ಈ ಸಂಬಂಧ ಇಲವಾಲ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಶಾಂತರಾಜು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

ಸೋಮವಾರ ಕುಮಾರಸ್ವಾಮಿ ದೆಹಲಿಗೆ: ಎನ್‌ಡಿಎ ಸೇರ್ಪಡೆ ಬಗ್ಗೆ ಚರ್ಚೆ ಸಾಧ್ಯತೆ

ಬೆಂಗಳೂರು: ಲೋಕಸಭೆ ಚುನಾವಣೆಗೆ ಬಿಜೆಪಿ–ಜೆಡಿಎಸ್ ಮೈತ್ರಿ ಚರ್ಚೆ ನಡೆಯುತ್ತಿದೆ. ಮಂಗಳವಾರ ನಡೆಯಲಿರುವ NDA ಮೈತ್ರಿಕೂಟಗಳ ಸಭೆಗೆ ಕುಮಾರಸ್ವಾಮಿ ಭಾಗವಹಿಸಲಿದ್ದಾರೆ ಎನ್ನಲಾಗುತ್ತಿದ್ದು, ದೋಸ್ತಿ ರಾಜಕೀಯ ಗರಿಗೆದರಿದೆ.



ಲೋಕಸಭೆ ಚುನಾವಣೆಗೆ ಬಿಜೆಪಿ–ಜೆಡಿಎಸ್ ಮೈತ್ರಿ ಆಗಬಹುದು ಎಂಬ ಚರ್ಚೆಗಳು ನಡೆಯುತ್ತಿದೆ. ಮೊನ್ನೆಯಷ್ಟೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ವಿಧಾನಸಭೆ ಸದನದಲ್ಲಿ ಪ್ರಧಾನಿ ಮೋದಿಯವರ ಜೊತೆ 4 ವರ್ಷಗಳ ಹಿಂದಿನ ಮಾತುಕತೆ ರಹಸ್ಯ ಬಯಲು ಮಾಡಿದ್ದರು. ಕುಮಾರಸ್ವಾಮಿ ಅವರ ಈ ನಡೆ ಈಗ ದೋಸ್ತಿಯ ಬಗೆಗಿನ ಚರ್ಚೆ ಗರಿಗೆದರುವಂತೆ ಮಾಡಿದೆ. ಕುಮಾರಸ್ವಾಮಿ ಅವರ ಈ ನಡೆ ಮುಂದಿನ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಆಗಬಹುದು ಎಂಬ ಚರ್ಚೆಯನ್ನೂ ಹುಟ್ಟು ಹಾಕಿದೆ.

ಬಿಜೆಪಿ ಜೊತೆ ಮೈತ್ರಿ ಎಂಬ ಚರ್ಚೆಗಳು ನಡೆಯುತ್ತಿರುವ ಬೆನ್ನಲ್ಲೆ NDA ಸಭೆಗೆ ಮಾಜಿ ಸಿಎಂ ಕುಮಾರಸ್ವಾಮಿ ಹೋಗುತ್ತಾರಾ ಎಂಬ ಪ್ರಶ್ನೆಗಳು ಆರಂಭವಾಗಿದೆ. ಜುಲೈ 18ರಂದು ದೆಹಲಿಯಲ್ಲಿ NDA ಮೈತ್ರಿ ಕೂಟಗಳ ಸಭೆ ಇದೆ. ಈ ಸಭೆಗೆ ಭಾಗವಹಿಸುವ ಹಿನ್ನೆಲೆಯಲ್ಲಿ ಸೋಮವಾರ ದೆಹಲಿಗೆ ಹೆಚ್‌ಡಿಕೆ ಹೋಗುತ್ತಾರೆ ಎನ್ನಲಾಗುತ್ತಿದೆ.

ದೆಹಲಿಯಲ್ಲಿ ಸೋಮವಾರ ಕೇಂದ್ರ ನಾಯಕರ ಜೊತೆ ಚರ್ಚೆ ಆಗಬಹುದು ಎಂದು ಜೆಡಿಎಸ್ ಮೂಲಗಳು ಹೇಳುತ್ತಿವೆ. ಎಲ್ಲವೂ ಅಂದುಕೊಂಡಂತೆ ಆದರೆ ಮಂಗಳವಾರದ ಸಭೆಗೆ ಕುಮಾರಸ್ವಾಮಿ ಹಾಜರಾಗಿ, NDA ಮೈತ್ರಿ ಕೂಟ ಸೇರಬಹುದು ಎನ್ನಲಾಗುತ್ತಿದೆ.

ತನ್ನ ಪಾಲಿನ 40 ಟಿಎಂಸಿ ನೀರಿಗೆ ತಮಿಳ್ನಾಡು ಪಟ್ಟು

ಕರ್ನಾಟಕಕ್ಕೆ ನೀರು ಬಿಡಲು ಸೂಚನೆ ನೀಡುವಂತೆ ಕಾವೇರಿ ನಿರ್ವಹಣಾ ಮಂಡಳಿಗೆ ಮನವಿ



- ಕೆಆರ್‌ಎಸ್, ಕಬಿನಿಯಲ್ಲಿ ಕುಡಿಯಲು ಅಗತ್ಯವಿರುವಷ್ಟು ನೀರಿದೆ
- ಡೆಡ್ ಸ್ಟೋರೇಜ್ ಬಿಟ್ಟರೆ ಇನ್ನು 18 ಟಿಎಂಸಿ ಶೇಖರಣೆ
- ತಮಿಳುನಾಡಿನ ಮೆಟ್ಟೂರು ಅಣೆಕಟ್ಟೆಯಲ್ಲಿ 60 ಟಿಎಂಸಿ ನೀರು ಸಂಗ್ರಹವಿದ್ದು, ಮುಂದಿನ ಬೆಳೆಗಾಗಿ ನೀರು ಪಡೆಯುವ ಹುನ್ನಾರ

ಮೈಸೂರು, ಜು.15(ಬಿಎಲ್‌ಯು)– ಕಾವೇರಿ ಜಲಾನಯನ ಪ್ರದೇಶದಲ್ಲಿ ಸಮರ್ಪಕ ಮಳೆಯಾಗದೆ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯ ಬರಿದಾಗುವ ಭೀತಿ ಎದುರಾಗಿದ್ದು, ಇದರ ನಡುವೆ ತಮಿಳುನಾಡು ಸರ್ಕಾರ ನೀರು ಬಿಡುವಂತೆ ಕ್ಯಾತೆ ತೆಗೆದಿದೆ.

ಇಷ್ಟೊತ್ತಿಗೆ ಕೆಆರ್‌ಎಸ್, ಕಬಿನಿ ಸೇರಿದಂತೆ ಹಲವು ಜಲಾಶಯಗಳು ತುಂಬಿತುಳುಕಬೇಕಿತ್ತು ಆದರೆ ಮುಂಗಾರು ಕೈಕೊಟ್ಟಿದ್ದರಿಂದ ಜಲಾಶಯಗಳು ಬರಿದಾಗುತ್ತಿವೆ. ಕಳೆದ ವಾರ ಸ್ವಲ್ಪಮಟ್ಟಿನ ಮಳೆಯಾಗಿದ್ದರಿಂದ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಗಳಿಗೆ ಅಲ್ಪ ಪ್ರಮಾಣದ ನೀರು ಹರಿದು ಬಂದಿದೆ. ಆದರೆ ನಂತರದಲ್ಲಿ ಎಲ್ಲಿಯೂ ಮಳೆಯಾಗುತ್ತಿಲ್ಲ. ಪರಿಣಾಮ ಮೈಸೂರು, ಬೆಂಗಳೂರು ಹಾಗೂ ಮಂಡ್ಯ ಜಿಲ್ಲೆ ಜನರಿಗೆ ಕುಡಿಯಲು ಪೂರೈಸುವಷ್ಟು ಮಾತ್ರ ನೀರಿದೆ. ಇದರ ಮಧ್ಯೆ ಕಾವೇರಿ ನ್ಯಾಯಾಧೀಕರಣದ ತೀರ್ಪಿನಂತೆ ನೀರು ಬಿಡಲು ಕರ್ನಾಟಕ ಸರ್ಕಾರಕ್ಕೆ ಸೂಚನೆ ನೀಡುವಂತೆ ತಮಿಳುನಾಡು ಸರ್ಕಾರ ದೆಹಲಿಯ ಕಾವೇರಿ ನಿರ್ವಹಣಾ ಮಂಡಳಿಗೆ ಮನವಿ ಮಾಡಿದೆ. ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಸದ್ಯ 89 ಅಡಿಯಷ್ಟು ನೀರಿದೆ. ● 9ನೇ ಪುಟಕ್ಕೆ

ನೀರು ಬಿಡುವುದು ಅಸಾಧ್ಯ

ಮಂಡ್ಯ, ಜು.15– ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯೇ ಆಗಿಲ್ಲ. ಆದರೆ ತಮಿಳುನಾಡು ಕಾವೇರಿ ನಿರ್ವಹಣಾ ಮಂಡಳಿ ಮುಂದೆ ನೀರು ಕೇಳಿದೆ. ಇಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಇದ್ದು, ಪ್ರಸ್ತುತ ನೀರು ಬಿಡುವುದು ಅಸಾಧ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು. ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಳೆ ಸಮರ್ಪಕವಾಗಿ ಆಗದೇ ರೈತರ ಬೆಳೆಗೂ ತೊಂದರೆ ಆಗುತ್ತಿದೆ. ಈ ಬಗ್ಗೆ ಮುಖ್ಯಮಂತ್ರಿ ಹಾಗೂ ನೀರಾವರಿ ಸಚಿವರ ಜೊತೆ ಚರ್ಚಿಸುತ್ತೇನೆ. ತಮಿಳುನಾಡಿನವರು ವಾಡಿಕೆ ಪ್ರಕಾರ ಬಿಡಬೇಕಾದ ನೀರನ್ನು ಕೇಳಿದ್ದಾರೆ. ನಮಗೆ ಕುಡಿಯುವ ನೀರಿಗೆ ಸಮಸ್ಯೆ ಇರುವಾಗ ತಮಿಳುನಾಡಿಗೆ ನೀರು ಬಿಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.



ಭ್ರಷ್ಟಾಚಾರಕ್ಕೆ ಜಾತಿ ಇದೆ ಎಂದು ಹೇಳಿಲ್ಲ: ಭ್ರಷ್ಟಾಚಾರಕ್ಕೆ ಜಾತಿ ಇದ್ಯಾ ಎಂಬ ಕುಮಾರಸ್ವಾಮಿ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿ, ನಾನು ● 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಅತ್ತೆ : ಏನಮ್ಮ? ಚಪಾತಿ ಹಿಟ್ಟಿನ ಮೇಲೆ 'ದೇವರ ಫಂಟೆ' ಯಾಕೆ ಇಟ್ಟಿದ್ದೀಯಾ?

ಸೊಸೆ : ಅಡುಗೆ ಬುಕ್‌ನಲ್ಲಿ ಕೊಟ್ಟಿದ್ದಾರೆ. ಹಿಟ್ಟು ಕಲಸಿ ಒಂದು ಘಂಟೆ ಇಡಿ ಅಂತ!

ಮೈಸೂರು ಮಿತ್ರ

ಭಾನುವಾರ, 16 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಪ್ರಯತ್ನಿಸುವವರೆಗೂ ತಾವು ಏನು ಮಾಡಬಹುದೆಂದು ಯಾರಿಗೂ ತಿಳಿಯದು– –ಸೈರಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕೆ ಪರದಾಡಿದಂತೆ

ನಿಮ್ಮ ಪತ್ರಗಳು

ಸಮುದಾಯ ಆರೋಗ್ಯ ಕೇಂದ್ರಕ್ಕೆ ಮೂಲಸೌಕರ್ಯ ಒದಗಿಸಿ

ಮಾನ್ಯರೆ,

ಚನ್ನಪಟ್ಟಣ ತಾಲೂಕಿನ ಅಕ್ಕೂರು ಹೊಸಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೆಡವಿ ಸುಮಾರು 8 ತಿಂಗಳ ಹಿಂದೆಯೇ ಸಮುದಾಯ ಆರೋಗ್ಯ ಕೇಂದ್ರದ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಲಾಗಿದ್ದು, ಇಲ್ಲಿನ ಸುತ್ತಮುತ್ತಲಿನ ಸುಮಾರು 30ಕ್ಕೂ ಹೆಚ್ಚು ಗ್ರಾಮಗಳಿಂದ ಈ ಕೇಂದ್ರಕ್ಕೆ ಚಿಕಿತ್ಸೆಗೆಂದು ಜನರು ಬರುತ್ತಾರೆ. ಕಚೇರಿ ವೇಳೆಯಂತೆ ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ಕಾರ್ಯನಿರ್ವಹಿಸುತ್ತಿರುವ ಈ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪೂರ್ಣ ಪ್ರಮಾಣದ ವೈದ್ಯರ ಹಾಗೂ ನರ್ಸ್‌ಗಳಿಲ್ಲದೆ ಚನ್ನಪಟ್ಟಣದಲ್ಲಿನ ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸುವಂತಾಗಿದೆ.

ರೋಗಿಗಳಿಗೆ ಸರಿಯಾದ ಸಮಯಕ್ಕೆ ಚಿಕಿತ್ಸೆ ನೀಡಲು ಮತ್ತು ತುರ್ತುಪರಿಸ್ಥಿತಿಗಳನ್ನು ಎದುರಿಸಲು ಆಸ್ಪತ್ರೆಯು ದಿನದ 24 ಗಂಟೆಯು ತೆರೆದಿರುವಂತೆ ಮಾಡಬೇಕಿದೆ. ರಾತ್ರಿ ಪಾಳಯದಲ್ಲಿ ಕಾರ್ಯ ನಿರ್ವಹಿಸಲು ವೈದ್ಯರನ್ನು ಹಾಗೂ ಅವಶ್ಯವಿರುವ ಸಿಬ್ಬಂದಿಗಳನ್ನು ನೇಮಕ ಮಾಡಿ ವೈದ್ಯರಿಗೆ ವಸತಿ ಗೃಹಗಳನ್ನು ನೀಡುವ ಮೂಲಕ ಕೇಂದ್ರ ಸ್ಥಾನದಲ್ಲಿ ಇರುವಂತೆ ವ್ಯವಸ್ಥೆ ಮಾಡಬೇಕು. ಕಟ್ಟಡವೇನು ನಿರ್ಮಾಣವಾಗಿದೆ. ಆದರೆ ಸಕಾಲಕ್ಕೆ ಅಗತ್ಯವಿರುವಷ್ಟು ಔಷಧ, ತಾಂತ್ರಿಕ ಸಾಧನಗಳು ಹಾಗೂ ಸಲಕರಣೆಗಳ ಪೂರೈಕೆ, ಅತ್ಯಗತ್ಯ ಮೂಲಸೌಕರ್ಯ ನಿರ್ಮಾಣವಾಗಬೇಕಿದೆ. ಆದ್ದರಿಂದ ಆರೋಗ್ಯ ಸಚಿವರು ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳು ಇತ್ತ ಗಮನಹರಿಸಿ ಸಮುದಾಯ ಆರೋಗ್ಯ ಕೇಂದ್ರವನ್ನು ಶೀಘ್ರದಲ್ಲಿ ಉದ್ಘಾಟಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು.

–ಶೆಟ್ಟಿ ಹರ್ಷಿತ ಹೆಚ್.ವಿ, ಪತ್ರಿಕೋದ್ಯಮ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು, ಮಂಡ್ಯ

ಗೊಂಬೆ ಆಟ ಕೇಳುವವರ್‍ಯಾರು?

ಮಾನ್ಯರೆ,

ಗೊಂಬೆಗಳ ಊರು ಎಂದ ಕೂಡಲೇ ಚನ್ನಪಟ್ಟಣ ನೆನಪಿಗೆ ಬರುತ್ತದೆ. ಪ್ರಸ್ತುತ ಕೆಲ ಸಂಪ್ರದಾಯಗಳಿಗೆ ಪ್ರೋತ್ಸಾಹ ನೀಡದಿದ್ದಾಗ ಮುಂದೆ ಅವು ಅಳಿವಿನಂಚಿನಲ್ಲಿ ಕೊನೆಗೊಳ್ಳುತ್ತವೆ. ಕೋವಿಡ್ ಸಂದರ್ಭ ಚೇತರಿಕೆ ಕಂಡು ಬದುಕು ಕಟ್ಟಿಕೊಂಡಿರುವ ಕರಕುಶಲ ಕುಟುಂಬಗಳಿಗೆ ಸ್ವಲ್ಪ ಪೆಟ್ಟು ಬಿದ್ದಂತಾಗಿದೆ. ಮಾರ್ಚ್ 12, 2023 ರಂದು ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ಉದ್ಘಾಟನೆಯಾದಾಗಿನಿಂದ ಅವರ ವ್ಯವಹಾರವು ಸುಮಾರು ಶೇ. 80–90 ರಷ್ಟು ಕುಸಿದಿದೆ.

ಹಿಂದೆ ಮೈಸೂರು, ಬೆಂಗಳೂರಿಗೆ ತೆರಳುವ ಪ್ರಯಾಣಿಕರು ಚನ್ನಪಟ್ಟಣಕ್ಕೂ ಬರುವುದರಿಂದ ಆಟಿಕೆಗಳಿಗೆ ಒಳ್ಳೆ ಮಾರಾಟ ಇರುತ್ತಿತ್ತು. ಈಗ ಯಾವುದೇ ವಾಹನಗಳು ಈ ಪಟ್ಟಣಕ್ಕೆ ಬರುತ್ತಿಲ್ಲವಾದ್ದ ರಿಂದ ಆಟಿಕೆ ವ್ಯಾಪಾರ ಕಡಿಮೆಯಾಗಿದೆ ಎಂದು ವ್ಯಾಪಾರಸ್ಥರು ಹೇಳುತ್ತಿದ್ದಾರೆ. ಅದಕ್ಕಾಗಿ ಸರ್ಕಾರ ಮುಂದೆ ಬಂದು ಕರಕುಶಲ ಕುಟುಂಬಗಳು ತಯಾರಿಸಿದ ಗೊಂಬೆ ಆಟಗಳ ಪ್ರೋತ್ಸಾಹಕ್ಕಾಗಿ ಚಿಂತಿಸಿದಾಗ ಮಾತ್ರ, ಈ ರೀತಿಯ ವಿಶೇಷ ಕಲೆ, ಸಂಪ್ರದಾಯಗಳಿಗೆ ಮುಂದಿನ ಪೀಳಿಗೆಯವರು ನೋಡಬಹುದು ಅಲ್ವಾ?

– ಆನಂದ ಜೇವೂರ್, ಕಲಬುರಗಿ

ವಿಧಾನಸಭಾಧ್ಯರು ಪೆನ್‌ಡ್ರೈವ್ ವಶಪಡಿಸಿಕೊಳ್ಳಲಿ

ಮಾನ್ಯರೆ,

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ವರ್ಗಾವಣೆಯಲ್ಲಿ ಹಗರಣ ನಡೆದಿದೆ ಎಂದು ಹೇಳಿದ ವಿಚಾರವನ್ನೊಳಗೊಂಡ ದಾಖಲೆಯಿರುವ ಪೆನ್ ಡ್ರೈವನ್ನು ವಿಧಾನ ಸಭೆಯಲ್ಲಿ ಪ್ರದರ್ಶಿಸಿದ್ದು, ಎಲ್ಲರಿಗೂ ತಿಳಿದಿದೆ. ಆದರೆ ಅದನ್ನು ತೋರಿಸಿ ಜೇಬಿನಲ್ಲಿಟ್ಟುಕೊಂಡು ಕುಮಾರಸ್ವಾಮಿಯವರು ಹಾವು ಬಿಡುತ್ತೇನೆ ಎಂದಷ್ಟೇ ಹೇಳುವ ಹಾವಾಡಿಗನ ಕೆಲಸ ಮಾಡಿದ್ದಾರೆ. ವಿಧಾನ ಸಭಾಧ್ಯಕ್ಷರು ಇದನ್ನು ನೋಡಿಕೊಂಡು ಸುಮ್ಮನಿರಬೇಕಾ? ತಮಗಿರುವ ಅಧಿಕಾರವನ್ನು ಬಳಸಿಕೊಂಡು ಕುಮಾರಸ್ವಾಮಿಯವರ ಬಳಿಯಿರುವ ಹಗರಣದ ಪೆನ್ ಡ್ರೈವನ್ನು ವಶಪಡಿಸಿಕೊಂಡು ತನಿಖೆಗಾಗಿ ಆದೇಶಿಸಿ ಪೋಲೀಸಿನವರಿಗೆ ಕಳಿಸಬಹುದಿತ್ತಲ್ಲ? ವಿಧಾನಸಭಾಧ್ಯಕ್ಷರು ಹಾಗೇಕೆ ಮಾಡಲಿಲ್ಲ?

ಹೋಗಲಿ ಕುಮಾರಸ್ವಾಮಿಯವರೂ ಇಂತಹ ಬ್ಲಾಕ್ ಮೇಲ್ ತಂತ್ರವನ್ನು ಕೈಬಿಟ್ಟು ತನಿಖೆಗೆ ಒತ್ತಾಯಿಸಿ ಪೆನ್‌ಡ್ರೈವನ್ನು ಸಭಾಧ್ಯಕ್ಷರಿಗೆ ಕೊಡಬಹುದಿತ್ತಲ್ಲ? ಇಂತಹ ತಂತ್ರಗಳಿಂದ ಜನರು ರಾಜಕೀಯ ಪಕ್ಷಗಳನ್ನು ನಂಬುವುದಿಲ್ಲ. ಈಗಲಾದರೂ ಈ ವಿಚಾರದಲ್ಲಿ ತನಿಖೆಯಾಗಲೆಂಬ ಉದ್ದೇಶ ಕುಮಾರಸ್ವಾಮಿಗಿದ್ದರೆ ಪೆನ್‌ಡ್ರೈವನ್ನು ವಿಧಾನ ಸಭಾಧ್ಯಕ್ಷರಿಗೆ ಕೊಟ್ಟು ತನಿಖೆಗೆ ಆಗ್ರಹಿಸಲಿ.

–ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.

ಚರಂಡಿಗಳ ಸ್ವಚ್ಛತಾ ಕಾರ್ಯ ಪ್ರಾರಂಭವಾಗಲಿ

ಮಾನ್ಯರೆ,

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸ್ವಚ್ಛತೆ ಅಭಿಯಾನ ಜಾರಿಗೆ ತರುವ ಮೂಲಕ ಸ್ವಚ್ಛತೆಗೆ ಪ್ರಾಮುಖ್ಯತೆ ನೀಡಿವೆ ಆದರೆ, ಮಂಡ್ಯ ಜಿಲ್ಲೆಯ ಎಚ್. ಮಲ್ಲಿಗೆರೆ ಗ್ರಾಮದಲ್ಲಿ ಮಾತ್ರ ಪಂಚಾಯಿತಿ ಮಟ್ಟದ ಅಧಿಕಾರಿಗಳು ಸ್ವಚ್ಛತೆಗೂ ನಮಗೂ ಸಂಬಂಧವಿಲ್ಲದಂತೆ ವರ್ತಿಸಿ ದಿವ್ಯ ನಿರ್ಲಕ್ಷ್ಯ ತೋರುತ್ತಿದ್ದಾರೆ. ಈ ಗ್ರಾಮದಲ್ಲಿ ಸುಮಾರು ಎರಡು ವರ್ಷಗಳಿಂದ ಚರಂಡಿ ಸ್ವಚ್ಛತಾ ಕಾರ್ಯ ನಿಂತು ಹೋಗಿದೆ. ಚರಂಡಿ ತುಂಬಿ ನೀರು ರಸ್ತೆಯಲ್ಲಿ ಹರಿಯುತ್ತಿದೆ. ಅಲ್ಲದೆ ಚರಂಡಿಯಲ್ಲಿ ನಿಂತ ನೀರಿನಿಂದ ಸೊಳ್ಳೆಗಳ ಕಾಟ, ದುರ್ವಾಸನೆ ಹೆಚ್ಚಾಗುತ್ತಿದೆ. ಕೆಲ ಕಡೆ ಸ್ವಚ್ಛತಾ ಕಾರ್ಯ ನಡೆಯದಿರುವುದರಿಂದ ತ್ಯಾಜ್ಯ ವಸ್ತುಗಳಿಂದ ಚರಂಡಿಗಳೇ ಮುಚ್ಚಿಹೋಗಿವೆ. ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಅಧಿಕಾರಿಗಳ ಗಮನಕ್ಕೂ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಹಿಂದೆ ಯಾರೋ ಜಿಲ್ಲಾ ಮಟ್ಟದ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿದಾಗ ಮಾತ್ರ ಚರಂಡಿಗಳನ್ನು ಸ್ವಚ್ಛ ಮಾಡಿದ್ದರು. ನಂತರದಲ್ಲಿ ಅವುಗಳ ಕಡೆ ಕಣ್ಣನ್ನು ಹಾಯಿಸದಂತಾಗಿದೆ. ಪಂಚಾಯಿತಿ ಅಧಿಕಾರಿಗಳ ಬೇಜವಾಬ್ದಾರಿಯಿಂದಾಗಿ ಗ್ರಾಮದ ಜನರು ಬೇಸತ್ತಿದ್ದಾರೆ. ಚರಂಡಿಗಳ ಪಕ್ಕದಲ್ಲಿ ಗಿಡ–ಗಂಟಿಗಳು ಬೆಳೆದುಕೊಂಡು ಅನೇಕ ವಿಷಜಂತುಗಳಿಂದ ಜನರು ಅನಾರೋಗ್ಯಕ್ಕೆ ತುತ್ತಾಗುವಂತಾಗಿದೆ. ಜನಪ್ರತಿನಿಧಿಗಳು, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಮಲ್ಲಿಗೆ ಗ್ರಾಮ ಒಳಗೊಂಡಂತೆ ಇತರೆ ಎಲ್ಲಾ ಪಂಚಾಯಿತಿಗಳಿಗೂ ಚರಂಡಿಗಳ ಸ್ವಚ್ಛತೆ ಮಾಡಲು ಸೂಕ್ತ ನಿರ್ದೇಶನಗಳನ್ನು ನೀಡಬೇಕೆಂದು ಮನವಿ.

–ಕುಸುಮ ಎಸ್, ಪತ್ರಿಕೋದ್ಯಮ ವಿಭಾಗ, ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ



ಕಾರ್ಕಳ ಆನಂದ ಭಟ್
ಮೊ : 7676554198
ಕಾರ್ಕಳ– 574 104, ಉಡುಪಿ ಜಿಲ್ಲೆ

ದಿಕ್ಕುದೆಸೆ

ಜಾಗೃತರಾಗದಿದ್ದರೆ ಜಗತ್ತಲ್ಲಿ ಜಲ ಸಂಕಟ!

ಜಗತ್ತಿನ ಸರೋವರಗಳು ಮತು ಜಲಾಶಯ ಗಳಿಗೆ ಎದುರಾಗಿರುವ ಅಪಾಯಗಳ ಕುರಿತು ಇತ್ತೀಚೆಗೆ ತಜ್ಞರು ನಡೆಸಿದ ಅಧ್ಯಯನದಲ್ಲಿ ಕೆಲವು ಆತಂಕಕಾರಿ ಮಾಹಿತಿಗಳನ್ನು ನೀಡಿದ್ದಾರೆ. ವಿಶ್ವದ ಅತ್ಯಂತ ವಿಶಾಲವಾದ ಸರೋವರಗಳು ಮತ್ತು ಜಲಾಶಯಗಳಲ್ಲಿ ನೀರಿನ ಪ್ರಮಾಣ ನಿರಂತರವಾಗಿ ಕುಸಿಯುತ್ತಿದ್ದು ಬತ್ತಿ ಹೋಗುವ ಅಪಾಯದಲ್ಲಿವೆ. ಈ ಕಾರಣದಿಂದ ಭವಿಷ್ಯದಲ್ಲಿ ಜಗತ್ತಿನ ಅನೇಕ ಭಾಗಗಳಲ್ಲಿ ಭೀಕರ ಜಲಸಂಕಟ ಎದುರಾಗುವ ಸಂಭಾವ್ಯತೆ ಹೆಚ್ಚುತ್ತಿದೆ. ಹವಾಮಾನ ಬದಲಾವಣೆ, ಹೆಚ್ಚುತ್ತಿರುವ ತಾಪಮಾನ, ಜಲಬಳಕೆಯಲ್ಲಾಗುತ್ತಿರುವ ಹೆಚ್ಚಳ ಮತ್ತು ವ್ಯತ್ಯಯ, ಕಿರಿದಾಗುತ್ತಿರುವ ಜಲಪ್ರದೇಶಗಳ ಗಾತ್ರ, ತ್ಯಾಜ್ಯಗಳ ಸೇರುವಿಕೆ, ಮೊದಲಾದ ಕಾರಣಗಳಿಂದ ಜಲಸಂಪನ್ಮೂಲಗಳು ವಿನಾಶದತ್ತ ಸಾಗುತ್ತಿವೆ.

ಜಲಕ್ಷಾಮದ ಹಿನ್ನೆಲೆಯಲ್ಲಿ ಪ್ರಾಕೃತಿಕ ಜಲ ಮೂಲಗಳ ಸಂರಕ್ಷಣೆಗೆ ಆದ್ಯತೆ ನೀಡಲು ನಡೆಯುತ್ತಿರುವ ಸಂಶೋಧನೆಗಳಲ್ಲಿ ಹೊಸ ವಿಷಯಗಳು, ಸಮಸ್ಯೆಗಳು ಬೆಳಕಿಗೆ ಬಂದಿವೆ. ಭೂಮಿಯ ಶೇ.97ರಷ್ಟು ಪ್ರದೇಶ ಜಲಾವೃತವಾಗಿದ್ದರೂ ಶುದ್ಧ ಬಳಕೆ ಯೋಗ್ಯ ನೀರಿನ ಪ್ರಮಾಣ ಕೇವಲ ಶೇ.3ಕ್ಕಿಂತ ಕಡಿಮೆ ಇದೆ. ಶೇ.1.6ರಷ್ಟು ನೀರು ಧ್ರುವ ಪ್ರದೇಶಗಳಲ್ಲಿ ಹಿಮಗಡ್ಡೆ–ಹಿಮನದಿಗಳ ರೂಪದಲ್ಲಿವೆ. ವಿಶ್ವದಲ್ಲಿ 0.002 ಚ.ಕಿ.ಮೀ.ಗಿಂತ ಹೆಚ್ಚು ವಿಸ್ತೀರ್ಣವುಳ್ಳ ಸುಮಾರು 117 ಸರೋವರ ಗಳಿವೆ ಎಂದು ಅಂದಾಜು ಮಾಡಲಾಗಿದೆ. ಇವು ಭೂಮಿಯ ಮೇಲ್ಮೈಯ ಶೇ.3.7ರಷ್ಟು ಆವರಿಸಿವೆ. ಪ್ರಸ್ತುತ ಭೂಮಿಯಲ್ಲಿ ಲಭ್ಯವಿರುವ ಶೇ.3ರಷ್ಟು ಬಳಕೆ ಯೋಗ್ಯ ನೀರಿನಲ್ಲಿ ಮಾನವ ಕೇವಲ ಶೇ.1ರಷ್ಟು ಮಾತ್ರ ಬಳಸುತ್ತಿದ್ದಾನೆ.

ಸರೋವರಗಳ ಮೇಲೆ ಸಂಶೋಧನೆ: ಅಮೇರಿಕಾ, ಫ್ರಾನ್ಸ್ ಮತ್ತು ಸೌದಿ ಅರೇಬಿಯಾ ದೇಶಗಳ ವಿಜ್ಞಾನಿಗಳ ತಂಡ ಸರೋವರ ಮತ್ತು ಜಲಾಶಯಗಳ ಸಂಶೋಧನೆ ನಡೆಸಿ ಅನೇಕ ಸಂಗತಿಗಳನ್ನು ಬಹಿರಂಗಪಡಿಸಿದ್ದಾರೆ. ಈ ವಿಜ್ಞಾನಿಗಳ ತಂಡ ಜಗತ್ತಿನ ಅತ್ಯಂತ ವಿಶಾಲವಾದ ಸುಮಾರು 1970 ಸರೋವರ–ಜಲಾಶಯಗಳ 1992–2020ರವರೆಗಿನ ಮೂವತ್ತು ವರ್ಷಗಳ ಕಾಲ ಉಪಗ್ರಹಗಳಿಂದ ತೆಗೆದ ಚಿತ್ರಗಳ ಅಧ್ಯಯನ ನಡೆಸಿ, ನೀರಿನ ಪ್ರಮಾಣದಲ್ಲಾಗಿರುವ ಬದಲಾವಣೆಗಳನ್ನು ತಿಳಿಸಿದ್ದಾರೆ. ಶೇ.53ರಷ್ಟು ಜಲಸಂಗ್ರಹಾಗಾರಗಳಲ್ಲಿ ನೀರಿನ ಪ್ರಮಾಣ ಪ್ರತಿ ವರ್ಷ 22 ಗಿಗಾ ಟನ್‌ನಷ್ಟು ಕಡಿಮೆಯಾಗುತ್ತಿರುವುದನ್ನು ತೋರಿಸಿದ್ದಾರೆ. ಈ ಪ್ರಕೃತಿದತ್ತ ಜಲಮೂಲಗಳನ್ನು ಸರಿಯಾಗಿ ನಿರ್ವಹಣೆ ಮತ್ತು ರಕ್ಷಣೆ ಮಾಡದಿದ್ದರೆ ಜಗತ್ತಿನಲ್ಲಿ ಜಲ ಬಿಕ್ಕಟ್ಟು ತೀವ್ರವಾಗಲಿದೆ.

ಭಾರೀ ಪ್ರಮಾಣದ ಕೈಗಾರಿಕೀಕರಣ, ಹೆಚ್ಚುತ್ತಿರುವ ಮಾಲಿನ್ಯ, ಕರಗುತ್ತಿರುವ ಹಿಮಗಲ್ಲುಗಳು, ಕಿರಿದಾಗುತ್ತಿರುವ ಮರುಭೂಮಿಗಳು ಇದರಿಂದ ಈ ಪ್ರದೇಶದಲ್ಲಿ ಹೆಚ್ಚುತ್ತಿರುವ ಜನವಸತಿ, ನದಿಗಳಲ್ಲಿ ಕುಸಿಯುತ್ತಿರುವ ನೀರಿನ ಹರಿವಿನ ಪ್ರಮಾಣ, ಪ್ರಕೃತಿ ವಿನಾಶದಂತಹ ಎಲ್ಲ ರೀತಿಯ ಹಾವಳಿಗಳು ಜಲಬಿಕ್ಕಟ್ಟನ್ನು ಉಲ್ಬಣಿಸುತ್ತಿದೆ. ಪ್ಯಾಕೆಟ್, ಬಾಟಲ್ ನೀರು ಅಭಿವೃದ್ಧಿಯ ಸಂಕೇತವೆಂದು ಭಾವಿಸುತ್ತಿರುವುದು ಜಗತ್ತಿನ ದುರಂತವಾಗಿದೆ. ಇದು ಸುಲಭದಲ್ಲಿ ದೊರೆಯುತ್ತಿರುವ ಜಲ



ಪ್ರಸ್ತುತ ಜಗತ್ತಿನ ಜನರಿಗೆ ನದಿ, ಸರೋವರ, ಜಲಾಶಯಗಳಿಂದ ಶುದ್ಧ ಮತ್ತು ಸುರಕ್ಷಿತ ನೀರು ಸಿಗುವುದನ್ನು ಖಾತ್ರಿಪಡಿಸಬೇಕಾಗಿದೆ. ಈ ರೀತಿಯ ಜಲಮೂಲಗಳು ಒಣಗುವಿಕೆಯ ಕಾರಣಗಳು ಅಧ್ಯಯನಗಳಿಂದ ದೊರೆಯುತ್ತಿವೆ. ಆದರೆ ತುರ್ತು ಹಾಗೂ ದೀರ್ಘ ಕಾಲೀನ ರಕ್ಷಣಾ ಕ್ರಮಗಳ ಅನುಷ್ಠಾನವಾಗಿಲ್ಲ. ಪರ್ವತಗಳಲ್ಲಿ ಹುಟ್ಟುವ ಚಿಲುಮೆಗಳು, ಒರತೆಗಳು, ಹಿಮ ಕರಗುವಿಕೆ, ಮಳೆ ನೀರು ಸರೋವರಗಳ ಪ್ರಮುಖ ನೀರಿನ ಸೆಲೆಗಳಾಗಿವೆ. ಆದರೆ ಜಗತ್ತಿನಲ್ಲಿ ಹೆಚ್ಚುತ್ತಿರುವ ತಾಪಮಾನದಿಂದ ಪರ್ವತಗಳಲ್ಲಿನ ಹಿಮ ವೇಗವಾಗಿ ಕರಗಿ ಪರ್ವತಗಳು ಬರಡಾಗುತ್ತಿವೆ.

ಮೂಲಗಳ ನಾಶವಾಗುತ್ತಿರುವುದರ ಸಂಕೇತವಾಗಿದೆ. ನಮ್ಮ ಬೇಜವಾಬ್ದಾರಿತನ ಎಲ್ಲವನ್ನೂ ಮಾರುಕಟ್ಟೆಗಳಿಂದ ಪಡೆಯಬೇಕಾದ ದುಸ್ಥಿತಿಗೆ ಜಗತ್ತನ್ನು ದೂಡಿದೆ. ಭವಿಷ್ಯದಲ್ಲಿ ನೀರಿನ ಸಮರ್ಪಕ ವಿತರಣೆ ಸವಾಲಿನ ವಿಷಯವಾಗಲಿದೆ.

ಪ್ರಸ್ತುತ ಜಗತ್ತಿನ ಜನರಿಗೆ ನದಿ, ಸರೋವರ, ಜಲಾಶಯಗಳಿಂದ ಶುದ್ಧ ಮತ್ತು ಸುರಕ್ಷಿತ ನೀರು ಸಿಗುವುದನ್ನು ಖಾತ್ರಿಪಡಿಸಬೇಕಾಗಿದೆ. ಈ ರೀತಿಯ ಜಲಮೂಲಗಳು ಒಣಗುವಿಕೆಯ ಕಾರಣಗಳು ಅಧ್ಯಯನಗಳಿಂದ ದೊರೆಯುತ್ತಿವೆ. ಆದರೆ ತುರ್ತು ಹಾಗೂ ದೀರ್ಘ ಕಾಲೀನ ರಕ್ಷಣಾ ಕ್ರಮಗಳ ಅನುಷ್ಠಾನವಾಗಿಲ್ಲ. ಪರ್ವತಗಳಲ್ಲಿ ಹುಟ್ಟುವ ಚಿಲುಮೆಗಳು, ಒರತೆಗಳು, ಹಿಮ ಕರಗುವಿಕೆ, ಮಳೆ ನೀರು ಸರೋವರಗಳ ಪ್ರಮುಖ ನೀರಿನ ಸೆಲೆಗಳಾಗಿವೆ. ಆದರೆ ಜಗತ್ತಿನಲ್ಲಿ ಹೆಚ್ಚುತ್ತಿರುವ ತಾಪಮಾನದಿಂದ ಪರ್ವತಗಳಲ್ಲಿನ ಹಿಮ ವೇಗವಾಗಿ ಕರಗಿ ಪರ್ವತಗಳು ಬರಡಾಗುತ್ತಿವೆ. ಭಾರೀ ಪ್ರಮಾಣದಲ್ಲಿ ನೀರ್ಗಲ್ಲುಗಳಿರುವ (Glasier) ಯೂರೋಪಿನ ಸ್ವಿಟ್ಜರ್‌ಲ್ಯಾಂಡ್ ದೇಶದಲ್ಲಿ ಕಳೆದ 1850ನೇ ಇಸವಿಯಿಂದ ಇದುವರೆಗೆ 500ರಷ್ಟು ನೀರ್ಗಲ್ಲುಗಳು ಕರಗಿ ಕಣ್ಮರೆಯಾಗಿವೆ. 2006ರಲ್ಲಿ ಸುಮಾರು 2700 ಮೀಟರ್ ಎತ್ತರದ, ಸಹಸ್ರಾರು ವರ್ಷಗಳಿಂದ ಹಿಮಚ್ಛಾದಿತವಾಗಿದ್ದ ಫಿಜೋಲ್ ಪರ್ವತದಲ್ಲಿದ್ದ ಹಿಮ ಸಂಪೂರ್ಣ ಕರಗಿ ಬರಡಾಯಿತು. ಅದಕ್ಕಾಗಿ ಜಗತ್ತಿನ ಜನರನ್ನು ಎಚ್ಚರಿಸಲು ಪರಿಸರವಾದಿಗಳು ಫಿಜೋಲ್ ಪರ್ವತಕ್ಕೆ ಅಣಕು ಶವಯಾತ್ರೆ ನಡೆಸಿದ್ದರು.

ನೀರಿನ ಸಮಸ್ಯೆಗೆ ಇನ್ನೂ ಕೆಲವು ಪ್ರಮುಖ ಕಾರಣಗಳೆಂದರೆ ಆಕರ್ಷಕ ಸರೋವರಗಳ ಸುತ್ತ ಹೆಚ್ಚುತ್ತಿರುವ ಪ್ರವಾಸೋದ್ಯಮ, ವಾಣಿಜ್ಯ ಹಾಗೂ ಅಭಿವೃದ್ಧಿ ಯೋಜನೆಗಳಾಗಿವೆ. ಇದರಿಂದ ಸರೋವರಗಳ ನೀರಿನ ಬಳಕೆ ಹೆಚ್ಚುವುದರೊಂದಿಗೆ ಭಾರಿ ಪ್ರಮಾಣದಲ್ಲಿ ತ್ಯಾಜ್ಯಗಳು ಸೇರಿ ಸರೋವರಗಳು ಗುಟಾರಗಳಾಗುತ್ತಿವೆ. ಸರೋವರಗಳ ಭೂ ಪ್ರದೇಶದ ಅತಿಕ್ರಮಣವು ಅವುಗಳ ಅಸ್ತಿತ್ವಕ್ಕೆ ಅಪಾಯ ತಂದಿವೆ.

ವ್ಯರ್ಥವಾಗುತ್ತಿರುವ ನೀರಿನ ಪ್ರಮಾಣ: ಜಾಗತಿಕವಾಗಿ ಪ್ರತಿವರ್ಷ ನೀರಿನ ಅಸಮರ್ಪಕ ನಿರ್ವಹಣೆ ಮತ್ತು ನಲ್ಲಿಗಳಿಂದ ಸೋರುವಿಕೆಯಿಂದಾಗಿ ಶೇಕಡ ಮೂವತ್ತರಷ್ಟು ಶುದ್ಧ ನೀರು ವ್ಯರ್ಥವಾಗುತ್ತಿದೆ. ವಿಶ್ವಕ್ಕೆ ಎಲ್ಲವನ್ನೂ ಬೋಧಿಸುವ ಅಮೇರಿಕನ್ನರು ಪ್ರತಿದಿನ 2000 ಗ್ಯಾಲನ್‌ನಷ್ಟು ನೀರು ಉಪಯೋಗಿಸುತ್ತಿದ್ದರೆ, ಆಫ್ರಿಕನ್ ಕುಟುಂಬಗಳು ಉಪಯೋಗಿಸುತ್ತಿರುವ ಪ್ರಮಾಣ ಕೇವಲ ಐದು ಗ್ಯಾಲನ್ ಆಗಿದೆ. ಅಮೇರಿಕನ್ನರು ಪ್ರತಿದಿನ ಮೂವತ್ತು ಗ್ಯಾಲನ್‌ನಷ್ಟು ಚೆಲ್ಲುತ್ತಾರೆಂದು ಅಮೇರಿಕದ ಭೂಗರ್ಭ ಅಧ್ಯಯನ ವಿಭಾಗ ತಿಳಿಸಿದೆ. ಲಂಡನ್ ಮತ್ತು ಚಿಕಾಗೋ ನಗರಗಳು ನೀರಿನ ದುರ್ಬಳಕೆಯಿಂದ ಪ್ರತಿದಿನ ಸುಮಾರು ಶೇ.30 ಮತ್ತು ಶೇ.25 ವ್ಯರ್ಥ ಮಾಡುತ್ತಿವೆ. ಮಧ್ಯ ಪ್ರಾಚ್ಯ ದೇಶಗಳು ಅವೈಜ್ಞಾನಿಕ ಸಂಗ್ರಹ ಮತ್ತು ಪೂರೈಕೆ ಪದ್ಧತಿಗಳಿಂದ ಅಂದಾಜು ಶೇ.60ರಷ್ಟು ನೀರನ್ನು ಪೋಲು ಮಾಡುತ್ತಿವೆ. ಭಾರತದ ಉತ್ತರ ಪ್ರದೇಶದಲ್ಲಿ ನದಿಗಳು, ಕಾಲುವೆಗಳು ಮತ್ತು ಸರೋವರಗಳ ಒಟ್ಟು ಉದ್ದ 31.2 ಸಾವಿರ ಕಿ.ಮೀ. ಆಗಿದ್ದು, ಇದು ದೇಶದ ನದಿ ಕಾಲುವೆಗಳ ಉದ್ದದ ಶೇ. 17 ರಷ್ಟಿದೆ. ಜಮ್ಮು–ಕಾಶ್ಮೀರ ಹಾಗೂ ಮಧ್ಯ ಪ್ರದೇಶದಲ್ಲಿ ಕೆರೆ, ಸರೋವರಗಳು ಒಟ್ಟು 2.9 ಮಿಲಿಯನ್ ಹೆಕ್ಟೇರ್ ಪ್ರದೇಶ ಆವರಿಸಿವೆ. ಆಂಧ್ರ, ಕರ್ನಾಟಕ, ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ರಾಜಸ್ಥಾನಗಳಲ್ಲಿ ದೇಶದಲ್ಲಿರುವ ಕೆರೆ ಸರೋವರಗಳು ಶೇ.62ರಷ್ಟು ಪ್ರದೇಶದಲ್ಲಿವೆ.

ದೇಶದಲ್ಲಿ 600 ಮಿಲಿಯನ್ ಜನರಿಗೆ ತೀವ್ರ ಕುಡಿಯುವ ನೀರಿನ ಅಭಾವವಿದ್ದರೆ 163 ಮೀ. ಜನರು ಶುದ್ಧ ಪೇಯ ಜಲದಿಂದ ವಂಚಿತರಾಗಿದ್ದಾರೆ. ಆದರೆ ವಿಪರ್ಯಾಸವೆಂದರೆ ದೇಶದಲ್ಲಿ ಪ್ರತಿದಿನ 4.8.42 ಬಿಲಿಯನ್ ಲೀಟರ್‌ನಷ್ಟು ನೀರು ಪೋಲಾಗುತ್ತಿದೆ. ದೇಶದಲ್ಲಿ ಪ್ರತಿದಿನ ಪ್ರತಿಯೊಬ್ಬರೂ ಸರಾಸರಿ 45 ಲೀ. ನೀರು ವ್ಯರ್ಥವಾಗಿ ಚೆಲ್ಲುತ್ತಿದ್ದಾರೆ. ಕೊಲ್ಕತ್ತಾ (ಶೇ.50)ರಷ್ಟು, ಬೆಂಗಳೂರು (ಶೇ.49) ನೀರು ವ್ಯರ್ಥ ಮಾಡುವ ಪ್ರಥಮ ಹಾಗೂ ದ್ವಿತೀಯ ಸ್ಥಾನದಲ್ಲಿರುವ ನಗರಗಳಾಗಿವೆ. ದಿಲ್ಲಿ (ಶೇ.26), ಚೆನ್ನೈ (ಶೇ.0), ಮುಂಬೈ (ಶೇ.18) ಅನುಕ್ರಮವಾಗಿ ನಂತರದ ಸ್ಥಾನಗಳಲ್ಲಿವೆ. ಮನುಷ್ಯ ಜೀವನಪೂರ್ತಿ ಉಪಯೋಗಿಸುತ್ತಿರುವ ನೀರಿನ ಪ್ರಮಾಣ ಅಂದಾಜು ಮಾಡಲಾಗಿದೆ. ಆದರೆ ಆತ ಎಷ್ಟು ನೀರು ವ್ಯರ್ಥ ಮಾಡುತ್ತಿದ್ದಾನೆ ಎಂಬ ಬಗ್ಗೆ ನಿಖರ ಮಾಹಿತಿಗಳಿಲ್ಲ. ನಾವು ನೀರನ್ನು ಉಪಯೋಗಿಸುವಾಗ ಪೋಲಾಗುವುದರ ಬಗ್ಗೆ ಯೋಚಿಸುವುದಿಲ್ಲ. ಸಮೃದ್ಧ ಮಳೆ ಬಂದಾಗ, ಕೆರೆ ಕಾಲುವೆಗಳು ತುಂಬಿರುತ್ತಿದ್ದಾಗ ನೀರಿನ ಬಗ್ಗೆ ಬೇಜವಾಬ್ದಾರಿ, ನಿರ್ಲಕ್ಷ್ಯ ತೋರಿದರೆ ಬರಗಾಲದಲ್ಲಿ ನೀರಿಗಾಗಿ ಹಾಹಾಕಾರ, ಮಾರಾಮಾರಿ ಮಾಡುತ್ತೇವೆ. ಮನುಷ್ಯರಲ್ಲಿ ಈ ಮಾನಸಿಕತೆ ಬದಲಾಗಬೇಕಾಗಿದೆ.

ವಿಶ್ವ ಸಂಸ್ಥೆ ನೀಡಿರುವ ಮಾಹಿತಿಯಂತೆ ಕಳೆದ ನೂರು ವರ್ಷಗಳಲ್ಲಿ ಪ್ರಪಂಚದಲ್ಲಿ ನೀರಿನ ಬಳಕೆ ಆರು ಪಟ್ಟು ಹೆಚ್ಚಳವಾಗಿದೆ ಮತ್ತು ಜನಸಂಖ್ಯಾ ಸ್ಫೋಟದಿಂದ ಪ್ರತಿವರ್ಷ ಶೇ. ಒಂದರಷ್ಟು ಹೆಚ್ಚುತ್ತಿದೆ. ವೇಗ ಪಡೆಯುತ್ತಿರುವ ಮೂಲ ಸೌಕರ್ಯಗಳ ನಿರ್ಮಾಣ, ಆರ್ಥಿಕಾಭಿವೃದ್ಧಿ, ನೀರಿನ ಪೂರೈಕೆ ಮತ್ತು ಬಳಕೆಯಲ್ಲಾಗುತ್ತಿರುವ ಅನಿಯಮಿತತೆ ಮತ್ತು ಅನಿಶ್ಚಿತತೆಯಿಂದಾಗಿ ಜಗತ್ತಿನಲ್ಲಿ ಶುದ್ಧ ನೀರಿನ ಸಮಸ್ಯೆ ಇನ್ನಷ್ಟು ತೀವ್ರಗೊಳ್ಳಲಿದೆ. ಈ ಸಮಸ್ಯೆಗೆ ಇಸ್ರೇಲ್ ಜಗತ್ತಿಗೆ ಪರಿಹಾರೋಪಾಯಗಳನ್ನು ನೀಡಿದೆ.

ಅದ್ಭುತ ಜಲ ನಿರ್ವಹಣೆ–ಇಸ್ರೇಲ್ ಮಾದರಿ: ಇಸ್ರೇಲಿನ ಶೇ.60ರಷ್ಟು ಭೂಭಾಗ ಮರುಭೂಮಿ. ಉಳಿದ ಶೇ.40ರಷ್ಟು ಅಲ್ಪಸ್ವಲ್ಪ ಮಳೆ ಬೀಳುತ್ತದೆ. ಹೀಗಿದ್ದೂ ಇಸ್ರೇಲ್‌ನಲ್ಲಿ ನೀರಿನ ಅಭಾವವಿಲ್ಲ. ಇಲ್ಲಿ ಹಿಂದೆಂದಿಗಿಂತಲೂ ಹೆಚ್ಚು ನೀರು ಲಭಿಸುತ್ತಿದೆ. ಕುತೂಹಲವೆಂದರೆ ಕಳೆದ ಅನೇಕ ವರ್ಷಗಳಿಂದ ಇಸ್ರೇಲ್ ಜಗತ್ತಿನ ಹತ್ತಾರು ದೇಶಗಳಿಗೆ ಶುದ್ಧ ಕುಡಿಯುವ ನೀರು ರಫ್ತು ಮಾಡಿ, ಭಾರೀ ಲಾಭ ಗಳಿಸುತ್ತಿದೆ. ಇಸ್ರೇಲಿಗಳಿಗೆ ಪ್ರತಿ ಹನಿ ನೀರಿನ ಮೌಲ್ಯ ಕಲಿಸಲಾಗುತ್ತಿದೆ. ಇಸ್ರೇಲಿನ ಶಾಲೆಗಳಲ್ಲಿ ನೀರನ್ನು ಉಳಿಸುವ, ಮಿತವಾಗಿ ಬಳಸುವ ಎಲ್ಲಾ ರೀತಿಯ ಕಾರ್ಯಸಾಧ್ಯ ಮಾದರಿಗಳನ್ನು ಮಕ್ಕಳಿಗೆ ಕಲಿಸಲಾಗುತ್ತದೆ. ಇಸ್ರೇಲಿನಲ್ಲಿ ನೀರಿನ ಮೇಲೆ ಯಾರಿಗೂ ಅಧಿಕಾರವಿಲ್ಲ. ಸ್ವಂತ ಜಾಗದಲ್ಲಿರುವ ನೀರು ಸರಕಾರಕ್ಕೆ ಸೇರಿದೆ. ಕೊಳವೆ ಬಾವಿ ಕೊರೆಯುವುದು ನಿಷೇಧಿಸಲಾಯಿತು. ನೀರಿನ ಸಂಪರ್ಕಕ್ಕೆ ಮೀಟರ್ ಅಳವಡಿಸಲಾಯಿತು. ನದಿ, ಕೆರೆ, ಸರೋವರ, ತೊರೆ ಮತ್ತು ಮಳೆ ನೀರನ್ನು ಸರ್ಕಾರಿ ಸಂಪತ್ತು ಎಂದು ಕಾನೂನು ಮಾಡಲಾಯಿತು. ತ್ಯಾಜ್ಯ ನೀರಿನ, ಸಮುದ್ರ ಉಪ್ಪು ನೀರನ್ನು ಸಂಸ್ಕರಿಸಿ ಬಳಕೆ ಯೋಗ್ಯ ಮಾಡಲಾಯಿತು. ಕೃಷಿಯಲ್ಲಿ ಹನಿ ನೀರಾವರಿ ತಂತ್ರಜ್ಞಾನ ಬಳಸಲಾಯಿತು. ಇಸ್ರೇಲ್, ಸ್ವಚ್ಛ ಶುದ್ಧ ನೀರನ್ನು ಪಡೆಯಲು ಹದಿನೈದು ಪದ್ಧತಿಗಳನ್ನು ಅನುಸರಿಸುತ್ತಿದೆ. ಜಗತ್ತನ್ನು ಬರಗಾಲ ಮುಕ್ತ ಮಾಡಲು ಇಸ್ರೇಲ್ ಮಾದರಿಯಾಗಿದೆ.

ಮಾನಹಾನಿ ಪ್ರಕರಣದಲ್ಲಿ ಜೈಲು ಶಿಕ್ಷೆ: ಆದೇಶ ಪ್ರಶ್ನಿಸಿ ಸುಪ್ರೀಂ ಮೆಟ್ಟಿಲೇರಿದ ರಾಹುಲ್ ಗಾಂಧಿ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ವಿರುದ್ಧದ ಹೇಳಿಕೆಗೆ ಸಂಬಂಧಿಸಿದಂತೆ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ಎರಡು ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶಿಕ್ಷೆಗೆ ತಡೆ ಕೋರಿ ಶನಿವಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ. ರಾಹುಲ್ ಗಾಂಧಿ ಶಿಕ್ಷೆಗೆ ತಡೆ ನೀಡಲು ಗುಜರಾತ್ ಹೈಕೋರ್ಟ್ ಕಳೆದ ಶುಕ್ರವಾರ ನಿರಾಕರಿಸಿತ್ತು. ಇಂದು ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ರಾಹುಲ್ ಗಾಂಧಿ ಅವರು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.



ಕಳೆದ ಮಾರ್ಚ್‌ನಲ್ಲಿ ಸೂರತ್ ಮ್ಯಾಜಿಸ್ಟ್ರೇಟ್ ಕೋರ್ಟ್, ಮಾನಹಾನಿ ಪ್ರಕರಣದಲ್ಲಿ ರಾಹುಲ್ ಗಾಂಧಿ ದೋಷಿ ಎಂದು ತೀರ್ಪು ನೀಡಿ, ಐಪಿಸಿ 499, 500ರಡಿ 2 ವರ್ಷ ಜೈಲು ಶಿಕ್ಷೆಯನ್ನು ವಿಧಿಸಿತ್ತು. ಶಿಕ್ಷೆ ಪ್ರಕಟಗೊಂಡ ಮರುದಿನವೇ, ಲೋಕಸಭೆಯ ಸ್ಪೀಕರ್ ಕಾರ್ಯಾಲಯ ರಾಹುಲ್ ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿತ್ತು. 2019ರ ಲೋಕಸಭೆ ಚುನಾವಣೆ ವೇಳೆ ರಾಹುಲ್ ಗಾಂಧಿ, ಮೋದಿ ಎಂಬ ಹೆಸರು ಹೊಂದಿರುವವರೆಲ್ಲರೂ ಕಳ್ಳರು ಎಂಬ ಹೇಳಿಕೆ ನೀಡಿದ್ದರು. ನೀರವ್ ಮೋದಿ, ಲಲಿತ್ ಮೋದಿ, ನರೇಂದ್ರ ಮೋದಿ ಈ ಹೆಸರು ಹೊಂದಿರುವವರನ್ನು ಉಲ್ಲೇಖಿಸಿದ್ದ ಅವರು, ಎಲ್ಲ ಮೋದಿಗಳೂ ಕಳ್ಳರು. ಮೋದಿ ಉಪನಾಮ ಹೊಂದಿರುವವರು ಕಳ್ಳರಾಗಲು ಹೇಗೆ ಸಾಧ್ಯ ಎಂದು ವ್ಯಂಗ್ಯವಾಡಿದ್ದರು. ರಾಹುಲ್ ಹೇಳಿಕೆಯಿಂದ ಆಕ್ರೋಶಗೊಂಡ ಬಿಜೆಪಿ ಶಾಸಕ ಪೂರ್ಣೇಶ್ ಮೋದಿ, ದೂರು ದಾಖಲು ಮಾಡಿದ್ದರು. 2019ರ ಏಪ್ರಿಲ್ ತಿಂಗಳಲ್ಲಿ ರಾಹುಲ್ ಗಾಂಧಿ ವಿರುದ್ಧ ಐಪಿಸಿ ಸೆಕ್ಷನ್ 499 ಮತ್ತು 500ರ ಅಡಿ ಮಾನಹಾನಿ ಪ್ರಕರಣ ದಾಖಲಾಗಿತ್ತು.

'ಶೌರ್ಯ ಚಕ್ರ' ಪುರಸ್ಕೃತ ದಿವಂಗತ ಲೆಫ್ಟಿನೆಂಟ್ ಕರ್ನಲ್ ಅಜಿತ್ ವಿ.ಭಂಡಾರ್ಕರ್ ನೈಜ ಕಥೆ ಆಧಾರಿತ

'ದಿ ಸಾಗಾ ಆಫ್ ಎ ಬ್ರೇವ್‌ಹಾರ್ಟ್' ಸಾಕ್ಷ್ಯಚಿತ್ರ ಪ್ರದರ್ಶನ

ಮೈಸೂರು, ಜು.15(ಎಂಕೆ)– ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ 'ಶೌರ್ಯ ಚಕ್ರ' ಪುರಸ್ಕೃತ ದಿವಂಗತ ಲೆಫ್ಟಿನೆಂಟ್ ಕರ್ನಲ್ ಅಜಿತ್ ವಿ.ಭಂಡಾರ್ಕರ್ ಅವರ ಸಾಹಸಗಾಥೆಯ ನೈಜ ಕಥೆ ಆಧಾರಿತ 'ದಿ ಸಾಗಾ ಆಫ್ ಎ ಬ್ರೇವ್ ಹಾರ್ಟ್(The Saga of a Braveheart)' ಸಾಕ್ಷ್ಯಚಿತ್ರವನ್ನು ಶನಿವಾರ ಪ್ರದರ್ಶಿಸಲಾಯಿತು.

ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಷ್ಠಾನದ ವತಿಯಿಂದ 76ನೇ ಭಾರತ ಸ್ವಾತಂತ್ರ್ಯ ಮಹೋತ್ಸವ ಸ್ಮರಣಾರ್ಥ ಹಾಗೂ ಜಯಚಾಮರಾಜ ಒಡೆಯರ್ ಅವರ 105ನೇ ಜನ್ಮ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಸಾಕ್ಷ್ಯಚಿತ್ರ ಪ್ರದರ್ಶನದಲ್ಲಿ ಹುತಾತ್ಮ ವೀರ ಸೇನಾನಿಯ ಸಾಹಸಗಾಥೆಯನ್ನು ತಿಳಿಸಲಾಯಿತು.

ಮಾಯಾ ಚಲನಚಿತ್ರ ನಿರ್ಮಾಣ ಸಂಸ್ಥೆ ಮೂಲಕ ನಿರ್ದೇಶಕಿ ಮಾಯಾಚಂದ್ರ ಅವರು 'ದಿ ಸಾಗಾ ಆಫ್ ಎ ಬ್ರೇವ್ ಹಾರ್ಟ್' ಸಾಕ್ಷ್ಯಚಿತ್ರವನ್ನು ನಿರ್ದೇಶಿಸಿದ್ದು, 1999ರಲ್ಲಿ ಜಮ್ಮು ಮತ್ತು ಕಾಶ್ಮೀರ ಪ್ರದೇಶದಲ್ಲಿ ಭಯೋತ್ಪಾದಕರನ್ನು ಹಿಮ್ಮೆಟ್ಟಿಸುವ ಸಂದರ್ಭದಲ್ಲಿ ದಿವಂಗತ ಲೆಫ್ಟಿನೆಂಟ್ ಕರ್ನಲ್ ಅಜಿತ್ ವಿ.ಭಂಡಾರ್ಕರ್ ಅವರ ಸಾಹಸ ಹಾಗೂ ಪ್ರಾಣ ತ್ಯಾಗದ ಸನ್ನಿವೇಶದ ಜೊತೆಗೆ ಅವರ ಬಾಲ್ಯಜೀವನ, ಸೇನೆಗೆ ಸೇರಿರುವುದು ಮತ್ತು ಕುಟುಂಬಸ್ಥರೊಂದಿಗೆ ಇರುವ ಸಂದರ್ಭಗಳನ್ನು ನೋಡುಗರ ಮನಸ್ಸಿನಲ್ಲಿ ಅಚ್ಚಳಿಸಲಾಯಿತು.



'ಶೌರ್ಯ ಚಕ್ರ' ಪುರಸ್ಕೃತ ದಿವಂಗತ ಲೆಫ್ಟಿನೆಂಟ್ ಕರ್ನಲ್ ಅಜಿತ್ ವಿ.ಭಂಡಾರ್ಕರ್ ಅವರ ಸಾಹಸಗಾಥೆಯ ನೈಜ ಕಥೆ ಆಧಾರಿತ 'ದಿ ಸಾಗಾ ಆಫ್ ಎ ಬ್ರೇವ್ ಹಾರ್ಟ್ ಸಾಕ್ಷ್ಯಚಿತ್ರವನ್ನು ಶನಿವಾರ ಪ್ರದರ್ಶಿಸಲಾಯಿತು.

ಸಾಕ್ಷ್ಯಚಿತ್ರ ಪ್ರದರ್ಶನಕ್ಕೂ ಮುನ್ನ ನಿರ್ದೇಶಕಿ ಮಾಯಾಚಂದ್ರ ಮಾತನಾಡಿ, 'ದಿ ಸಾಗಾ ಆಫ್ ಎ ಬ್ರೇವ್‌ಹಾರ್ಟ್' ಸಾಕ್ಷ್ಯಚಿತ್ರದ 75ನೇ ಪ್ರದರ್ಶನ ಇದಾಗಿದ್ದು, 13ನೇ ದಾದಾ ಸಾಹೇಬ್ ಫಾಲ್ಕೆ ಚಲನ ಚಿತ್ರೋತ್ಸವದಲ್ಲಿ ಅತ್ಯುತ್ತಮ ಸಾಕ್ಷ್ಯಚಿತ್ರ ಪ್ರಶಸ್ತಿಗೆ ಭಾಜನವಾಗಿದೆ. ಮೈಸೂರಿನಲ್ಲಿ ಈ ಸಾಕ್ಷ್ಯಚಿತ್ರ ಪ್ರದರ್ಶನವಾಗುತ್ತಿರುವುದು ಅವಿಸ್ಮರಣೀಯವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಭಾರತೀಯ ಸೇನೆಗೂ ಮೈಸೂರು ಸಂಸ್ಥಾನಕ್ಕೂ ಸಂಬಂಧವಿದೆ. ಮೊದಲ ಮಹಾಯುದ್ಧಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸೇನೆ ಕಳುಹಿಸಿದರೆ, 2ನೇ ಮಹಾಯುದ್ಧದ ಸಂದರ್ಭದಲ್ಲಿ ಜಯಚಾಮರಾಜ ಒಡೆಯರ್ ಫೈಟರ್ ಜೆಟ್ ನೀಡಿದ್ದರು. ಮೈಸೂರು ಸಂಸ್ಥಾನದ 18 ಮದ್ರಾಸ್ ರೆಜಿಮೆಂಟ್ ಸ್ವಾತಂತ್ರ್ಯ ನಂತರ ಭಾರತಿಯ ಸೇನೆಯೊಂದಿಗೆ ವಿಲೀನವಾಯಿತು. ಇದೇ 18 ಮದ್ರಾಸ್ ರೆಜಿಮೆಂಟ್‌ಗೆ ದಿವಂಗತ ಲೆಫ್ಟಿನೆಂಟ್ ಕರ್ನಲ್ ಅಜಿತ್ ವಿ.ಭಂಡಾರ್ಕರ್ ಸೇರಿದ್ದರು.

ಪ್ರೇರಣಾದಾಯಕ: ಸಾಕ್ಷ್ಯಚಿತ್ರ ಪ್ರದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಮಾತನಾಡಿ, ದಿವಂಗತ ಲೆಫ್ಟಿನೆಂಟ್ ಕರ್ನಲ್ ಅಜಿತ್ ವಿ.ಭಂಡಾರ್ಕರ್ ಅವರ ಕುರಿತಾದ ಸಾಕ್ಷ್ಯಚಿತ್ರ ಪ್ರೇರಣಾದಾಯಕ ಚಿತ್ರವಾಗಿದೆ. ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಷ್ಠಾನ ಕಲೆ, ಸಾಹಿತ್ಯ, ಸಂಸ್ಕೃತಿಗೆ ಪ್ರೋತ್ಸಾಹ ನೀಡುತ್ತಾ ಬಂದಿದ್ದು, ಈ ನಿಟ್ಟಿನಲ್ಲಿ ಹುತಾತ್ಮ ವೀರ ಸೇನಾನಿಯ ಸಾಹಸಗಾಥೆಯನ್ನು ತಿಳಿಸುವ ಸಾಕ್ಷ್ಯಚಿತ್ರ ಪ್ರದರ್ಶನ ಕಾರ್ಯಕ್ರಮದ ಆಯೋಜನೆ ಮಾಡಿದೆ ಎಂದು ಹೇಳಿದರು.

ಭಾವನಾತ್ಮಕ ಸಂದರ್ಭಕ್ಕೆ ಸಾಕ್ಷಿ: ದಿವಂಗತ ಲೆಫ್ಟಿನೆಂಟ್ ಕರ್ನಲ್ ಅಜಿತ್ ವಿ.ಭಂಡಾರ್ಕರ್ ಅವರ ಸಾಹಸಗಾಥೆಯ ನೈಜ ಕಥೆ ಆಧಾರಿತ 'ದಿ ಸಾಗಾ ಆಫ್ ಎ ಬ್ರೇವ್ ಹಾರ್ಟ್' ಸಾಕ್ಷ್ಯಚಿತ್ರ ಪ್ರದರ್ಶನ ಭಾವನಾತ್ಮಕ ಸಂದರ್ಭಕ್ಕೆ ಸಾಕ್ಷಿಯಾಯಿತು. ಚಿತ್ರ ವೀಕ್ಷಣೆಗೆ ಬಂದಿದ್ದ ನೂರಾರು ಮಂದಿ ಕಲಾಸಕ್ತರು, ಎನ್‌ಸಿಸಿ ಕೆಡೆಟ್‌ಗಳು ಚಪ್ಪಾಳೆ ಮೂಲಕ ಗೌರವ ಸಲ್ಲಿಸಿದರು. ಅಲ್ಲದೆ ಮುಂದೆ ನಾವುಗಳು ಕೂಡ ಸೇನೆ ಸೇರಿ ದೇಶಸೇವೆ ಮಾಡುತ್ತೇವೆ ಎಂಬ ಅಭಿಪ್ರಾಯವನ್ನು ಎನ್‌ಸಿಸಿ ವಿದ್ಯಾರ್ಥಿಗಳು ವ್ಯಕ್ತಪಡಿಸಿದರು. ದಿವಂಗತ ಲೆಫ್ಟಿನೆಂಟ್ ಕರ್ನಲ್ ಅಜಿತ್ ವಿ.ಭಂಡಾರ್ಕರ್ ಅವರ ಪತ್ನಿ ಶಾಂತಲಾ ಭಂಡಾರ್ಕರ್ ಉಪಸ್ಥಿತರಿದ್ದರು.

ಒಡೆಯರ್ ಸಾಕ್ಷ್ಯಚಿತ್ರ ಪ್ರದರ್ಶನ...

ಇದೇ ವೇಳೆ ಜಯಚಾಮರಾಜ ಒಡೆಯರ್ ಕುರಿತಾದ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು. ಸಾಕ್ಷ್ಯಚಿತ್ರದ ಮೂಲಕ ಒಡೆಯರ್ ಅವರ ಬಾಲ್ಯ, ವಿದ್ಯಾಭ್ಯಾಸ, ಆಡಳಿತ, ಕೊಡುಗೆ ಹಾಗೂ ಪಡೆದು ಬಿರುದು–ಸನ್ಮಾನಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಲಾಯಿತು. ಅಲ್ಲದೆ 'ಕಾಯೌ ಶ್ರೀ ಗೌರಿ ಕರುಣಾಲಹರಿ' ಮೈಸೂರು ಸಂಸ್ಥಾನದ ರಾಜ್ಯ ಗೀತೆಯನ್ನು ಸಾಕ್ಷ್ಯಚಿತ್ರಕ್ಕೆ ಹಿನ್ನೆಲೆ ಧ್ವನಿಯಾಗಿ ಅಳವಡಿಸಿಕೊಂಡಿದ್ದು, ನೋಡುಗರ ಆಸಕ್ತಿಯನ್ನು ಹೆಚ್ಚಿಸಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ರಿಂಗ್ ರೋಡ್‌ನಲ್ಲಿ ವ್ಹೀಲಿಂಗ್: ನಾಲ್ವರ ಬಂಧನ, ವಾಹನ ವಶ

ಇನ್‌ಸ್ಟಾಗ್ರಾಂನಲ್ಲಿ ಅಪ್‌ಲೋಡ್ ಮಾಡಿದ್ದ ಫೋಟೋ ಆಧರಿಸಿ ಪ್ರಕರಣ ದಾಖಲು

ಮೈಸೂರು,ಜು.15(ಆರ್‌ಕೆ)–ರಿಂಗ್ ರೋಡ್‌ನಲ್ಲಿ ವ್ಹೀಲಿಂಗ್ ಮಾಡುತ್ತಿದ್ದ ನಾಲ್ವರು ಯುವಕರನ್ನು ಬಂಧಿಸಿರುವ ಮೈಸೂರಿನ ಸಂಚಾರ ಠಾಣೆಗಳ ಪೊಲೀಸರು, ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಸಿದ್ಧಾರ್ಥ ಸಂಚಾರ ಠಾಣೆಯಲ್ಲಿ 1, ಎನ್.ಆರ್.ನಲ್ಲಿ 2 ಹಾಗೂ ಕೆ.ಆರ್.ನಲ್ಲಿ 1 ಪ್ರಕರಣ ದಾಖಲಾಗಿದ್ದು, ವ್ಹೀಲಿಂಗ್‌ಗೆ ಬಳಸಿದ್ದ ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಸಾರ್ವಜನಿಕ ರಸ್ತೆಯಲ್ಲಿ ಅತೀ ವೇಗ, ನಿರ್ಲಕ್ಷ್ಯ ಮತ್ತು ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿರುವ ಬಗ್ಗೆ ಐಪಿಸಿ ಸೆಕ್ಷನ್ 279ರ ಅಡಿ ಪ್ರಕರಣ ದಾಖಲಿಸಿ ಓರ್ವ ಅಪ್ರಾಪ್ತ ಸೇರಿ ನಾಲ್ವರನ್ನು ಬಂಧಿಸಲಾಗಿದೆ ಎಂದು ಮೈಸೂರು ನಗರ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರಿನ ಎನ್.ಆರ್.ಮೊಹಲ್ಲಾದಲ್ಲಿ ರೂಂ ಮಾಡಿಕೊಂಡು ಕಂಪ್ಯೂಟರ್ ತರಬೇತಿ ಪಡೆಯುತ್ತಿದ್ದ ಮೂಲತಃ ಸಾಲಿಗ್ರಾಮ ನಿವಾಸಿ ಮೊಹಮದ್ ಅಣ್ಣಾಸ್, ತೌಸಿಫ್ ಖಾನ್, ಗೌತಮ್ ಹಾಗೂ ಓರ್ವ ಅಪ್ರಾಪ್ತ ವ್ಹೀಲಿಂಗ್ ಮಾಡಿದ್ದ ಫೋಟೋ, ವಿಡಿಯೋವನ್ನು ಇನ್‌ಸ್ಟಾಗ್ರಾಂನಲ್ಲಿ ಅಪ್‌ಲೋಡ್ ಮಾಡಿ ಪೊಲೀಸರಿಗೆ ಸಿಕ್ಕಿಬಿದ್ದವರಾಗಿದ್ದಾರೆ.

ರಿಂಗ್ ರಸ್ತೆ, ಕಾಲೇಜುಗಳ ಮುಂದೆ ಮನಸ್ಸೋ ಇಚ್ಛೆ ವ್ಹೀಲಿಂಗ್ ಮಾಡಿ ಬೇರೆಯವರಿಗೆ ತೊಂದರೆ ಕೊಡುವುದು, ಹುಡುಗಿಯರನ್ನು ಚುಡಾಯಿಸುವುದು, ಸೈಲೆನ್ಸರ್ ಬದಲಿಸಿಕೊಂಡು ಬೈಕ್ ಓಡಿಸುವ ಪ್ರಕರಣಗಳು ಜಾಸ್ತಿಯಾದ ಕಾರಣ ಎಚ್ಚೆತ್ತ ಸಂಚಾರ ಠಾಣೆ ಪೊಲೀಸರು, ಇದೀಗ ತಪಾಸಣಾ ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದು, ವ್ಹೀಲಿಂಗ್ ಮಾಡುವವರಿಗೆ ಮಾತ್ರ ಎಫ್‌ಐಆರ್ ದಾಖಲಿಸಿ, ಸವಾರರನ್ನು ಬಂಧಿಸುತ್ತಿದ್ದಾರೆ.

ಕೆಲವರು ರಿಂಗ್ ರಸ್ತೆಯಲ್ಲಿ ವ್ಹೀಲಿಂಗ್ ಮಾಡಿದ್ದನ್ನು ವಿಡಿಯೋ ರೆಕಾರ್ಡ್ ಮಾಡಿ ಇನ್‌ಸ್ಟಾಗ್ರಾಂನಲ್ಲಿ ಹಾಕಿ ಕೊಂಡಿದ್ದರು. ಅಂತಹ ವಾಹನಗಳ ರಿಜಿಸ್ಟ್ರೇಷನ್ ನಂಬರ್ ಮೂಲಕ ಪತ್ತೆ ಮಾಡಿ ಆರ್‌ಸಿ ಓನರ್ ವಿರುದ್ಧವೂ ಪ್ರಕರಣ ದಾಖಲಿಸುವ ಜೊತೆಗೆ ವ್ಹೀಲಿಂಗ್ ಮಾಡುವವರನ್ನು ಬಂಧಿಸಲಾಗುವುದು ಎಂದು ಪರಶುರಾಮಪ್ಪ ತಿಳಿಸಿದ್ದಾರೆ.

ಇನ್ನು ಮುಂದೆ ಸಂಚಾರ ಪೊಲೀಸರು ಕಾರ್ಯಾಚರಣೆಯನ್ನು ತೀವ್ರಗೊಳಿಸಲಿದ್ದು, ಸಂಚಾರ ನಿಯಮ ಉಲ್ಲಂಘನೆಯಷ್ಟೇ ಅಲ್ಲದೆ, ಡಿಫೆಕ್ಟಿವ್ ಸೈಲೆನ್ಸರ್, ನಂಬರ್ ಪ್ಲೇಟ್ ಅಳವಡಿಸಿ ಚಾಲನೆ, ವ್ಹೀಲಿಂಗ್ ಸೇರಿದಂತೆ ಸಾರ್ವಜನಿಕರಿಗೆ ತೊಂದರೆಯಾಗುವಂತೆ ವಾಹನ ಚಾಲನೆ ಮಾಡುವವರ ವಿರುದ್ಧ ಕೇಸು ದಾಖಲಿಸಿ ಅಗತ್ಯ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಐವರು ನಾಪತ್ತೆ: ಪ್ರಕರಣ ದಾಖಲು

ಮೈಸೂರು, ಜು. 15– ಮೈಸೂರಿನ ನರಸಿಂಹರಾಜ ಠಾಣೆ ವ್ಯಾಪ್ತಿಯಲ್ಲಿ ಐವರು ನಾಪತ್ತೆಯಾಗಿರುವ ಬಗ್ಗೆ ವರದಿಯಾಗಿದೆ. ಈ ಠಾಣಾ ವ್ಯಾಪ್ತಿಯ ಸಿ.ಸೋಮಶೇಖರ್(38) ಎಂಬಾತ ಮಾನಸಿಕ ಅಸ್ವಸ್ಥನಾಗಿದ್ದು, ಕಳೆದ ಏಪ್ರಿಲ್ 4ರಂದು ಮನೆಯಿಂದ ಹೊರ ಹೋದವನು ಈವರೆಗೂ ವಾಪಸ್ಸಾಗಿಲ್ಲ. ಉತ್ತರ ಪ್ರದೇಶ ಮೂಲದ ಶಾರಿಕ್(25) ಎಂಬಾತ ಪತ್ನಿಯೊಂದಿಗೆ ಜಗಳವಾಡಿಕೊಂಡು ಜು.7ರಂದು ಮನೆ ಬಿಟ್ಟು ಹೋದವನು ಹಿಂತಿರುಗಿಲ್ಲ. ಈ ಠಾಣಾ ವ್ಯಾಪ್ತಿಯ ನಿವಾಸಿಯಾಗಿದ್ದು, ಕ್ಯೂ ಸ್ಟಾರ್ ಹೋಟೆಲ್‌ನಲ್ಲಿ ಸೆಕ್ಯೂರಿಟಿಯಾಗಿ ಕೆಲಸ ಮಾಡುತ್ತಿದ್ದ ಶ್ರೀಕಂಠ(38) ಎಂಬಾತ ವಾರಕ್ಕೊಮ್ಮೆ ಮನೆಗೆ ಬರುತ್ತಿದ್ದ. ಈತ ಕಳೆದ 2 ತಿಂಗಳಿನಿಂದಲೂ ಮನೆಗೆ ಬಾರದ ಕಾರಣ ಈತನ ಪೋಷಕರು ಹೋಟೆಲ್‌ಗೆ ಹೋಗಿ ವಿಚಾರಿಸಲಾಗಿ, ಆತ ಅಲ್ಲಿಗೂ ಹೋಗಿರಲಿಲ್ಲ ಎಂಬುದು ಗೊತ್ತಾಗಿದೆ.

ಹೂವಿನ ವ್ಯಾಪಾರಿ ಕೆಂಪಣ್ಣ(43) ಎಂಬಾತ ವ್ಯಾಪಾರಕ್ಕೆಂದು ಹೋದವರು ಮತ್ತೆ ಮನೆಗೆ ಹಿಂದಿರುಗಲಿಲ್ಲ ಎಂದು ಆತನ ಪತ್ನಿ ದೂರು ಸಲ್ಲಿಸಿದ್ದಾರೆ. ನಿಂಗರಾಜು(60) ಎಂಬುವರು ಕ್ಯಾತಮಾರನಹಳ್ಳಿಯ 2ನೇ ಹೆಂಡತಿ ಮನೆಗೆ ಹೋಗುವುದಾಗಿ ಕಳೆದ ಮಾರ್ಚ್ 30ರಂದು ರಾತ್ರಿ ಹೋದವರು ಅಲ್ಲಿಗೂ ಹೋಗದೇ, ಮನೆಗೂ ಬರದೇ ನಾಪತ್ತೆಯಾಗಿದ್ದಾರೆ ಎಂದು ಅವರ ಪುತ್ರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಈ ವ್ಯಕ್ತಿಗಳ ಬಗ್ಗೆ ಮಾಹಿತಿ ಇರುವವರು ಎನ್.ಆರ್. ಠಾಣೆ ದೂರವಾಣಿ ಸಂಖ್ಯೆ: 0821–2418312 ಅಥವಾ ಮೈಸೂರು ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 2418339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ರಾಜಾರೋಷವಾಗಿ ಗಾಂಜಾ ಮಾರಾಟ ಮಾಡಲೆತ್ನಿಸಿದ ರಾಜಸ್ಥಾನ ವ್ಯಕ್ತಿ ಬಂಧನ

4 ಕೆಜಿ ಗಾಂಜಾ ವಶ

ಮೈಸೂರು,ಜು.15–ಮೈಸೂರಿನಲ್ಲಿ ಗಾಂಜಾ ಮಾರಾಟ ಮಾಡಲು ಬಂದಿದ್ದ ರಾಜಸ್ಥಾನ ಮೂಲದ ವ್ಯಕ್ತಿಯನ್ನು ಬಂಧಿಸಿರುವ ಸಿಸಿಬಿ ಪೊಲೀಸರು ಆತನಿಂದ 4.090 ಕೆಜಿ ಗಾಂಜಾ ವಶಪಡಿಸಿಕೊಂಡಿದ್ದಾರೆ. ರಾಜಸ್ಥಾನದ ಕುಂದನ್ ಸಿಂಗ್(25) ಬಂಧಿತನಾಗಿದ್ದು, ಈತ ಕಾಲೇಜ್ ಬ್ಯಾಗ್ ನೇತು ಹಾಕಿಕೊಂಡು ಮೈಸೂರಿನ ಗುಡ್ ಶಫರ್ಡ್ ಕಾನ್ವೆಂಟ್ ರಸ್ತೆಯಲ್ಲಿ ಅನುಮಾನಾಸ್ಪದವಾಗಿ ತಿರುಗುತ್ತಿದ್ದಾಗ ಆತನನ್ನು ವಶಕ್ಕೆ ಪಡೆದು, ಸಿಸಿಬಿ ಇನ್ಸ್‌ಪೆಕ್ಟರ್ ಮಲ್ಲೇಶ್, ಸಿಬ್ಬಂದಿಗಳಾದ ಮಂಜುನಾಥ್, ರಘು, ಅರುಣ್ ಕುಮಾರ್, ಮಧುಕುಮಾರ್ ತಪಾಸಣೆ ನಡೆಸಿದಾಗ ಆತನ ಬ್ಯಾಗ್‌ನಲ್ಲಿ 4.090 ಕೆಜಿ ಗಾಂಜಾ ಪತ್ತೆಯಾಗಿದೆ. ತಾನು ಈ ಗಾಂಜಾವನ್ನು ವಿಶಾಖಪಟ್ಟಣಂನಲ್ಲಿ ಖರೀದಿಸಿದ್ದು, ಅದನ್ನು ಮೈಸೂರಿನ ಜಾವಿದ್ ಎಂಬಾತನಿಗೆ ಮಾರಾಟ ಮಾಡುವ ಸಲುವಾಗಿ ಬಂದಿರುವುದಾಗಿ ಪೊಲೀಸರ ವಿಚಾರಣೆಯಲ್ಲಿ ತಿಳಿಸಿದ್ದಾನೆ. ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರು ಡಿಕ್ಕಿ; ಬೈಕ್ ಸವಾರ ಸಾವು

ಮೈಸೂರು, ಜು. 15– ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿದ ಘಟನೆ ಮೈಸೂರಿನ ಸಿದ್ಧಾರ್ಥನಗರದ ಮಲೆಮಹದೇಶ್ವರ ರಸ್ತೆ ಮತ್ತು ವಾಯುಮಾರ್ಗ ವಿಹಾರ ರಸ್ತೆ ಜಂಕ್ಷನ್‌ನಲ್ಲಿ ಸಂಭವಿಸಿದೆ.

ಹೆಚ್.ಡಿ.ಕೋಟೆ ತಾಲೂಕು ಸಿಂಡೇನಹಳ್ಳಿ ಗ್ರಾಮದ ಎಂ.ನಾಗೇಶ್ (23) ಅಪಘಾತದಲ್ಲಿ ಸಾವನ್ನಪ್ಪಿದವನಾಗಿದ್ದು, ಈತ ಜುಲೈ 13ರಂದು ರಾತ್ರಿ 10 ಗಂಟೆ ಸುಮಾರಿನಲ್ಲಿ ಪಲ್ಸರ್ ಬೈಕ್ (ಕೆಎ 41–ಇಎಲ್ 7229)ನಲ್ಲಿ ಯರಗನಹಳ್ಳಿ ಕಡೆಯಿಂದ ನಜರ್‌ಬಾದ್ ಕಡೆಗೆ ತೆರಳುತ್ತಿದ್ದಾಗ, ನಜರ್‌ಬಾದ್ ಕಡೆಯಿಂದ ಅತೀ ವೇಗವಾಗಿ ಕಾರನ್ನು (ಕೆಎ 09–ಎಂಜೆ 2841) ಚಾಲನೆ ಮಾಡಿಕೊಂಡು ಬಂದ ಹರ್‌ಪ್ರೀತ್‌ಸಿಂಗ್ ಎಂಬಾತ ಮಲೆ ಮಹದೇಶ್ವರ ರಸ್ತೆ ಮತ್ತು ವಾಯುಮಾರ್ಗ ವಿಹಾರ ರಸ್ತೆಯಲ್ಲಿ ಬೈಕ್‌ಗೆ ಮುಖಾಮುಖಿ ಡಿಕ್ಕಿ ಹೊಡೆದಿದ್ದಾರೆ. ತೀವ್ರವಾಗಿ ಗಾಯಗೊಂಡ ನಾಗೇಶ್ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೇ ರಾತ್ರಿ 10.50ರ ಸುಮಾರಲ್ಲಿ ಆತ ಸಾವನ್ನಪ್ಪಿದ್ದಾನೆ. ಈ ಸಂಬಂಧ ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟ್ಯೂಷನ್ ಮಾಡುತ್ತಿದ್ದ ಪದವೀಧರ ಯುವತಿ ನಾಪತ್ತೆ

ಮೈಸೂರು, ಜು. 15– ಮಕ್ಕಳಿಗೆ ಟ್ಯೂಷನ್ ಹೇಳಿಕೊಡುತ್ತಿದ್ದ ಪದವೀಧರ ಯುವತಿ ನಾಪತ್ತೆಯಾಗಿರುವ ಬಗ್ಗೆ ರಮಾಬಾಯಿನಗರದ ರೈಲ್ವೇ ಲೇಔಟ್‌ನಿಂದ ವರದಿಯಾಗಿದೆ.

ಇಲ್ಲಿನ ನಿವಾಸಿ ಲಾಲ್‌ಸಾಬು ಶರ್ಮಾ ಎಂಬುವರ ಪುತ್ರಿ ಸೋನಿ ಕುಮಾರಿ ಶರ್ಮಾ(23) ನಾಪತ್ತೆಯಾದವಳಾಗಿದ್ದು, ಈಕೆ ಪದವಿ ಪೂರೈಸಿದ ನಂತರ ಮನೆಯಲ್ಲೇ ಮಕ್ಕಳಿಗೆ ಟ್ಯೂಷನ್ ಹೇಳಿಕೊಡುತ್ತಿದ್ದಳು. ಜುಲೈ 7ರಂದು ಮಧ್ಯಾಹ್ನ ತನ್ನ ಆಧಾರ್ ಕಾರ್ಡ್, ವ್ಯಾಸಂಗದ ದಾಖಲೆಗಳೊಂದಿಗೆ ಮನೆಯಿಂದ ಹೊರ ಹೋದವಳು ಈವರೆಗೂ ವಾಪಸ್ ಆಗಿಲ್ಲ ಎಂದು ಈಕೆಯ ತಂದೆ ಲಾಲ್‌ಸಾಬು ಶರ್ಮಾ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮೈಸೂರು ದಕ್ಷಿಣ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ. ಈಕೆಯ ಬಗ್ಗೆ ಮಾಹಿತಿ ಇರುವವರು ಮೈಸೂರು ದಕ್ಷಿಣ ಠಾಣೆ ದೂಸಂ. 0821–2444955 ಅಥವಾ ಮೈಸೂರು ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ 2444800 ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಮಕ್ಕಳಿಗೆ ವೈಟ್ನರ್ ಮಾರಾಟ: ಮಹಿಳೆ ವಿರುದ್ಧ ಕೇಸ್

ಮೈಸೂರು, ಜು. 15– ಅಪ್ರಾಪ್ತ ಮಕ್ಕಳಿಗೆ ವೈಟ್ನರ್ ಮಾರಾಟ ಮಾಡುತ್ತಿದ್ದ ಆರೋಪದ ಮೇರೆಗೆ ನಜರ್‌ಬಾದ್ ಠಾಣೆ ಪೊಲೀಸರು ಮಹಿಳೆ ವಿರುದ್ಧ ಕೇಸ್ ದಾಖಲಿಸಿದ್ದಾರೆ.

ಮೈಸೂರಿನ ರಾಘವೇಂದ್ರನಗರ ನಿವಾಸಿ ಶಮಾಬಾನು ಆರೋಪಕ್ಕೆ ಗುರಿಯಾದವರಾಗಿದ್ದು, ಮೈಸೂರು ನಗರ ಪೊಲೀಸ್ ಮಕ್ಕಳ ವಿಶೇಷ ಘಟಕದ ಸಹಾಯಕ ಮಕ್ಕಳ ಕಲ್ಯಾಣಾಧಿಕಾರಿ ಜಿ.ಎಸ್.ಪ್ರಸನ್ನಕುಮಾರ್ ದಾಳಿ ನಡೆಸಿದಾಗ ಶಮಾ ಬಾನು ಅಪ್ರಾಪ್ತ ಮಕ್ಕಳಿಗೆ ವೈಟ್ನರ್ ಮಾರಾಟ ಮಾಡುತ್ತಿದ್ದುದು ಕಂಡು ಬಂದಿದೆ. ವೈಟ್ನರ್ ವಾಸನೆ ನೇರವಾಗಿ ಗ್ರಹಿಸಿದಲ್ಲಿ ಜೀವಕ್ಕೆ ಅಪಾಯವಾಗುವ ಸಂಭವವಿದ್ದು, ಇದನ್ನು ಮಕ್ಕಳಿಗೆ ಮಾರಾಟ ಮಾಡುವ ಮೂಲಕ ಅವರ ಆರೋಗ್ಯಕ್ಕೆ ಹಾನಿ ಉಂಟು ಮಾಡಲಾಗುತ್ತಿದೆ ಎಂದು ಪ್ರಸನ್ನಕುಮಾರ್ ನೀಡಿದ ದೂರನ್ನು ನಜರ್‌ಬಾದ್ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಮೈಸೂರಿನ ಬಿವಿಬಿ ಶಾಲೆಯಲ್ಲಿ ಸಂಸ್ಕೃತೋತ್ಸವ



ಮೈಸೂರು ವಿಜಯನಗರ ಮೊದಲ ಹಂತದಲ್ಲಿನ ಭಾರತೀಯ ವಿದ್ಯಾಭವನ (ಬಿವಿಬಿ) ಶಾಲೆಯಲ್ಲಿ ಶನಿವಾರ 2023–24ನೇ ಸಾಲಿನ ಅಂತರ ಶಾಲಾ ಸಂಸ್ಕೃತೋತ್ಸವ ಸ್ಪರ್ಧೆಯನ್ನು ಖ್ಯಾತ ಸಂಸ್ಕೃತ ವಿದ್ವಾಂಸ ವಿದ್ವಾನ್ ಹೆಚ್.ವಿ.ನಾಗರಾಜ ರಾವ್ (ಬಲದಿಂದ ಮೂರನೇಯವರು) ಉದ್ಘಾಟಿಸಿದರು. ಬಿವಿಬಿ ಅಧ್ಯಕ್ಷ ಕೆ.ಬಿ.ಗಣಪತಿ, ಉಪಾಧ್ಯಕ್ಷ ಡಾ.ಸಿ.ನಾಗಣ್ಣ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಗೌರವ ಖಜಾಂಚಿ ಡಾ.ಎ.ಟಿ.ಭಾಷ್ಯಂ, ಪ್ರಾಂಶುಪಾಲರಾದ ಎಸ್.ಲೇಖಾ ನಾಯರ್, ಉಪ ಪ್ರಾಂಶುಪಾಲರಾದ ಹೆಚ್.ಎನ್.ಪ್ರಫುಲ್ಲಾ, ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್, ಸಂಸ್ಕೃತ ಶಿಕ್ಷಕರಾದ ಎಸ್.ವಿ.ಕಲಾವತಿ, ಎಂ.ವಿ.ಶಾಮಾ ಚಿತ್ರದಲ್ಲಿದ್ದಾರೆ. 25 ಶಾಲೆಗಳಿಂದ ಒಟ್ಟು 300 ವಿದ್ಯಾರ್ಥಿಗಳು ಭಜನೆ, ಭಗವದ್ಗೀತೆ, ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಸಿಎಂ ಸಿದ್ದರಾಮಯ್ಯರ ವಿರುದ್ಧ ಅವಹೇಳನ ಪೋಸ್ಟ್; ಯುವಕನ ಬಂಧನ, ಬಿಡುಗಡೆ

ತಿ.ನರಸೀಪುರ,ಜು. 15–ಇತ್ತೀಚೆಗೆ ತಿ.ನರಸೀಪುರದಲ್ಲಿ ನಡೆದಿದ್ದ ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ ನಾಯಕ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ರಾಜ್ಯ ಸರ್ಕಾರದ ವಿರುದ್ಧ ಇನ್‌ಸ್ಟಾಗ್ರಾಂನಲ್ಲಿ ಅವಹೇಳನಕಾರಿ ಪೋಸ್ಟ್ ಮಾಡಿದ್ದ ಯುವಕನನ್ನು ತಿ.ನರಸೀಪುರ ಠಾಣೆ ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದ್ದಾರೆ.

ಇನ್‌ಸ್ಟಾಗ್ರಾಂನಲ್ಲಿ rajee-hindu ಹೆಸರಿನ ಖಾತೆ ಹೊಂದಿರುವ ಯುವಕ ಜು.10ರಂದು ಮುಖ್ಯಮಂತ್ರಿಗಳು ಮತ್ತು ಸರ್ಕಾರದ ವಿರುದ್ಧ ಅವಹೇಳನಕಾರಿಯಾಗಿ ಪೋಸ್ಟ್ ಮಾಡಿದ್ದಾನೆ ಎಂದು ಮೈಸೂರು ತಾಲೂಕು ಮೆಲ್ಲಹಳ್ಳಿ ಗ್ರಾಮದ ಎಂ.ಎನ್.ರವಿಕುಮಾರ್ (ರವಿ ಎನ್.ಗೌಡ, ಮೆಲ್ಲಹಳ್ಳಿ) ಎಂಬುವರು ದೂರು ಸಲ್ಲಿಸಿದ್ದರು. ಈ ದೂರಿನನ್ವಯ ನ್ಯಾಯಾಲಯದ ಅನುಮತಿ ಪಡೆದು ತಿ.ನರಸೀಪುರ ಠಾಣೆ ಪೊಲೀಸರು ಯುವಕನ ವಿರುದ್ಧ ಜು.14ರಂದು ಭಾರತೀಯ ದಂಡ ಸಂಹಿತೆ 504, 505(1)(ಬಿ) ಅಡಿ ಪ್ರಕರಣ ದಾಖಲಿಸಿಕೊಂಡು ಆತನನ್ನು ಬಂಧಿಸಿ, ನೋಟಿಸ್ ನೀಡಿ, ಬಿಡುಗಡೆಗೊಳಿಸಿದ್ದಾರೆ.


ಜನಸಾಮಾನ್ಯರಿಗೆ ಮತ್ತೊಂದು ಶಾಕ್

ತಿಂಡಿ–ತಿನಿಸು ಬೆಲೆ ಹೆಚ್ಚಳಕ್ಕೆ ಹೋಟೆಲ್ ಮಾಲೀಕರ ತೀರ್ಮಾನ

ಮೈಸೂರು, ಜು.15(ಬಿಎಲ್‌ಯು)– ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಜನಸಾಮಾನ್ಯರಿಗೆ ಈಗ ಮತ್ತೊಂದು ಶಾಕ್ ಎದುರಾಗಿದೆ. ಹೋಟೆಲ್ ತಿಂಡಿ ತಿನಿಸುಗಳ ಬೆಲೆ ಹೆಚ್ಚಳ ಮಾಡಲು ಹೋಟೆಲ್ ಮಾಲೀಕರು ತೀರ್ಮಾನ ಮಾಡಿದ್ದಾರೆ.

ಬೆಲೆ ಏರಿಕೆಯ ಬಿಸಿ ಒಂದಾದ ಮೇಲೆ ಒಂದರಂತೆ ತಟ್ಟುತ್ತಲೇ ಇದೆ. ಇತ್ತೀಚೆಗೆ ವಿದ್ಯುತ್ ದರ ಹೆಚ್ಚಳದಿಂದ ಜನರು ಕಂಗಾಲಾಗಿದ್ದರು. ಇದರ ಮಧ್ಯೆ ಮತ್ತೊಂದು ಹೊರೆ ಹೊರಲು ಜನರು ಸಿದ್ಧರಾಗಬೇಕಾಗಿದೆ.

ಕೊರೊನಾ ಸೇರಿದಂತೆ ಇತ್ತೀಚಿನ ಆರ್ಥಿಕ ಬೆಳವಣಿಗೆಯಲ್ಲಿ ಕೆಲವರಿಗೆ ಸಂಪಾದನೆಗೆ ಕಲ್ಲು ಬಿದ್ದರೆ, ಮತ್ತೆ ಕೆಲವರ ಸಂಪಾದನೆಯಲ್ಲಿ ಆರಕ್ಕೆ ಹತ್ತದೆ ಮೂರಕ್ಕೆ ಇಳಿಯದೇ ಇದ್ದಷ್ಟೇ ಇದೆ. ಇನ್ನು ಕೆಲವರು ನಿರುದ್ಯೋಗಿಗಳಾಗಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಳೆ ಇಲ್ಲದ ಕಾರಣ ರೈತನ ಪಾಡಂತೂ ಹೇಳ ತೀರದಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಬೆಲೆಗಳು ಸರಣಿಯೋಪಾದಿ ಹೆಚ್ಚಳವಾಗುತ್ತಲೇ ಇದೆ. ಈ ಮಧ್ಯೆ ಈಗ ಹೋಟೆಲ್ ತಿಂಡಿ–ತಿನಿಸುಗಳ ಬೆಲೆ ಹೆಚ್ಚಳವಾಗುತ್ತಿರುವುದು ಜನಗೆ ಅಧಿಕ ಹೊರೆಯಾಗಲಿದೆ.



ದಿನಸಿ, ತರಕಾರಿ, ಕಾಫಿ ಹಾಗೂ ಟೀ ಪುಡಿ, ನಾನಾ ಉಪ ವಸ್ತುಗಳ ಬೆಲೆ ಏರಿಕೆಯಾಗಿದೆ. ಇದರ ಮಧ್ಯೆ ವಿದ್ಯುತ್ ದರವೂ ಹೆಚ್ಚಳವಾಗಿದೆ. ಈ ಹಿನ್ನೆಲೆಯಲ್ಲಿ ಹೋಟೆಲ್ ತಿಂಡಿ ತಿನಿಸುಗಳ ಬೆಲೆಯನ್ನು ಶೇ.5ರಷ್ಟು ಹೆಚ್ಚಳ ಮಾಡಲು ಹೋಟೆಲ್ ಮಾಲೀಕರು ತೀರ್ಮಾನ ಮಾಡಿದ್ದಾರೆ.

ದಿನಸಿ ಬೆಲೆ ಶೇಕಡ 20, ತರಕಾರಿ ಬೆಲೆ ಶೇಕಡ 30ರಿಂದ 40, ಅಕ್ಕಿ ಬೆಲೆ ಶೇ.12ರಷ್ಟು ಹೆಚ್ಚಳವಾಗಿದೆ. ಇನ್ನು ಕಾಫಿ ಮತ್ತು ಟೀ ಪುಡಿ ಕೆ.ಜಿ.ಗೆ 60ರಿಂದ 80 ರೂ. ಹೆಚ್ಚಳವಾಗಿದೆ. ಇದರ ಜೊತೆಗೆ ಸಕ್ಕರೆ ದರವೂ ಏರಿಕೆಯಾಗಿದೆ. ಮತ್ತೆ ಹಾಲಿನ ದರ ಹೆಚ್ಚಳ ಮಾಡುವುದಾಗಿ ಸರ್ಕಾರ ಹೇಳಿದೆ. ಇದೆಲ್ಲದರ ನಡುವೆ ವಿದ್ಯುತ್ ದರ ಶೇ.60ರಷ್ಟು ದುಬಾರಿಯಾಗಿದೆ. ಇತ್ತೀಚೆಗೆ ನೀರಿನ ಕಂದಾಯದ ಜೊತೆಗೆ ಒಳಚರಂಡಿ ಶುಲ್ಕವನ್ನು ಶೇ. 30ರಷ್ಟು ಸದ್ದಿಲ್ಲದೆ ಹೆಚ್ಚಳ ಮಾಡಿದ್ದಾರೆ. ಇದರಿಂದ ಶೇಕಡಾ 5ರಷ್ಟು ಹೋಟೆಲ್ ತಿಂಡಿ–ತಿನಿಸುಗಳ ಬೆಲೆ ಹೆಚ್ಚಳ ಅನಿವಾರ್ಯವಾಗಿದೆ ಎಂದು ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ತಿಳಿಸಿದ್ದಾರೆ.

ಕಳೆದ 2 ವರ್ಷದ ಹಿಂದೆ ಹೋಟೆಲ್ ತಿಂಡಿ ತಿನಿಸುಗಳ ಬೆಲೆ ಹೆಚ್ಚಳ ಮಾಡಲಾಗಿತ್ತು. ತರುವಾಯ ಬಹಳಷ್ಟು ವಸ್ತುಗಳ ಬೆಲೆ ಹೆಚ್ಚಳವಾದರೂ ಬೆಲೆ ಹೆಚ್ಚಳ ಮಾಡಿರಲಿಲ್ಲ. ಆದರೆ ಈಗ ದರ ಹೆಚ್ಚಳ ಮಾಡದೆ ಬೇರೆ ದಾರಿಯೇ ಇಲ್ಲ ಎಂದು ಹೋಟೆಲ್ ಮಾಲೀಕರು ಹೇಳಿದ್ದಾರೆ.

ಮಳೆ ಇಲ್ಲದ ಕಾರಣ ತರಕಾರಿ ಬೆಲೆ ಗಗನಕ್ಕೇರುತ್ತಿದೆ. ತರಕಾರಿ ಇಲ್ಲದೆ ಯಾವುದೇ ಆಹಾರ ಪದಾರ್ಥ ತಯಾರಿಕೆ ಸಾಧ್ಯವಿಲ್ಲ. ಇದರಿಂದ ಆಗುತ್ತಿರುವ ನಷ್ಟವನ್ನು ಸರಿದೂಗಿಸಲು ತಿಂಡಿ–ತಿನಿಸುಗಳ ಬೆಲೆ ಹೆಚ್ಚಳದ ಮೂಲಕ ಅದನ್ನು ಗ್ರಾಹಕನ ಮೇಲೆ ವರ್ಗಾಯಿಸಲು ಹೋಟೆಲ್ ಮಾಲೀಕರು ನಿರ್ಧರಿಸಿದ್ದಾರೆ.

ತಿಂಡಿ–ತಿನಿಸು ಬೆಲೆ ಹೆಚ್ಚಳಕ್ಕೆ ಕಾರಣ

- ವಿದ್ಯುತ್ ದರ ಹೆಚ್ಚಳ
- ತರಕಾರಿ ಬೆಲೆ ಏರಿಕೆ
- ದಿನಸಿ ಬೆಲೆ ಗಗನಕ್ಕೆ
- ನಾನಾ ಉಪ ವಸ್ತುಗಳ ಬೆಲೆಯೂ ದುಬಾರಿ
- ನೀರು, ಒಳಚರಂಡಿ ಶುಲ್ಕ ಹೆಚ್ಚಳ
- ನಿರ್ವಹಣೆ ವೆಚ್ಚವೂ ಅಧಿಕ

ದಿನಸಿ, ತರಕಾರಿ ಸೇರಿದಂತೆ ಇತರೆ ವಸ್ತುಗಳ ಬೆಲೆ ಕಡಿಮೆ ಆಗಬಹುದು ಎಂದು ಕಾಯುತ್ತಿದ್ದೆವು. ಆದರೆ ಇಷ್ಟು ದಿನವಾದರೂ ಬೆಲೆ ಕಡಿಮೆ ಆಗುವ ಲಕ್ಷಣಗಳು ಕಾಣಿಸುತ್ತಿಲ್ಲ. ಇದರಿಂದ ನಮಗೆ ಆಗುತ್ತಿರುವ ನಷ್ಟ ಸರಿದೂಗಿಸಲು ತಿಂಡಿ–ತಿನಿಸುಗಳ ಬೆಲೆ ಹೆಚ್ಚಳ ಅನಿವಾರ್ಯವಾಗಿದೆ ಎಂದು ತಿಳಿಸಿದ್ದಾರೆ.

ದರ ಹೆಚ್ಚಳ ಮಾಡುವ ಬಗ್ಗೆ ಹೋಟೆಲ್ ಮಾಲೀಕರು ತೀರ್ಮಾನ ಮಾಡಿದ್ದೇವೆ. ಆದರೆ ಯಾವಾಗ ಮಾಡಬೇಕು ಎಂಬುದು ಆಯಾ ಹೋಟೆಲ್ ಮಾಲೀಕರ ವಿವೇಚನೆಗೆ ಬಿಟ್ಟಿದ್ದೇವೆ. ಇದಕ್ಕಾಗಿ ಹೋಟೆಲ್ ಮಾಲೀಕರ ಸಂಘ ಸಭೆ ಕರೆದು ತೀರ್ಮಾನ ಮಾಡುವುದಿಲ್ಲ ಎಂದು ನಾರಾಯಣಗೌಡ ಸ್ಪಷ್ಟಪಡಿಸಿದ್ದಾರೆ.

ವಿದ್ಯುತ್ ದರ ಹೆಚ್ಚಳ ಪುನರ್ ಪರಿಶೀಲನೆ ಮಾಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದೆವು. ಆದರೆ ಸರ್ಕಾರ ನಮ್ಮ ಮನವಿಗೆ ಸ್ಪಂದಿಸಿಲ್ಲ. ಇಂತಹ ಸನ್ನಿವೇಶದಲ್ಲಿ ಸರ್ಕಾರಕ್ಕೆ ಮನವಿ ಮಾಡಿದರೆ ಏನು ಪ್ರಯೋಜನವಾಗುವುದಿಲ್ಲ. ಯಾವ ಬೆಲೆ ಏರಿಕೆಗೂ ಕಡಿವಾಣ ಬೀಳುವುದಿಲ್ಲ ಈ ಕಾರಣ ವಿಧಿ ಇಲ್ಲದೆ ತಿಂಡಿ–ತಿನಿಸುಗಳ ಬೆಲೆ ಹೆಚ್ಚಳ ಮಾಡಲು ತೀರ್ಮಾನ ಮಾಡಿದ್ದೇವೆ ಎಂದು ಹೋಟೆಲ್ ಮಾಲೀಕರು ಹೇಳಿದ್ದಾರೆ.



ಮೈಸೂರಿನಲ್ಲಿ ಇತ್ತೀಚೆಗೆ ಇನ್ನರ್ ವ್ಹೀಲ್‌ಕ್ಲಬ್ ಆಫ್ ಮೈಸೂರು ಮಿಡ್‌ಟೌನ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು. (ಹಿಂಭಾಗದಲ್ಲಿ ಇರುವವರು, ಎಡದಿಂದ ಬಲಕ್ಕೆ) ಕಾರ್ಯಕಾರಿ ಸಮಿತಿ ಸದಸ್ಯೆ ಲಾವಣ್ಯ ಶ್ರೀನಿವಾಸ್, ವೆಬ್ ಸಂಚಾಲಕಿ ಶೀಲಾ ಗೋಪಾಲ್, ಜಂಟಿ ಕಾರ್ಯದರ್ಶಿ ರಶ್ಮಿ ಕಾವೇರಮ್ಮ, ನಿಕಟಪೂರ್ವ ಅಧ್ಯಕ್ಷೆ ವಿಮಲಾ ನಾಗರಾಜ್, ಕ್ಲಬ್‌ನ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷೆ ನೈನಾ ಅಚ್ಚಪ್ಪ, ಅಧ್ಯಕ್ಷೆ ಮುವೇನ್ ಸುರ್ಯಾನಿ (ಸಭಾ), ಗೌರವ ಕಾರ್ಯದರ್ಶಿ ಸಂಧ್ಯಾ ಸುರೇಶ್, ಉಪಾಧ್ಯಕ್ಷೆ ಅಶ್ವಿನಿ ರಾಘವೇಂದ್ರ, ಖಜಾಂಚಿ ವಿಜಯಂತಿ, (ಮುಂಭಾಗದಲ್ಲಿ ಇರುವವರು, ಎಡದಿಂದ ಬಲಕ್ಕೆ) ಕಾರ್ಯಕಾರಿ ಸಮಿತಿ ಸದಸ್ಯರಾದ ಸಂಧ್ಯಾ ಮೋಹನ್, ಕಲಾ ಸತ್ಯೇಂದ್ರ, ರೇವತಿ ಬಾಲಾಜಿ, ಅಂತಾರಾಷ್ಟ್ರೀಯ ಸೇವಾ ಸಂಘಟಕಿ (ಐಎಸ್‌ಓ) ಕುಸುಮ, ಎಡಿಟರ್ ಜಯಲಕ್ಷ್ಮೀ ರಾಘವ್, ಕಾರ್ಯಕಾರಿ ಸಮಿತಿ ಸದಸ್ಯೆ ಆಶಾ ಮಹೇಶ್ ಚಿತ್ರದಲ್ಲಿದ್ದಾರೆ.

ವೆಸ್ಟ್ ಇಂಡೀಸ್ ವಿರುದ್ಧ ನಿರಾಯಾಸವಾಗಿ ಗೆದ್ದ ಭಾರತ



ಡೊಮಿನಿಕಾ(ವೆಸ್ಟ್ ಇಂಡೀಸ್) ಜು.15(ಸಿಎನ್): ವೆಸ್ಟ್ ಇಂಡೀಸ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಟೀಂ ಇಂಡಿಯಾ ಇನ್ನಿಂಗ್ಸ್ ಹಾಗೂ 141 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಇದರೊಂದಿಗೆ 2 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 1–0 ಅಂತರದ ಮುನ್ನಡೆ ಸಾಧಿಸಿದೆ.

ಇಲ್ಲಿನ ಡೊಮಿನಿಕಾದ ವಿಂಡ್ಸರ್ ಪಾರ್ಕ್, ರೋಸೋ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟ್ ಇಂಡೀಸ್ ಪ್ರಥಮ ಇನ್ನಿಂಗ್ಸ್‌ನಲ್ಲಿ 150 ರನ್‌ಗಳಿಗೆ ಆಲೌಟ್ ಆಯಿತು. ನಂತರ ಪ್ರಥಮ ಇನ್ನಿಂಗ್ಸ್‌ನಲ್ಲಿ ಭಾರತ ಐದು ವಿಕೆಟ್ ನಷ್ಟಕ್ಕೆ 421 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು. ಈ ಮೂಲಕ 271 ರನ್‌ಗಳ ಬೃಹತ್ ಮುನ್ನಡೆ ಸಾಧಿಸಿತು.

ದ್ವಿತೀಯ ಇನ್ನಿಂಗ್ಸ್ ಆರಂಭಿಸಿದ ವೆಸ್ಟ್ ಇಂಡೀಸ್ ರವಿಚಂದ್ರನ್ ಅಶ್ವಿನ್ ಸ್ಪಿನ್ ಮೋಡಿಗೆ ತತ್ತರಿಸಿ 130 ರನ್‌ಗಳಿಗೆ ಆಲೌಟ್ ಆಯಿತು. ಇದರೊಂದಿಗೆ ಇನಿಂಗ್ಸ್ ಹಾಗೂ 141 ರನ್‌ಗಳ ಸೋಲು ಅನುಭವಿಸಿತು. ಭಾರತದ ಪರ ಅಶ್ವಿನ್ 7, ಜಡೇಜಾ 2 ಹಾಗೂ ಸಿರಾಜ್ 1 ವಿಕೆಟ್ ಉರುಳಿಸಿದರು. ಚೊಚ್ಚಲ ಪಂದ್ಯದಲ್ಲೇ ಶತಕ ಸಿಡಿಸಿದ ಯಶಸ್ವಿ ಜೈಸ್ವಾಲ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ರಾಜ್ಯ ಪ್ರಶಸ್ತಿಗೆ ಅರ್ಜಿ

ಮೈಸೂರು,ಜು.15–ರಾಜ್ಯ ಸರ್ಕಾರವು ಅ.1ರಂದು ಆಚರಿಸುವ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಸಂಬಂಧ ವಿವಿಧ ಕ್ಷೇತ್ರಗಳಲ್ಲಿ (ಸಾಂಸ್ಥಿಕ, ಶಿಕ್ಷಣ, ಸಾಹಿತ್ಯ, ಕಲೆ, ಕಾನೂನು, ಪ್ರತಿಭೆ, ಕ್ರೀಡೆ, ಸಮಾಜ ಸೇವೆ) ಗಣನೀಯ ಸೇವೆ ಸಲ್ಲಿಸಿದ ಹಿರಿಯ ನಾಗರಿಕರಿಗೆ ವೈಯಕ್ತಿಕ ಪ್ರಶಸ್ತಿಗಳನ್ನು ಹಾಗೂ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಅತ್ಯುತ್ತಮ ಕಾರ್ಯ ನಿರ್ವಹಿಸುತ್ತಿರುವ ಒಂದು ಸಂಸ್ಥೆಗೆ ಸಾಂಸ್ಥಿಕ ಪ್ರಶಸ್ತಿ ಒಟ್ಟು 7 ರಾಜ್ಯ ಪ್ರಶಸ್ತಿ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆ.15 ಕೊನೆ ದಿನ. ಆಸಕ್ತರು ಹಾಗೂ ಸಂಸ್ಥೆಗಳು ಅರ್ಜಿಗಳನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕಚೇರಿಗೆ ಅಗತ್ಯ ದಾಖಲಾತಿಗಳೊಂದಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ www.dwdsc.karnataka.gov.in ಅಥವಾ ತಿಲಕನಗರದ ಪುಲಿಕೇಶಿ ರಸ್ತೆಯಲ್ಲಿನ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಜಿಲ್ಲಾ ಕಚೇರಿ ದೂ.ಸಂ: 0821–2490333 ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಅಪರಿಚಿತ ಶವ ಪತ್ತೆ

ಮೈಸೂರು,ಜು.15– 45 ವರ್ಷದ ಅಪರಿಚಿತ ಗಂಡಸಿನ ಮೃತದೇಹವೊಂದು ಮಂಡ್ಯ ರೈಲ್ವೆ ಪ್ಲಾಟ್ ಫಾರಂನ 2 ಮತ್ತು 3ರಲ್ಲಿ ಜು.13ರಂದು ದೊರಕಿದೆ. ಮಾಹಿತಿ ತಿಳಿದಲ್ಲಿ ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆ ದೂ.ಸಂ:0821–2516579 ಸಂಪರ್ಕಿಸಿ.

ಪಿಯು ಉಪನ್ಯಾಸಕರಿಗೆ 3 ತಿಂಗಳಾದರೂ ಕೈಸೇರದ ಮೌಲ್ಯಮಾಪನ ಸಂಭಾವನೆ

ಕರ್ನಾಟಕ ಮೌಲ್ಯಮಾಪನ ನಿರ್ಣಯ ಮಂಡಳಿ ರಚನೆಯಿಂದ ಈ ಸಮಸ್ಯೆ ಉದ್ಭವ ಆರೋಪ

ಮೈಸೂರು,ಜು.15(ಆರ್‌ಕೆ)–ಕಳೆದ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಪ್ರಕಟಗೊಂಡು 3 ತಿಂಗಳಾಗುತ್ತಾ ಬಂದರೂ ಉತ್ತರ ಪತ್ರಿಕೆ ಮೌಲ್ಯಮಾಪನ ಮಾಡಿದ ಉಪನ್ಯಾಸಕರಿಗೆ ಸಂಭಾವನೆ, ಟಿಎ, ಡಿಎ ಹಾಗೂ ಇನ್ನಿತರ ಭತ್ಯೆಯನ್ನು ಸರ್ಕಾರ ಪಾವತಿ ಮಾಡಿಲ್ಲ.

ಮೈಸೂರು ವಿಭಾಗದ 5,000 ಸೇರಿದಂತೆ ರಾಜ್ಯದ 26,000 ಮಂದಿ ಪಿಯು ಕಾಲೇಜು ಉಪನ್ಯಾಸಕರು (ಸರ್ಕಾರಿ, ಅನುದಾನಿತ, ಅನುದಾನಿತ ಖಾಸಗಿ ಕಾಲೇಜುಗಳೂ ಸೇರಿ) ಕಳೆದ ಏಪ್ರಿಲ್ ಮಾಹೆಯಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷಾ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು. 2023ರ ಮಾರ್ಚ್ 9ರಿಂದ 29ರವರೆಗೆ ನಡೆದ ದ್ವಿತೀಯ ಪಿಯುಸಿ ಪರೀಕ್ಷೆಗೆ ರಾಜ್ಯಾದ್ಯಂತ 7,20,000 ಮಂದಿ ವಿದ್ಯಾರ್ಥಿಗಳು ಹಾಜರಾಗಿದ್ದರು.

ಏಪ್ರಿಲ್ 4ರಿಂದ 15 ದಿನಗಳ ಕಾಲ ಬೆಂಗಳೂರು, ಮೈಸೂರು, ಬೆಳಗಾವಿ ವಿಭಾಗಗಳ ಕೇಂದ್ರ ಸ್ಥಾನಗಳಲ್ಲಿ ನಡೆದ ಪ್ರಕ್ರಿಯೆಯಲ್ಲಿ 6 ವಿಷಯಗಳ 45 ಲಕ್ಷಕ್ಕೂ ಹೆಚ್ಚು ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದ್ದರಿಂದ ಏಪ್ರಿಲ್ 21ರಂದು ಫಲಿತಾಂಶ ಪ್ರಕಟವಾಗಿತ್ತು. ಈ ಹಿಂದೆ ಮೌಲ್ಯಮಾಪನಾ ಪ್ರಕ್ರಿಯೆ ಪೂರ್ಣಗೊಂಡ ದಿನವೇ ಉಪನ್ಯಾಸಕರಿಗೆ ಸಂಭಾವನೆ ಹಾಗೂ ಇತರ ಭತ್ಯೆಯನ್ನು ಚೆಕ್ ಮೂಲಕ ಪಾವತಿಸಲಾಗುತ್ತಿತ್ತು.



ಈ ಹಿಂದೆ ಪದವಿ ಪೂರ್ವ ಶಿಕ್ಷಣ ಮಂಡಳಿಯೊಂದೇ ಇದ್ದಾಗ ಅದರ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿ ಹಣಕಾಸು ಇಲಾಖೆಯಿಂದ ಅನುದಾನ ಬಿಡುಗಡೆ ಮಾಡಿಸಿ, ಉಪನ್ಯಾಸಕರಿಗೆ ಮೌಲ್ಯಮಾಪನ ಸಂಭಾವನೆಯನ್ನು ತಕ್ಷಣವೇ ಪಾವತಿಸುತ್ತಿದ್ದರು. ಆದರೆ, ಈಗ ನಿರ್ದೇಶಕರಿಗೆ ಕೇವಲ ಆಡಳಿತದ ಜವಾಬ್ದಾರಿಯನ್ನು ಉಳಿಸಿ, ಪರೀಕ್ಷೆ ನಡೆಸಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ, ಫಲಿತಾಂಶ ನೀಡುವುದನ್ನು ಕರ್ನಾಟಕ ಶಾಲಾ–ಕಾಲೇಜು ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿ ಸ್ಥಾಪಿಸಿ, ಅದಕ್ಕೆ ಹಿರಿಯ ಐಎಎಸ್ ಅಧಿಕಾರಿ ಆರ್. ರಾಮಚೆನ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಇಡೀ ರಾಜ್ಯದಲ್ಲಿ ಮೌಲ್ಯಮಾಪನದಲ್ಲಿ ತೊಡಗಿಸಿಕೊಂಡ ಉಪನ್ಯಾಸಕರಿಗೆ ಸಂಭಾವನೆ, ಟಿಎ, ಡಿಎ ಸೇರಿದಂತೆ ಇತರ ಸೌಲಭ್ಯಕ್ಕೆ ಅಗತ್ಯವಿರುವ 18 ಕೋಟಿ ರೂ. ಅನುದಾನ ಬಿಡುಗಡೆ ಮಾಡುವಂತೆ ಮಂಡಳಿಯು ಪ್ರಸ್ತಾವನೆ ಸಲ್ಲಿಸಿದೆಯಾದರೂ, ಹಣಕಾಸು ಇಲಾಖೆ ಬಾಕಿ ಉಳಿಸಿಕೊಂಡಿದೆ ಎಂದು ಉಪನ್ಯಾಸಕರು ದೂರಿದ್ದಾರೆ.

> “ಮೈಸೂರು ವಿಭಾಗದ ಜಿಲ್ಲೆಗಳ ಉಪನ್ಯಾಸಕರು ಕೇಂದ್ರಸ್ಥಾನವಾದ ಮೈಸೂರು ನಗರಕ್ಕೆ ಬಂದು ಬಾಡಿಗೆ ಕೊಠಡಿಗಳಲ್ಲಿ ಉಳಿದುಕೊಂಡು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿದ್ದಾರೆ. 3 ತಿಂಗಳಾದರೂ ಸಂಭಾವನೆ, ಭತ್ಯೆ ಬಾರದಿದ್ದರೆ ಖಾಸಗಿ ಕಾಲೇಜಿನ ಉಪನ್ಯಾಸಕರೂ ಸೇರಿದಂತೆ ಒಟ್ಟು 5,000 ಮಂದಿಗೆ ತೊಂದರೆಯಾಗುತ್ತದೆ.
>
> –ಎಂ.ಎಂ.ಮಹದೇವು, ಜಿಲ್ಲಾ ಪಿಯು ಕಾಲೇಜು ಉಪನ್ಯಾಸಕರ ಸಂಘದ ಅಧ್ಯಕ್ಷ

ಈ ಸಂಬಂಧ ಸಂಘದ ರಾಜ್ಯಾಧ್ಯಕ್ಷ ಎಸ್.ನಿಂಗೇಗೌಡ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ್ದು, ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದರೂ ಇದೀಗ ಹಣಕಾಸು ಇಲಾಖೆಯು ಟಿಎ, ಡಿಎ ಮಾತ್ರ ಬಿಡುಗಡೆ ಮಾಡಿದೆ ಎಂಬ ಮಾಹಿತಿ ಇದೆ. ಸಂಭಾವನೆಯನ್ನು ಆಗಸ್ಟ್ ಮೊದಲ ವಾರ ಬಿಡುಗಡೆ ಮಾಡುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ನಾವೂ ಒತ್ತಡ ಹಾಕುತ್ತಿದ್ದೇವೆ ಎಂದು ತಿಳಿಸಿದರು.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಮೂಲಸೌಕರ್ಯ ಕಲ್ಪಿಸಿ

ದಿಶಾ ಸಭೆಯಲ್ಲಿ ಸಂಸದೆ ಸುಮಲತಾ ಸೂಚನೆ



ಮಂಡ್ಯ, ಜು.15– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಹೆಚ್ಚು ಅಪಘಾತವಾಗುತ್ತಿದ್ದು, ಇದಕ್ಕೆ ಮೂಲಸೌಕರ್ಯ ಕಲ್ಪಿಸದಿರುವುದೇ ಕಾರಣವಾಗಿದೆ. ಈ ನಿಟ್ಟಿನಲ್ಲಿ ರಸ್ತೆ ದೀಪಗಳು, ಸೂಚನಾ ಫಲಕಗಳು ಹೆದ್ದಾರಿ ಕುರಿತು ರಾಷ್ಟ್ರೀಯ ರಸ್ತೆ ಪ್ರಾಧಿಕಾರದ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು ಎಂದು ಸಂಸದೆ ಸುಮಲತಾ ಅಂಬರೀಶ್ ಸೂಚಿಸಿದರು.

ಶನಿವಾರ ನಗರದ ಜಿಪಂ ಸಭಾಂಗಣದಲ್ಲಿ ನಡೆದ ದಿಶಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೂಲಸೌಕರ್ಯಗಳು ಮೊದಲು ಅನುಷ್ಠಾನವಾಗಬೇಕು. ಬೆಂಗಳೂರು– ಮೈಸೂರು ಹೆದ್ದಾರಿ ಹಲವೆಡೆ ಕಾಮಗಾರಿ ಸಂಪೂರ್ಣ ಮುಗಿದಿಲ್ಲ. ಆದರೂ ಟೋಲ್ ಸಂಗ್ರಹಣೆ ನಡೆಯುತ್ತಿದೆ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡುವ ಸಂದರ್ಭ ಒಪ್ಪಿಕೊಂಡಿರುವ ಎಲ್ಲಾ ಕಾಮಗಾರಿಗಳು ಹಾಗೂ ಸೌಲಭ್ಯಗಳನ್ನು ಒದಗಿಸಬೇಕು ಎಂದರು.

ಬೆಂಗಳೂರು– ಮೈಸೂರು ಹೆದ್ದಾರಿಗೆ ಸಂಬಂಧಿಸಿದಂತೆ ಹಲವು ಸಭೆಗಳು ನಡೆದಿವೆ. ರಾಷ್ಟ್ರೀಯ ಹೆದ್ದಾರಿ ಕುರಿತಂತೆ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ವರದಿ ನೀಡುವಂತೆ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಕೈಗೊಂಡಿರುವ ಎಲ್ಲಾ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ ಅವರು, ಜಲ್ ಜೀವನ್ ಮಿಷನ್ ಯೋಜನೆಯಡಿ 3 ಹಂತದಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ. ಕೆಲವು ಕಾಮಗಾರಿಗಳನ್ನು ಗುತ್ತಿಗೆದಾರರು ಪೂರ್ಣಗೊಳಿಸದೇ ಅರ್ಧಕ್ಕೆ ಬಿಟ್ಟಿರುವವರನ್ನು ಕಪ್ಪು ಪಟ್ಟಿಗೆ ಸೇರಿಸಿ ಎಂದು ಹೇಳಿದರು.

ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಹಾಗೂ ಜಲಜೀವನ್ ಯೋಜನೆಗೆ ಸಂಬಂಧಿಸಿದಂತೆ ಎರಡು ಪೈಪ್‌ಲೈನ್ ಇರುವ ಬಗ್ಗೆ ಚರ್ಚಿಸಿದಾಗ ಜಿಪಂ ಸಿಇಓ ಶೇಖ್ ತನ್ವೀರ್ ಆಸೀಫ್ ಮಾತನಾಡಿ, ಜಲಜೀವನ್ ಮಿಷನ್ ಮುಂದಿನ 30 ವರ್ಷಗಳ ಅವಧಿಗೆ ಆಯೋಜಿಸಲಾಗುತ್ತಿದೆ. ಈ ಹಿಂದೆ ನಿರ್ಮಿಸಿರುವ ಪೈಪ್‌ಲೈನ್ ಹಳೆಯದಾಗಿದ್ದು, ಯೋಜನೆಗೆ ಅನುಗುಣವಾಗಿ ನೀರು ಸರಬರಾಜು ಮಾಡುವುದು ಕಷ್ಟಕರವಾಗಿರುತ್ತದೆ ಎಂದು ಮಾಹಿತಿ ನೀಡಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಈಗಾಗಲೇ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯನ್ನು ಪರಿಶೀಲಿಸಿದ ಸಂದರ್ಭ ಮುಖ್ಯವಾಗಿ ಲೇನ್ ಮೆಸ್ಸ್ ಸೂಚನಾ ಫಲಕ ಅಳವಡಿಸುವಂತೆ ತಿಳಿಸಲಾಗಿದೆ ಹಾಗೂ 1525 ಐಆರ್‌ಡಿಎಸ್ ಅವಶ್ಯಕತೆ ಇದ್ದು ಕೇವಲ 850 ಮಾತ್ರ ಅಳವಡಿಸಲಾಗಿದೆ. ಹೈವೇ ಪ್ಯಾಟ್ರೋಲಿಂಗ್, ಆಂಬುಲೆನ್ಸ್ ಹಾಗೂ ಕ್ರೇನ್‌ಗಳ ಸಂಖ್ಯೆ ಹೆಚ್ಚಳ ಮಾಡುವಂತೆ ತಿಳಿಸಲಾಗಿದೆ ಎಂದರು.

ಮಳೆ ಕೊರತೆ ಉಂಟಾದರೆ ಹಾಲಿ ಬೆಳೆಗೆ ನೀರು ಒದಗಿಸುವ ಬಗ್ಗೆ ಹಾಗೂ ಕುಡಿಯುವ ನೀರಿನ ಬಗ್ಗೆ ಸಂಸದರು ಮಾಹಿತಿ ಕೇಳಿದಾಗ ಕಾವೇರಿ ನೀರಾವರಿ ನಿಗಮ ನಿಯಮಿತದ ಅಧೀಕ್ಷಕ ಇಂಜಿನಿಯರ್ ರಘುರಾಮ್ ಮಾತನಾಡಿ, ಸದರಿ ಪರಿಸ್ಥಿತಿಯಲ್ಲಿ ಮಳೆ ಅಭಾವ ಉಂಟಾದರೆ ಜುಲೈ ಅಂತ್ಯದವರೆಗೆ ಮಾತ್ರ ಬೆಳೆಗಳಿಗೆ ನೀರು ಒದಗಿಸಲು ಸಾಧ್ಯ. ನೀರಾವರಿ ಸಲಹಾ ಸಮಿತಿಗೆ ಮಾಹಿತಿ ನೀಡಲು ಕೃಷಿ, ನೀರಾವರಿ ಹಾಗೂ ಕಂದಾಯ ಇಲಾಖೆ ಒಟ್ಟಿಗೆ ಸಮೀಕ್ಷೆ ನಡೆಸಿ ವರದಿ ನೀಡಲಿದೆ ಎಂದು ತಿಳಿಸಿದರು.

ಸಭೆಯಲ್ಲಿ ಶಾಸಕ ರವಿಕುಮಾರ್, ಎಸ್ಪಿ ಎನ್.ಯತೀಶ್, ಅರಣ್ಯ ಅಧಿಕಾರಿ ರುದ್ರನ್ ಉಪಸ್ಥಿತರಿದ್ದರು.

ಮಳೆ ಅಭಾವದಿಂದ ಕುಡಿಯುವ ನೀರಿಗೆ ಹಾಹಾಕಾರ

ಮಂಡ್ಯ, ಜು.15– ತಮಿಳುನಾಡು ಕಾವೇರಿ ನೀರು ಕೇಳಿದೆ. ಆದರೆ ಟ್ರಿಬ್ಯೂನಲ್ ಪ್ರಕಾರ ನೀರಿನ ಹಂಚಿಕೆ ವಿಚಾರದಲ್ಲಿ ನಿಯಮಗಳು ಇವೆ. ಸದ್ಯ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ತುಂಬಾ ಕಡಿಮೆ ಬೀಳುತ್ತಿದ್ದು, ಕೆಆರ್‌ಎಸ್ ನೀರಿನ ಮಟ್ಟ ಆತಂಕಕಾರಿಯಾಗಿದೆ. ಹೀಗಾಗಿ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ ಎಂದು ಸಂಸದೆ ಸುಮಲತಾ ಅಂಬರೀಶ್ ತಿಳಿಸಿದರು.

ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸದ್ಯದ ಪರಿಸ್ಥಿತಿಯಲ್ಲಿ ಕೆಆರ್‌ಎಸ್‌ನಲ್ಲಿ 2 ತಿಂಗಳಿಗಾಗುವಷ್ಟು ಮಾತ್ರ ಕುಡಿಯುವ ನೀರು ಇದೆ. 2 ತಿಂಗಳು ಆದ ಮೇಲೆ ಆತಂಕದ ಪರಿಸ್ಥಿತಿ ಇದೆ. ಇಂತಹ ಪರಿಸ್ಥಿತಿಯಲ್ಲಿ ರೈತರ ಸಮಸ್ಯೆ ಬಗೆಹರಿಸಬೇಕು. ಈ ಬಗ್ಗೆ ರಾಜ್ಯದ ಸಚಿವರ ತುರ್ತು ಸಭೆ ಕರೆಯಬೇಕು. ರಾಜ್ಯದಲ್ಲಿ ಸಭೆ ನಡೆಸಲಿ. ಬಳಿಕ ಕೇಂದ್ರದ ಬಳಿ ನಾನು ಮಾತನಾಡುವೆ ಎಂದರು.

ಸದ್ಯ ರೈತರು ಬೆಳೆದಿರುವ ಬೆಳೆಗಳು ಒಣಗುತ್ತಿವೆ. ಆದರೆ ನೀರಿನ ಸಮಸ್ಯೆ ಬಂದಾಗ ಕುಡಿಯುವ ನೀರಿಗೆ ಆದ್ಯತೆ ನೀಡುತ್ತಾರೆ. ಮುಂದೆ ಮಳೆ ಬೀಳದೆ ಇದ್ದರೆ ಕುಡಿಯುವ ನೀರಿಗೂ ಸಮಸ್ಯೆ ಆಗುತ್ತದೆ. ರೈತರು ಇರುವ ಬೆಳೆಗಳನ್ನು ಉಳಿಸಿಕೊಳ್ಳಬೇಕು. ಸದ್ಯದ ಪರಿಸ್ಥಿತಿಯಲ್ಲಿ ತಮಿಳುನಾಡಿಗೆ ನೀರು ಕೊಡುವುದು ಕಷ್ಟ ಎಂದರು.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಬಗ್ಗೆ ಪ್ರತಿಕ್ರಿಯಿಸಿ, ಚರ್ಚೆಗಳು, ಊಹಾಪೋಹಗಳು, ಅಂತೆ ಕಂತೆಗಳಿಗೆ ನಾನು ಉತ್ತರ ಕೊಡಲ್ಲ. ಅಂತಹ ಸಂದರ್ಭ ಬಂದಾಗ ನಾನು ಮಾತನಾಡುತ್ತೇನೆ. ಚುನಾವಣೆ ಬಗ್ಗೆ ನಾನು ನಿರ್ಧಾರ ಮಾಡಿಲ್ಲ ಎಂದರು.

ರಾಗಿ ಲಕ್ಷ್ಮಣಯ್ಯ ಹೆಸರು ಚಿರಸ್ಥಾಯಿ

ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯ



ಮಂಡ್ಯ, ಜು.15– ಕೃಷಿ ವಿಜ್ಞಾನಿ ರಾಗಿ ಲಕ್ಷ್ಮಣಯ್ಯ ಅವರ ಹೆಸರು ಭೂಮಂಡಲ ಇರುವವರೆಗೆ ಚಿರಸ್ಥಾಯಿಯಾಗಿರಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶನಿವಾರ ನಗರದ ಹೊರವಲಯದ ವಿ.ಸಿ.ಫಾರಂನ ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆದ 27ನೇ ವರ್ಷದ ರಾಗಿ ಲಕ್ಷ್ಮಣಯ್ಯ ಸ್ಮಾರಕ ಉಪನ್ಯಾಸ ಮತ್ತು ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ರಾಗಿ ಲಕ್ಷ್ಮಣಯ್ಯ ಅವರು ರಾಗಿಯ ಹೊಸ ತಳಿಗಳನ್ನು ಜಗತ್ತಿಗೆ ಪರಿಚಯಿಸಿದವರು. ಅವರ ಹೆಸರಿನಲ್ಲಿ ಸ್ಮಾರಕ ಸಮಿತಿ ಕಟ್ಟಿಕೊಂಡು ಅವರನ್ನು ಜಗತ್ತಿಗೆ ಪರಿಚಯಿಸಿ 27ನೇ ವರ್ಷದ ಪ್ರಶಸ್ತಿ ನೀಡುತ್ತಿರುವುದು ಶ್ಲಾಘನೀಯ ಎಂದರು.

ಜಗತ್ತು ತನ್ನ ಎಲ್ಲಾ ಸ್ಥಾನಮಾನಗಳನ್ನು ಮೀರಿ ಮುಂದಕ್ಕೆ ಹೋಗುತ್ತಲೇ ಇದ್ದರೆ, ಆದರೆ ಜಗತ್ತಿಗೆ ಅನ್ನ ನೀಡುವ ರೈತ ಮಾತ್ರ ತನ್ನ ಹೆಜ್ಜೆ ಹಿಂದಕ್ಕೆ ಇಟ್ಟಿದ್ದಾನೆ. ಇದಕ್ಕೆ ಕಾರಣ ರೈತರಿಗೆ ಅವಕಾಶವಿಲ್ಲದಿರುವುದು. ನಮ್ಮ ಸರ್ಕಾರವು ರೈತರಿಗೆ ವಿಶೇಷ ಸ್ಥಾನಮಾನ ಕಲ್ಪಿಸಿ ರೈತರನ್ನು ಎತ್ತರಕ್ಕೆ ಕೊಂಡೊಯ್ಯುತ್ತದೆ ಎಂದರು.

ರೈತರು ಬೆಳೆದ ಬೆಳೆಗಳು ಬರಗಾಲ ಅಥವಾ ವಿಪರೀತ ಮಳೆಯಿಂದ ಹಾನಿಗೊಳಗಾಗುತ್ತಿವೆ. ಆದ ಕಾರಣ ರೈತರು ಬೆಳೆದ ಬೆಳೆಗಳಿಗೆ ವಿಮೆ ಮಾಡಿಸಿ ಹಾನಿಗೊಳಗಾದ ಸಂದರ್ಭದಲ್ಲಿ ಸರ್ಕಾರದ ಸವಲತ್ತುಗಳನ್ನು ಪಡೆಯಿರಿ ಎಂದು ಹೇಳಿದರು.

ರಾಗಿ ಲಕ್ಷ್ಮಣಯ್ಯ ಅವರ ಹೆಸರಿನಲ್ಲಿ ಕೃಷಿ ವಿಶ್ವವಿದ್ಯಾಲಯಗಳಲ್ಲಿ ನವೋದ್ಯಮ ಯೋಜನೆಗಳನ್ನು ಹಾಗೂ ಸಂಶೋಧನಾ ಕೇಂದ್ರಗಳನ್ನು ತೆರೆಯಲು ಯೋಜಿಸಲಾಗುವುದು ಎಂದರು.

ಕೃಷಿ ವಿವಿ ನಿವೃತ್ತ ಸಂಶೋಧನಾ ನಿರ್ದೇಶಕ ಡಾ.ಪ್ರಭಾಕರಶೆಟ್ಟಿ ಬಿ.ಕೆ ರಾಗಿ ಲಕ್ಷ್ಮಣಯ್ಯ ಅವರ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಶಾಸಕ ದರ್ಶನ್, ಬೆಂಗಳೂರು ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್, ರಾಗಿ ಲಕ್ಷ್ಮಣಯ್ಯ ಸ್ಮಾರಕ ಸಮಿತಿ ಅಧ್ಯಕ್ಷ ಕೆ.ಬೋರಯ್ಯ ಸೇರಿದಂತೆ ಇನ್ನಿತರರಿದ್ದರು.

20 ಮಂದಿಗೆ ನಿವೇಶನ ಹಕ್ಕುಪತ್ರ ವಿತರಣೆ



ಶ್ರೀರಂಗಪಟ್ಟಣ, ಜು.15– ತಾಲೂಕಿನ ಬೆಳಗೊಳ ಗ್ರಾಪಂ ವ್ಯಾಪ್ತಿಯ ವಿವಿಧ ಗ್ರಾಮಗಳ 20 ಮಂದಿಗೆ ಶಾಸಕ ರಮೇಶಬಾಬು ಬಂಡಿಸಿದ್ದೇಗೌಡ ನಿವೇಶನದ ಹಕ್ಕುಪತ್ರ ವಿತರಿಸಿದರು. ಬೆಳಗೊಳ ನಾಡಕಚೇರಿ ಮುಂಭಾಗ ನಡೆದ ಕಾರ್ಯಕ್ರಮದಲ್ಲಿ ಹಕ್ಕುಪತ್ರ ವಿತರಿಸಿ ಮಾತನಾಡಿದ ಅವರು, ಕೆಲ ನಿವೇಶನ ರಹಿತರಿಗೆ ಈ ಹಿಂದೆ ಹಲವು ಕಾರಣಗಳಿಂದ ನಿವೇಶನದ ಹಕ್ಕುಪತ್ರ ನೀಡಲಾಗಿರಲಿಲ್ಲ. ಇದೀಗ ಹಕ್ಕುಪತ್ರ ನೀಡಲಾಗಿದ್ದು, ಫಲಾನುಭವಿಗಳು ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಈ ವೇಳೆ ಗ್ರಾಪಂ ಉಪಾಧ್ಯಕ್ಷ ಅರವಿಂದ, ಉಪ ತಹಸೀಲ್ದಾರ್ ಸಾಕಮ್ಮ, ರಾಜಸ್ವ ನಿರೀಕ್ಷಕ ಪುಟ್ಟಸ್ವಾಮಿ, ಗ್ರಾಪಂ ಸದಸ್ಯರಾದ ಬಿ.ವಿ.ಸುರೇಶ್, ರವಿಕುಮಾರ್, ಗ್ರಾಮದ ಯಜಮಾನರಾದ ಶ್ರೀನಿವಾಸ್, ವಿಷಕಂಠೇಗೌಡ, ಮುಖಂಡರಾದ ಬಿ.ಎಂ.ಸ್ವಾಮಿಗೌಡ, ಮಹದೇವಸ್ವಾಮಿ, ಯತೀಶ್, ರವೀಶ್, ರವಿ, ವೆಂಕಟೇಶ್, ಹರೀಶ, ಪಿಡಿಓ ಪರಮೇಶ್ವರ್, ಗ್ರಾಮಲೆಕ್ಕಿಗ ರಘು ಸೇರಿದಂತೆ ಇತರರಿದ್ದರು.

ಮಂಡ್ಯ ವಿವಿ ಉನ್ನತೀಕರಣಕ್ಕೆ ಕ್ರಮ: ಸಿಆರ್‌ಎಸ್ ಭರವಸೆ



ಮಂಡ್ಯ, ಜು.15– ಮಂಡ್ಯ ವಿಶ್ವವಿದ್ಯಾಲಯ ಪ್ರಥಮ ದರ್ಜೆ ಕಾಲೇಜಿನ ರೂಪದಲ್ಲಿದ್ದು, ಇದನ್ನು ಉನ್ನತೀಕರಣಗೊಳಿಸಲು ಕ್ರಮವಹಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಭರವಸೆ ನೀಡಿದರು.

ಶನಿವಾರ ನಗರದ ಮಂಡ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಹಬ್ಬವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬೆಂಗಳೂರು, ಮೈಸೂರು ವಿಶ್ವವಿದ್ಯಾಲಯದ ರೀತಿ ಮಂಡ್ಯ ವಿಶ್ವವಿದ್ಯಾಲ ಬೆಳೆಯಬೇಕು. ಇಲ್ಲಿಗೆ ಬೇಕಿರುವ ವ್ಯವಸ್ಥೆಗಳ ಬಗ್ಗೆ ಕುಲಪತಿಗಳೊಂದಿಗೆ ಚರ್ಚಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ತಿಳಿಸಿದರು.

ಮಂಡ್ಯ ವಿವಿಯನ್ನು 5 ವರ್ಷದ ಅವಧಿಯಲ್ಲಿ ಪರಿಪೂರ್ಣ ವಿಶ್ವವಿದ್ಯಾಲಯವನ್ನಾಗಿ ಮಾಡುತ್ತೇವೆ. 2019ರಲ್ಲಿ ಮಂಡ್ಯ ವಿಶ್ವವಿದ್ಯಾಲಯವಾಗಿ ಘೋಷಣೆಯಾದರೂ, ನಿರೀಕ್ಷಿತ ಪ್ರಮಾಣದಲ್ಲಿ ವಿಶ್ವವಿದ್ಯಾಲಯವಾಗಿ ಹೊರಹೊಮ್ಮಿಲ್ಲ. ಒಂದು ವಿಶ್ವವಿದ್ಯಾಲಯದಲ್ಲಿರಬೇಕಾದ ವಾತಾವರಣ ನಿರ್ಮಾಣವಾಗಿಲ್ಲ. ವಿಶ್ವವಿದ್ಯಾಲಯವಾಗಿ 4 ವರ್ಷಗಳಾದರೂ, ಮೈಸೂರು–ಬೆಂಗಳೂರು ವಿಶ್ವವಿದ್ಯಾಲಯದ ಭಾವನೆ ಬರಲು ಸಾಧ್ಯವಾಗಿಲ್ಲ ಎಂದರು.

ಮಂಡ್ಯ ವಿಶ್ವವಿದ್ಯಾಲಯಕ್ಕೆ ಅಗತ್ಯವಾಗಿ ಏನೇನು ಬೇಕು ಎಂಬುದರ ಬಗ್ಗೆ ಪ್ರಸ್ತಾವನೆ ಸಲ್ಲಿಸಿ ಎಂದು ಕುಲಸಚಿವರಿಗೆ ತಿಳಿಸಿದ್ದೇನೆ. ಅವರು ಸಲ್ಲಿಸಿದ ಬೇಡಿಕೆಗಳಿಗನುಗುಣವಾಗಿ ಸರ್ಕಾರದ ಗಮನಕ್ಕೆ ತಂದು ಮಂಡ್ಯ ವಿಶ್ವವಿದ್ಯಾಲಯ ಒಂದು ಪರಿಪೂರ್ಣ ವಿಶ್ವವಿದ್ಯಾಲಯವಾಗಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಂಡ್ಯ ವಿಶ್ವವಿದ್ಯಾಲಯದಲ್ಲಿ ಸಾವಿರಾರು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು, ಹೊಸ ಹೊಸ ಕೋರ್ಸ್‌ಗಳು ಪ್ರಾರಂಭ ವಾಗಿರುವುದು ಆಶಾದಾಯಕ ಬೆಳವಣಿಗೆ. ಹೊಸ ಕೋರ್ಸ್‌ಗಳ ಅಗತ್ಯವಿದ್ದರೆ ಸರ್ಕಾರದಿಂದ ಅನುಮತಿ ಕೊಡಿಸಿಕೊಡಲಾಗುವುದು ಎಂದರು.

ಸಂಸದೆ ಸುಮಲತಾ ಅಂಬರೀಷ್ ಮಾತನಾಡಿ, ವಿದ್ಯಾರ್ಥಿಗಳು ಪಠ್ಯಕ್ರಮದ ಜೊತೆಗೆ ಕ್ರೀಡಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ತೊಡಗಿಸಿಕೊಳ್ಳಬೇಕು. ವಿದ್ಯಾರ್ಥಿ ಜೀವನ ಎಂಬುದು ಅತ್ಯಮೂಲ್ಯವಾದುದು. ಜವಾಬ್ದಾರಿ ಅರಿತು ತಮ್ಮ ಸಾಧನೆ ಗುರಿಯತ್ತ ಹೆಜ್ಜೆ ಇಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಗಣಿಗ ರವಿಕುಮಾರ್ ಮಾತನಾಡಿ, ವಿದ್ಯಾರ್ಥಿ ಜೀವನ ಎಂಬುದು ಗೋಲ್ಡನ್ ಲೈಫ್, ಈ ಸಮಯ ಮತ್ತೊಮ್ಮೆ ನಿಮಗೆ ಬರುವುದಿಲ್ಲ. ಹಾಗಾಗಿ ಉನ್ನತ ವ್ಯಾಸಂಗ ಮಾಡಿ ಸಮಾಜಕ್ಕೆ ಉತ್ತಮ ಹೆಸರು ತಂದುಕೊಡಬೇಕು. ಸಿಕ್ಕಿರುವ ಅವಕಾಶವನ್ನು ಸದುಪಯೋಗ ಪಡೆದುಕೊಂಡು ಉತ್ತಮ ಜೀವನ ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಈ ವೇಳೆ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮಂಡ್ಯ ವಿವಿ ಕುಲಪತಿ ಡಾ.ಪುಟ್ಟರಾಜು, ಉಪಕುಲಪತಿ ರಂಗರಾಜ್, ಸಿಂಡಿಕೇಟ್ ಸದಸ್ಯ ಎಂ.ನಾಗರಾಜು, ಕಿರುತೆರೆ ನಟ ಮಧುಸಾಗರ್, ಗಾಯಕ ಮಳವಳ್ಳಿ ಮಹದೇವಸ್ವಾಮಿ ಹಾಜರಿದ್ದರು.

ತೆಂಗಿನ ಸಸಿ ಮಾರಾಟ

ಮಂಡ್ಯ, ಜು.15– ತೋಟಗಾರಿಕೆ ಇಲಾಖೆಯಿಂದ ತೋಟಗಾರಿಕೆ ಕ್ಷೇತ್ರಗಳಲ್ಲಿ ಉತ್ತಮ ಗುಣಮಟ್ಟದ ತೆಂಗಿನ ಸಸಿಗಳು ಮಾರಾಟಕ್ಕೆ ಲಭ್ಯವಿದೆ. ಮಾಹಿತಿಗಾಗಿ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ. ಖರೀದಿ ಸಮಯದಲ್ಲಿ ಪಹಣಿ ಮತ್ತು ಆಧಾರ್ ಕಾರ್ಡ್ ಕಡ್ಡಾಯವಾಗಿ ನೀಡಬೇಕು ಎಂದು ಪ್ರಕಟಣೆ ತಿಳಿಸಿದೆ.

ಕಾವೇರಮ್ಮ ನಿಧನ

ಕೆ.ಆರ್.ಪೇಟೆ, ಜು.15– ತಾಲೂಕಿನ ಮಾಕವಳ್ಳಿ ಗ್ರಾಮದ ನಿವಾಸಿ ದಿ.ಕಾಳೇಗೌಡರ ಪತ್ನಿ ಕಾವೇರಮ್ಮ(85) ಶನಿವಾರ ನಿಧನರಾದರು.



ಮೃತರು ಇಬ್ಬರು ಪುತ್ರರು, ಮೊಮ್ಮಗ ಪತ್ರಕರ್ತ ಮಾಕವಳ್ಳಿ ರವಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬೆಳಗ್ಗೆ 10 ಗಂಟೆಗೆ ಮಾಕವಳ್ಳಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆನೆ ಹಾವಳಿ ತಡೆಗೆ ಅರಣ್ಯದ 640 ಕಿಲೋಮೀಟರ್ ರೈಲ್ವೆ ಕಂಬಿ ಬ್ಯಾರಿಕೇಡ್ ನಿರ್ಮಾಣ



ಮೈಸೂರು, ಜು.15(ಬಿಎಲ್‌ಯು)– ಆನೆಗಳು ಕಾಡಿನಿಂದ ನಾಡಿನತ್ತ ಬರದಂತೆ ತಡೆಯಲು ಅರಣ್ಯದಂಚಲ್ಲಿ 640 ಕಿಲೋಮೀಟರ್ ರೈಲ್ವೆ ಕಂಬಿ ಬ್ಯಾರಿಕೇಡ್ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಆನೆಗಳು ಒಂದು ದಿನಕ್ಕೆ ಕನಿಷ್ಠ 30 ಕಿಲೋಮೀಟರ್ ಅಡ್ಡಾಡುತ್ತವೆ. ಅವುಗಳನ್ನು ತಡೆಯುವುದು ಕಷ್ಟ, ಆದರೂ ಈಗಾಗಲೇ 340 ಕಿಲೋಮೀಟರ್ ತನಕ ರೈಲ್ವೆ ಕಂಬಿ ಬ್ಯಾರಿಕೇಡ್ ನಿರ್ಮಾಣ ಮಾಡಲಾಗಿದೆ. ಆದರೆ ಅರಣ್ಯದಂಚಲ್ಲಿ ಪೂರ್ಣ ಪ್ರಮಾಣದಲ್ಲಿ ರೈಲ್ವೆ ಕಂಬಿ ಬ್ಯಾರಿಕೇಡ್ ನಿರ್ಮಾಣ ಮಾಡಿಲ್ಲ. ಆದ ಕಾರಣ ಈಗ ಬಾಕಿ 640 ಕಿಲೋಮೀಟರ್ ತನಕ ರೈಲ್ವೆ ಕಂಬಿ ಬ್ಯಾರಿಕೇಡ್ ನಿರ್ಮಿಸಲು ತೀರ್ಮಾನ ಮಾಡಿದ್ದು, ಪ್ರಸ್ತಾವನೆ ಸರ್ಕಾರದ ಮುಂದಿದೆ ಎಂದು ತಿಳಿಸಿದರು. ಒಂದು ಕಿಲೋಮೀಟರ್ ರೈಲ್ವೆ ಕಂಬಿ ಬ್ಯಾರಿಕೇಡ್ ನಿರ್ಮಾಣ ಮಾಡಲು 1.5 ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಈ ಹಿನ್ನೆಲೆಯಲ್ಲಿ ಅಗತ್ಯವಿರುವ ಹಣ ಒದಗಿಸುವುದು ಕಷ್ಟವಾಗುತ್ತಿದೆ. ಆದರೂ ಸಿದ್ದರಾಮಯ್ಯ ಅವರು ಮೊನ್ನೆ ಮಂಡಿಸಿದ ಬಜೆಟ್‌ನಲ್ಲಿ ರೈಲ್ವೆ ಕಂಬಿ ಬ್ಯಾರಿಕೇಡ್‌ಗೆ 120 ಕೋಟಿ ರೂಪಾಯಿ ನೀಡಿದ್ದಾರೆ. ಜೊತೆಗೆ 50 ಕೋಟಿ ರೂಪಾಯಿ ನೀಡುವಂತೆ ಕೇಂದ್ರ ಸರ್ಕಾರಕ್ಕೂ ಮನವಿ ಮಾಡಿದ್ದೇನೆ ಎಂದರು.

ಆನೆಗಳು ಕಾಡಿನಿಂದ ನಾಡಿಗೆ ಬಂದಾಗ ಅವುಗಳನ್ನು ಮತ್ತೆ ಕಾಡಿನತ್ತ ಓಡಿಸಲು ಆನೆ ಕಾರ್ಯಪಡೆ ರಚನೆ ಮಾಡಲಾಗಿದೆ. ಮೈಸೂರು, ರಾಮನಗರ ಸೇರಿದಂತೆ ಐದು ನಗರ ವ್ಯಾಪ್ತಿಯಲ್ಲಿ ಈ ಕಾರ್ಯಪಡೆ ಕಾರ್ಯ ನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಅರಣ್ಯ ಒತ್ತುವರಿ ಆಗಿದ್ದರೆ ಮುಲಾಜಿಲ್ಲದೆ ತೆರವು ಮಾಡುತ್ತೇವೆ. ಯಾರು ಎಷ್ಟೆ ಪ್ರಭಾವಿಗಳಾಗಿದ್ದರೂ ಅರಣ್ಯ ಒತ್ತುವರಿ ತೆರವುಗೊಳಿಸಲಾಗುವುದು ಎಂದು ಈಶ್ವರ ಖಂಡ್ರೆ ಸ್ಪಷ್ಟಪಡಿಸಿದರು.

ಚಾಮರಾಜನಗರದ ಹನೂರಿನಲ್ಲಿ ಚಿರತೆ ದಾಳಿಯಿಂದ ಸಾವನ್ನಪ್ಪಿದ ಸುಶೀಲ ಎಂಬ ಬಾಲಕಿ ಕುಟುಂಬಕ್ಕೆ 15 ಲಕ್ಷ ರೂ. ಪರಿಹಾರ ನೀಡಲು ಸೂಚಿಸಿದ್ದೇನೆ. ಜೊತೆಗೆ ತಿಂಗಳಿಗೆ 4 ಸಾವಿರ ರೂ. ಮಾಶಾಸನ ಕೂಡ ನೀಡುವಂತೆ ಹೇಳಿದ್ದೇನೆ ಎಂದು ತಿಳಿಸಿದರು. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಅಪಾರ ಪ್ರಮಾಣದ ಅರಣ್ಯ ಸಂಪತ್ತು ಇದೆ. ಜೊತೆಗೆ ಹುಲಿ ಸಂರಕ್ಷಿತ ಪ್ರದೇಶವಿದೆ. ಇದನ್ನು ಕಾಪಾಡಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ಸಿದ್ದರಾಮಯ್ಯರಿಂದ ಡಿ.ಕೆ.ಶಿವಕುಮಾರ್‌ಗೆ ಅಧಿಕಾರ ಹಸ್ತಾಂತರ ವಿಚಾರ ಈಗ ಅಪ್ರಸ್ತುತ

ಮೈಸೂರು, ಜು.15(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎರಡೂವರೆ ವರ್ಷದ ನಂತರ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಹಸ್ತಾಂತರ ಮಾಡುತ್ತಾರೆ ಎಂಬ ವಿಚಾರ ಈಗ ಅಪ್ರಸ್ತುತ ಎಂದು ಅರಣ್ಯ, ಜೀವಶಾಸ್ತ್ರ ಹಾಗೂ ಪರಿಸರ ಸಚಿವ ಈಶ್ವರ ಖಂಡ್ರೆ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಸುತ್ತೂರು ಮಠದಲ್ಲಿ ಇಂದು ಮಾಧ್ಯಮದವರ ಜೊತೆ ಮಾತನಾಡಿದ ಅವರು, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಬಂದು ಎರಡು ತಿಂಗಳಾಗಿದೆ. ಈಗ ರಾಜ್ಯದ ಅಭಿವೃದ್ಧಿ ಮಾಡುವುದು ನಮ್ಮ ಉದ್ದೇಶ. ಹೀಗಿರುವಾಗ ಎರಡೂವರೆ ವರ್ಷದ ನಂತರ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನವನ್ನು ಡಿ.ಕೆ.ಶಿವಕುಮಾರ್‌ಗೆ ಬಿಟ್ಟುಕೊಡುತ್ತಾರೆಯೇ ಎಂಬ ಪ್ರಶ್ನೆ ಈಗ ಅಪ್ರಸ್ತುತ ಎಂದು ಈಶ್ವರ ಖಂಡ್ರೆ ತಿಳಿಸಿದರು.

ಸುಳ್ಳು ಆರೋಪ: ಕಾಂಗ್ರೆಸ್ ಸರ್ಕಾರದಲ್ಲಿ ವರ್ಗಾವಣೆ ದಂಧೆ ನಡೆಯುತ್ತಿದೆ ಎಂದು ಆರೋಪ ಮಾಡುತ್ತಿರುವುದು ಆಧಾರ ರಹಿತ. ಸುಳ್ಳು ಹೇಳುವುದು ಬಹಳ ಸುಲಭ. ಆ ಕಾರಣದಿಂದಲೇ ಇಂತಹ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ನಮ್ಮ ಸರ್ಕಾರದಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವೇ ಇಲ್ಲ. ಭಷ್ಟಾಚಾರ ಮುಕ್ತ ಸರ್ಕಾರ ನಡೆಸುವುದು ನಮ್ಮ ಧ್ಯೇಯ. ನನ್ನ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಯಾರೂ ಬೊಟ್ಟು ಮಾಡಿ ತೋರಿಸುವಂತಿಲ್ಲ. ಪಾರದರ್ಶಕವಾಗಿ ಕಾರ್ಯ ನಿರ್ವಹಣೆ ಆಗುತ್ತಿದೆ. ಅರಣ್ಯ ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರ ಆರೋಪ ಪ್ರಕರಣದಲ್ಲಿ ಈಗಾಗಲೇ ಇಬ್ಬರು ಡಿಎಫ್‌ಓಗಳನ್ನು ಅಮಾನತು ಮಾಡಿದ್ದೇನೆ. ಇನ್ನು ಹಲವು ಅಧಿಕಾರಿಗಳ ಭ್ರಷ್ಟಾಚಾರ ಆರೋಪದ ಬಗ್ಗೆ ತನಿಖೆ ನಡೆಯುತ್ತಿದ್ದು, ಅದರ ತನಿಖಾ ವರದಿ ಬಂದ ಮೇಲೆ ಅವರ ವಿರುದ್ಧವೂ ಕ್ರಮ ಕೈಗೊಳ್ಳುತ್ತೇನೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ಮೂರನೇ ಪುಟದಿಂದ



ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ಸಚಿವ ಈಶ್ವರ ಖಂಡ್ರೆ ದಂಪತಿ.

ನಗರಗಳ ಪ್ಲಾಸ್ಟಿಕ್ ಮುಕ್ತ ಮಾಡುತ್ತೇವೆ

ಕರಗುವುದಿಲ್ಲ. ಬೆಂಕಿಯಿಂದ ನಾಶ ಮಾಡಿದರೆ ಅದರ ವಿಷಕಾರಿ ಅಂಶ ಭೂಮಿ ಹಾಗೂ ಗಾಳಿಯಲ್ಲಿ ಸೇರಿ ಮಾಲಿನ್ಯ ಉಂಟು ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಅಪಾಯಕಾರಿ ಪ್ಲಾಸ್ಟಿಕ್ ಅನ್ನು ಸಂಪೂರ್ಣವಾಗಿ ನಿಷೇಧ ಮಾಡಲು ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ ಎಂದರು. ಮೊದಲ ಹಂತದಲ್ಲಿ ಮೈಸೂರು, ಬೀದರ್, ಕುಲಬುರಗಿ, ಧರ್ಮಸ್ಥಳ ಸೇರಿದಂತೆ ಐದು ನಗರಗಳಲ್ಲಿ ಪ್ಲಾಸ್ಟಿಕ್ ಅನ್ನು ಸಂಪೂರ್ಣವಾಗಿ ನಿಷೇಧಿಸಲಾಗುವುದು. ತರುವಾಯ ಇತರೆ ಜಿಲ್ಲೆಗಳನ್ನೂ ಪ್ಲಾಸ್ಟಿಕ್ ಮುಕ್ತ ಮಾಡಲು ತೀರ್ಮಾನ ಕೈಗೊಳ್ಳಲಾಗುವುದು ಎಂದು ಈಶ್ವರ ಖಂಡ್ರೆ ತಿಳಿಸಿದರು.

ಪ್ಲಾಸ್ಟಿಕ್ ಬಳಕೆ ನಿಷೇಧ ಮಾಡುವ ಕಾನೂನು 2016ರಲ್ಲೇ ಜಾರಿಯಾಗಿದೆ. ಆದರೆ ಅನುಷ್ಠಾನ ವಿಳಂಬವಾಗಿದೆ. ಪ್ಲಾಸ್ಟಿಕ್ ಮುಕ್ತ ಮಾಡಲು ಜನರಲ್ಲಿ ಜಾಗೃತಿ ಅತ್ಯಗತ್ಯ. ಜೊತೆಗೆ ಮೈಸೂರು ನಗರ ಪಾಲಿಕೆ, ಬಿಬಿಎಂಪಿ, ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳ ಅಧಿಕಾರಿಗಳು ಪರಿಣಾಮಕಾರಿಯಾಗಿ ಪ್ಲಾಸ್ಟಿಕ್ ನಿಷೇಧ ಕಾನೂನು ಜಾರಿಗೊಳಿಸಬೇಕು. ಪ್ಲಾಸ್ಟಿಕ್ ಮುಕ್ತ ಶುದ್ಧ ವಾತಾವರಣ ನಿರ್ಮಾಣ ಮಾಡಲು ಜನಾಂದೋಲನ ರೂಪುಗೊಳ್ಳಬೇಕು. ಆಗ ಮಾತ್ರ ಪ್ಲಾಸ್ಟಿಕ್ ಮುಕ್ತ ಮಾಡಬಹುದು ಎಂದು ಈಶ್ವರ ಖಂಡ್ರೆ ಅಭಿಪ್ರಾಯಪಟ್ಟರು.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಎಲ್ಲೂ ಕೂಡ ಪ್ಲಾಸ್ಟಿಕ್ ಬಳಕೆ ಆಗದಂತೆ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡುತ್ತೇನೆ ಎಂದರು.

ತರಕಾರಿ ಖರೀದಿ ಸೇರಿದಂತೆ ಹಲವು ದಿನ ಬಳಕೆ ವಸ್ತುಗಳನ್ನು ಸಾಗಿಸಲು ಜನರು ಪ್ಲಾಸ್ಟಿಕ್ ಮೇಲೆ ಅವಲಂಭಿತರಾಗಿದ್ದಾರೆ. ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಬಟ್ಟೆ ಬ್ಯಾಗ್‌ಗಳನ್ನು ಬಳಕೆ ಮಾಡುವುದು ಸೂಕ್ತ. ಆದರೆ ಬಟ್ಟೆ ಬ್ಯಾಗ್ ದುಬಾರಿ. ಈ ಹಿನ್ನೆಲೆಯಲ್ಲಿ ಬಟ್ಟೆ ಬ್ಯಾಗ್ ತಯಾರಿಕೆಗೆ ಪ್ರೋತ್ಸಾಹ ಧನ ನೀಡಿ ಅದರ ಮಾರಾಟ ಬೆಲೆ ಕಡಿಮೆ ಮಾಡಬೇಕು. ಈ ಮೂಲಕ ಪ್ಲಾಸ್ಟಿಕ್ ಬಳಕೆಗೆ ಕಡಿವಾಣ ಹಾಕಲು ಚಿಂತನೆ ನಡೆಯುತ್ತಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು. ಈಗ ವಾಯು ಮಾಲಿನ್ಯ, ಶಬ್ಧ ಮಾಲಿನ್ಯ ಸೇರಿದಂತೆ ಎಲ್ಲಾ ರೀತಿಯ ಮಾಲಿನ್ಯವಾಗುತ್ತಿದೆ. ಇದಕ್ಕೆ ಕಡಿವಾಣ ಹಾಕದ ಹೊರತು ಪರಿಸರ ಸಂರಕ್ಷಣೆ ಅಸಾಧ್ಯ. ಈ ನಿಟ್ಟಿನಲ್ಲಿ ಪರಿಸರ ಮಾಲಿನ್ಯ ತಡೆಗೆ ಸಮಿತಿಯೊಂದನ್ನು ರಚನೆ ಮಾಡುತ್ತಿದ್ದೇನೆ ಎಂದು ಈಶ್ವರ ಖಂಡ್ರೆ ಹೇಳಿದರು. ನಾಳೆ ಮಧ್ಯಾಹ್ನ ಮೈಸೂರಿನ ಅರಣ್ಯ ಭವನದಲ್ಲಿ ಅಧಿಕಾರಿಗಳ ಸಭೆ ನಡೆಸಲಿರುವ ಈಶ್ವರ ಖಂಡ್ರೆ, ಮೈಸೂರು ದಸರಾ ಮಹೋತ್ಸವ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಚರ್ಚೆ ಮಾಡಲಿದ್ದಾರೆ.

ವಿಪಕ್ಷಗಳ ಪ್ರಮುಖ ನಾಯಕರ ಸಭೆ

ಎದುರಿಸುತ್ತಿರುವ ಸವಾಲುಗಳಿಗೆ ಪರಿಹಾರಗಳನ್ನು ಕಂಡು ಹಿಡಿಯಲು ನಾವು ಒಟ್ಟಾಗಿ ಕೆಲಸ ಮಾಡಬೇಕಾಗಿದೆ. ಹೀಗಾಗಿ ಜುಲೈ 17 ರಂದು ಬೆಂಗಳೂರಿನಲ್ಲಿ ಸಂಜೆ ಸೇರೋಣ. ಅಂದು ರಾತ್ರಿ ಚರ್ಚೆ ನಡೆಸಿ, ಮತ್ತೆ ಜುಲೈ 18 ರಂದು ಬೆಳಗ್ಗೆ 11 ಗಂಟೆಗೆ ಸಭೆ ಮುಂದುವರೆಸೋಣ ಎಂದಿದ್ದಾರೆ. ಈ ಸಭೆ ಪ್ರಮುಖವಾಗಿ 2024ರಲ್ಲಿ ನಡೆಯುವ ಲೋಕಸಭೆ ಚುನಾವಣೆ ಗಮನದಲ್ಲಿಟ್ಟುಕೊಂಡೇ ಆಯೋಜಿಸಲಾಗಿದೆ.

ಪಾಟ್ನಾದಲ್ಲಿ ನಡೆದ ಸಭೆಯಲ್ಲಿ 15ಕ್ಕೂ ಹೆಚ್ಚು ಪಕ್ಷಗಳು ಭಾಗವಹಿಸಿದ್ದವು. ಬೆಂಗಳೂರಿನಲ್ಲಿ ನಡೆಯುತ್ತಿರುವ ಸಭೆಯಲ್ಲಿ ಕಾಂಗ್ರೆಸ್ ನಾಯಕರಲ್ಲದೇ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಸೇರಿದಂತೆ ಪ್ರಮುಖ ನಾಯಕರು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಕಾರ್ಯತಂತ್ರ ರೂಪಿಸುವುದೇ ಸಭೆಯ ಮುಖ್ಯ ಉದ್ದೇಶವಾಗಿದೆ. ಜೊತೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸಮರ್ಥ ರೀತಿ ಎದುರಿಸಲು ಪ್ರತಿಪಕ್ಷದ ನಾಯಕರು ಕಾರ್ಯತಂತ್ರ ರೂಪಿಸಲಿದ್ದಾರೆ.

ಉಪ ಪಂಗಡಗಳಿಗೆ ಮೀಸಲಾತಿ

ಅರಣ್ಯ ಸಚಿವನಾಗಿ ಶೇಕಡ 60ರಷ್ಟು ಅರಣ್ಯ ಸಂಪತ್ತು ಹೊಂದಿರುವ ಈ ಭಾಗಕ್ಕೆ ಬಂದಿರುವುದು ಅತೀವ ಸಂತಸ ನೀಡಿದೆ. ಪ್ರಕೃತಿ, ಪರಿಸರವಿಲ್ಲದೆ ಮನುಷ್ಯನಿಲ್ಲ, ಇಂದು ಪ್ಲಾಸ್ಟಿಕ್ ತ್ಯಾಜ್ಯದಿಂದ ಹಲವು ಅನಾಹುತಗಳು ಸಂಭವಿಸುತ್ತಿವೆ. ಈ ಹಿನ್ನೆಲೆಯಲ್ಲಿ ಹಸಿರು ವ್ಯಾಪ್ತಿ ಹೆಚ್ಚಿಸುವ ಅಗತ್ಯವಿದೆ. ಅತೀ ಹೆಚ್ಚು ಅರಣ್ಯ ಸಂಪತ್ತು ಹೊಂದಿರುವ ಈ ಭಾಗದ ಜನರು ಪುಣ್ಯವಂತರು ಎಂದರು.

ಬುದ್ಧ, ಬಸವಣ್ಣ ಮತ್ತು ಬಾಬಾ ಸಾಹೇಬ್ ಅಂಬೇಡ್ಕರ್ ಅವರುಗಳು ಸಮ ಸಮಾಜದ ನಿರ್ಮಾಣಕ್ಕೆ ಅಡಿಪಾಯ ಹಾಕಿದ್ದಾರೆ. ನಮ್ಮ ಸರ್ಕಾರ ಆ ಮಹನೀಯರ ತತ್ವಗಳ ಮೇಲೆ ಆಡಳಿತ ನಡೆಸುತ್ತದೆ. ಮಹಿಳೆಯರ ಸಬಲೀಕರಣಕ್ಕಾಗಿ ಶಕ್ತಿ ಯೋಜನೆಯನ್ನು ತಂದಿದೆ.ಅನ್ನಭಾಗ್ಯ ಯೋಜನೆಗೆ ನಮ್ಮ ಮಠಾಧೀಶರು ಮಾಡುತ್ತಿರುವ ಅನ್ನ ದಾಸೋಹವೇ ಪ್ರೇರಣೆಯಾಗಿದೆ ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ನೀಡಿದ್ದ ಎಲ್ಲ 5 ಗ್ಯಾರಂಟಿಗಳನ್ನು ಈಡೇರಿಸುತ್ತಿದೆ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ನಂಜುಂಡಪ್ಪ ವರದಿ ಪ್ರಕಾರ ಹೆಚ್.ಡಿ.ಕೋಟೆ ತಾಲೂಕು ತೀರ ಹಿಂದುಳಿದಿದೆ, ಶೇ. 60ರಷ್ಟು ಅರಣ್ಯ ಈ ತಾಲೂಕಿನಲ್ಲಿದ್ದು, ಅರಣ್ಯ ವಾಸಿಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ನೂರಾರು ವರ್ಷಗಳಿಂದ ಸ್ವಾಧೀನದಲ್ಲಿರುವ ಜಮೀನಿಗೆ ಅರಣ್ಯ ಇಲಾಖೆ ತೊಂದರೆ ಕೊಡುತ್ತಿದೆ. ಆದಿವಾಸಿಗಳ ಹಾಡಿಗಳಲ್ಲಿ ಹಕ್ಕುಪತ್ರ ಸೇರಿದಂತೆ ಹಲವಾರು ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಸಚಿವರಿಗೆ ಮನವಿ ಮಾಡಿದರು.

ಬಸವ ಭವನ ನಿರ್ಮಾಣಕ್ಕೆ ನನ್ನ ಸಂಪೂರ್ಣ ಸಹಕಾರ ಇದೆ. ಬಸವಣ್ಣನವರ ಅನುಭವ ಮಂಟಪ ಅವರ ತತ್ವ ಸಿದ್ಧಾಂತದಲ್ಲಿ ಸಾಗೋಣ, ಸರ್ವರಿಗೂ ಸಮಬಾಳು, ಸಮಪಾಲು ಎಂಬ ರೀತಿಯಲ್ಲಿ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಮುಂಭಾಗದಿಂದ ನಂದಿ ಧ್ವಜ ಪೂಜೆಯೊಂದಿಗೆ ಶ್ರೀ ಬಸವೇಶ್ವರ ಪುತ್ಥಳಿಯನ್ನು ಬೆಳ್ಳಿ ರಥದಲ್ಲಿರಿಸಿ, ಅದ್ಧೂರಿ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯಲ್ಲಿ ಶರಣರ ವಚನಗಳು, ಅಲಂಕೃತ ಚಿತ್ರಗಳು, ಭಜನಾ ಮೇಳ, ವೀರಗಾಸೆ ಕುಣಿತ, ವೀರಭದ್ರ ನೃತ್ಯ, ನಂದಿ ಕಂಬ, ಮಹಿಳಾ ಜಾನಪದ ಕಲಾವಿದರಿಂದ ವೀರಗಾಸೆ ಕುಣಿತ, ಡೊಳ್ಳು ಕುಣಿತ, ಮಂಗಳ ವಾದ್ಯ, ಚಂಡೆ, ನಗಾರಿ ತಮಟೆ, ಬ್ಯಾಂಡ್ ಸೆಟ್, ಗಾರುಡಿಗೊಂಬೆ, ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಪಾಲ್ಗೊಂಡು ಮೆರಗು ನೀಡಿದವು.

ಪದವಿ ಪೂರ್ವ ಕಾಲೇಜು ಮೈದಾನದಿಂದ ಹೊರಟ ಮೆರವಣಿಗೆ ಪಟ್ಟಣದ ಮುಖ್ಯರಸ್ತೆಯ ಮೂಲಕ ಸಂಭ್ರಮದಿಂದ ಮಂಗಳ ಮಂಟಪದಲ್ಲಿ ನಿರ್ಮಿಸಿರುವ ಶರಣರ ಅನುಭವ ಮಂಟಪವನ್ನು ತಲುಪಿತು. ಇದೇ ವೇಳೆ ಸುತ್ತೂರು ಶೀಗಳಾದ ಶಿವರಾತ್ರಿ ದೇಶಕೇಂದ್ರ ಸ್ವಾಮೀಜಿ ಅವರು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಶಾಸಕರಾದ ದರ್ಶನ್ ಧ್ರುವನಾರಾಯಣ್, ಗಣೇಶ್ ಪ್ರಸಾದ್, ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಮೊತ್ತ ಬಸವರಾಜಪ್ಪ, ದೇವನೂರು ಮಹಾಂತಸ್ವಾಮಿ, ಪಡುವಲು ವಿರಕ್ತಮಠ ಬಿಡುಗಲು ಮಹದೇಶ್ವರ ಸ್ವಾಮಿ, ಬೀಚನಹಳ್ಳಿ ಮಠದ ನಾಗೇಂದ್ರಸ್ವಾಮಿ, ಕುದೇರು ಮಠ ಗುರುಶಾಂತಸ್ವಾಮಿ, ಸಿದ್ದಮಲ್ಲೇಶ್ವರ ಪಟ್ಟದ ಮಠ ಚನ್ನಬಸವಸ್ವಾಮಿ, ಷಡಕ್ಷರಿಸ್ವಾಮಿ, ಚಂದ್ರಶೇಖರ ಸ್ವಾಮಿ, ತೊಂಟದಾರ್ಯಸ್ವಾಮಿ, ಮಲ್ಲಿಕಾರ್ಜುನ ಸ್ವಾಮಿ, ಕಾಶಿಪತಿ, ಎಸ್. ಎಸ್. ಗುರುಸ್ವಾಮಿ, ಜೆ.ಬಿ.ಶಿವಸ್ವಾಮಿ, ಪಿ.ಕೆ.ಶಿವರಾಜ್, ಮಹದೇವಪ್ಪ, ನಂದೀಶ್, ಕೆಂಡಗಂಡ್ ಸ್ವಾಮಿ, ಪಟೇಲ್ ಮಾದೇವಪ್ಪ, ಜೆ.ಪಿ.ಶಿವರಾಜಪ್ಪ, ನಾಗಣ್ಣ, ಗುರುಸ್ವಾಮಿ ಸೇರಿದಂತೆ ಕಾರ್ಯಕ್ರಮದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ತಮಿಳ್ನಾಡಿಗೆ ನೀರು ಬಿಡುವುದು ಅಸಾಧ್ಯ

ಭ್ರಷ್ಟಾಚಾರದಲ್ಲಿ ಜಾತಿ ಇದೆ ಅಂತ ಹೇಳಿಲ್ಲ. ಸದನದಲ್ಲಿ 2 ದಿನ ಆ ಕುರಿತು ಚರ್ಚೆಯಾಗಿದೆ. ಸದನದ ವಿಷಯವನ್ನು ಪ್ರತಿದಿನ ಹೊರಗಡೆ ಬಂದು ಮಾತನಾಡುವುದು ಸೂಕ್ತವಲ್ಲ. ಅವರು ಮಾಜಿ ಪ್ರಧಾನಿ ಮಗ ಅಂತಾ ಮಾತನಾಡುತ್ತಾರೆ. ಕುಮಾರಸ್ವಾಮಿ ದೇವೇಗೌಡರ ಮಗ ಅಂತ ಎಲ್ಲರಿಗೂ ಗೊತ್ತು. ದೇವೇಗೌಡರ ಹೆಸರನ್ನು ಏಕೆ ಕುಮಾರಸ್ವಾಮಿ ತೆಗೆದುಕೊಳ್ಳಬೇಕು ಎಂದು ಪ್ರಶ್ನಿಸಿದರು.

ಜಿಲ್ಲೆಯಲ್ಲಿ 6 ಮಂದಿ ಕಾಂಗ್ರೆಸ್‌ನವರು ಗೆದ್ದಿರುವುದು ಅವರಿಗೆ ಸಹಿಸಲು ಆಗುತ್ತಿಲ್ಲ. ಡಿ.ಕೆ.ಶಿವಕುಮಾರ್, ಚಲುವರಾಯಸ್ವಾಮಿ ಬಗ್ಗೆ ಹರಿಹಾಯ್ದರೇ ಅನುಕೂಲ ಆಗುತ್ತದೆ ಎಂದು ಕುಮಾರಸ್ವಾಮಿ ಮಾತನಾಡುತ್ತಿದ್ದಾರೆ. ನಾನು ಒಬ್ಬ ಸಾಮಾನ್ಯ ರೈತನ ಮಗ. ದೇವೇಗೌಡರನ್ನು ರೈತನ ಮಗ ಅಂತಾರೆ. ಆದರೆ ಕುಮಾರಸ್ವಾಮಿಯನ್ನು ರೈತನ ಮಗ ಅಂತಾರಾ?. ಅವರನ್ನು ದೇವೇಗೌಡರ ಮಗ ಎಂದೇ ಗುರುತಿಸುವುದು ಎಂದರು. ವರ್ಗಾವಣೆ ರೇಟ್‌ಕಾರ್ಡ್ ಬಿಡುಗಡೆ ಬಗ್ಗೆ ಮಾತನಾಡಿ, 2019ರಲ್ಲಿ ಅದು ಬಿಡುಗಡೆ ಆಗಿತ್ತು. ಅದೇ ರೇಟ್‌ಕಾರ್ಡ್ ಅನ್ನು ಅಸೆಂಬ್ಲಿಯಲ್ಲಿ ತೋರಿಸಿದ್ದೇನೆ. ಅದರ ಬಗ್ಗೆ ಪ್ರಸ್ತಾಪ ಮಾಡೋದು ಬೇಡ. ಕುಮಾರಸ್ವಾಮಿಗೆ ನನ್ನ ಮೇಲೆ ದ್ವೇಷವಿದೆಯೋ, ಪ್ರೀತಿ ಇದೆಯೋ ಎಂಬುದು ಅವರಿಗೆ ಗೊತ್ತು ಎಂದರು.

ಅಬುಧಾಬಿಯಲ್ಲಿ ಐಐಟಿ ದೆಹಲಿ ಕ್ಯಾಂಪಸ್ ತೆರೆಯಲು ಭಾರತ, ಯುಎಇ ಒಪ್ಪಂದ

ನವದೆಹಲಿ, ಜು.15– ಕೇಂದ್ರ ಶಿಕ್ಷಣ ಸಚಿವಾಲಯ ಮತ್ತು ಅಬುಧಾಬಿಯ ಶಿಕ್ಷಣ ಮತ್ತು ಜ್ಞಾನ ಇಲಾಖೆ (ಎಡಿಇಕೆ) ಶನಿವಾರ ಗಲ್ಫ್ ದೇಶದಲ್ಲಿ ಐಐಟಿ ದೆಹಲಿ ಕ್ಯಾಂಪಸ್ ಸ್ಥಾಪನೆ ಸಂಬಂಧ ಒಪ್ಪಂದಕ್ಕೆ (ಎಂಒಯು) ಸಹಿ ಮಾಡಿವೆ.

ಪ್ರಸ್ತುತ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಮತ್ತು ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಝಾಯೆದ್ ಅಲ್ ನಹ್ಯಾನ್ ಅವರ ಸಮ್ಮುಖದಲ್ಲೇ ಈ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ(ಐಐಟಿ) ದೆಹಲಿಯು ಐಐಟಿ ಮದ್ರಾಸ್ ನಂತರ ವಿದೇಶದಲ್ಲಿ ಕ್ಯಾಂಪಸ್ ಸ್ಥಾಪಿಸುತ್ತಿರುವ ಎರಡನೇ ಐಐಟಿಯಾಗಿದೆ. ಕಳೆದ ವಾರ, ಐಐಟಿ ಮದ್ರಾಸ್ ತಾಂಜಾನಿಯಾದ ಜಂಜಿಬಾರ್‌ನಲ್ಲಿ ತನ್ನ ಕ್ಯಾಂಪಸ್ ತೆರೆಯಲು ಎಂಒಯುಗೆ ಸಹಿ ಹಾಕಿದೆ.

ಅಬುಧಾಬಿಯಲ್ಲಿ ಐಐಟಿ ದೆಹಲಿ ಕ್ಯಾಂಪಸ್ ಸ್ಥಾಪನೆಗೆ ಪ್ರಧಾನಿ ನರೇಂದ್ರ ಮೋದಿ ಸಮ್ಮುಖದಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿದೆ. ನವ ಭಾರತ ನಾವೀನ್ಯತೆ ಮತ್ತು ಪರಿಣತಿಗೆ ಇದು ಒಂದು ಉದಾಹರಣೆಯಾಗಿದೆ. ಯುಎಇಯಲ್ಲಿನ ಐಐಟಿ ದೆಹಲಿ ಕ್ಯಾಂಪಸ್ ಭಾರತ ಮತ್ತು ಯುಎಇಯ ಸ್ನೇಹದ ಸೌಧವಾಗಲಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

ಮುಂದಿನ ವರ್ಷ ಜನವರಿಯಿಂದ ಐಐಟಿ ದೆಹಲಿಯು, ಅಬುಧಾಬಿ ಕ್ಯಾಂಪಸ್‌ನಲ್ಲಿ ಸ್ನಾತಕೋತ್ತರ ಕೋರ್ಸ್‌ಗಳನ್ನು ಆರಂಭಿಸಲಿದ್ದು, ಸೆಪ್ಟೆಂಬರ್ 2024 ರಿಂದ ಪದವಿ ಕೋರ್ಸ್‌ಗಳನ್ನು ಆರಂಭಿಸಲಿದೆ.

ಉಪಚುನಾವಣೆ: ಸಂತೆ ಜಾತ್ರೆ ನಿಷೇಧ

ಮೈಸೂರು, ಜು.15– ಗ್ರಾಮ ಪಂಚಾಯತ್ ಉಪಚುನಾವಣೆ–2023ರ ಮತದಾನದ ಸಂಬಂಧ ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಮತ್ತು ಶಾಂತಿಯುತವಾಗಿ ಮತದಾನ ನಡೆಸುವ ಸಂಬಂಧ ಮುನ್ನೆಚ್ಚರಿಕೆ ಕ್ರಮವಾಗಿ ನಂಜನಗೂಡು ತಾಲೂಕಿನ ದೇವನೂರು ಹಾಗೂ ದೇವರಾಯಶೆಟ್ಟಿ, ನರಸೀಪುರ ತಾಲೂಕಿನ ಹೆಮ್ಮಿಗೆ, ಹುಣಸೂರು ತಾಲೂಕಿನ ಜಾಬಗೆರೆ, ತಟ್ಟೆಕೆರೆ ಹಾಗೂ ಕಟ್ಟೆಮನುಗನಹಳ್ಳಿ, ಕೃಷ್ಣರಾಜನಗರ ತಾಲೂಕಿನ ಹಂಪಾಪುರ, ಹೆಚ್.ಡಿ. ಕೋಟೆ ತಾಲೂಕಿನ ಮಾದಾಪುರ ಹಾಗೂ ಎನ್.ಬೇಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಜು.22ರ ಮಧ್ಯರಾತ್ರಿ 12 ಗಂಟೆಯಿಂದ ಜು.23ರ ಮಧ್ಯರಾತ್ರಿ 12 ಗಂಟೆವರೆಗೆ ಎಲ್ಲಾ ವಿಧದ ಸಂತೆ ಜಾತ್ರೆಗಳನ್ನು ಸಂಪೂರ್ಣವಾಗಿ ನಿಷೇಧಿಸಿ ಡಿಸಿ ಆದೇಶ ಹೊರಡಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಸಂಘದ 2 ದಿನಗಳ ಕ್ರೀಡಾಕೂಟಕ್ಕೆ ಚಾಲನೆ

ಪತ್ರಕರ್ತರ ಕ್ರೀಡಾಕೂಟ ಆಯೋಜಿಸಿರುವುದು ಶ್ಲಾಘನೀಯ: ಕೆ.ಎಂ.ಗಾಯತ್ರಿ





ಮೈಸೂರಿನ ಮಹಾರಾಜ ಕಾಲೇಜಿನ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಏರ್ಪಡಿಸಿದ್ದ ಪತ್ರಕರ್ತರ ಕ್ರೀಡಾಕೂಟವನ್ನು ಶಾಸಕ ಶ್ರೀವತ್ಸ, ಜಿ.ಪಂ ಸಿಇಓ ಕೆ.ಎಂ. ಗಾಯತ್ರಿ, ಮುಡಾ ಆಯುಕ್ತ ದಿನೇಶ್ ಹಾಗೂ ಅಂತಾರಾಷ್ಟ್ರೀಯ ಖೋ ಖೋ ಆಟಗಾರ್ತಿ ವೀಣಾ ಬ್ಯಾಟ್ ಬೀಸುವ ಮೂಲಕ ಚಾಲನೆ ನೀಡಿದರು. ಮತ್ತೊಂದು ಚಿತ್ರದಲ್ಲಿ ಪತ್ರಕರ್ತರ ಕ್ರೀಡಾಕೂಟಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ಅಂತಾರಾಷ್ಟ್ರೀಯ ಖೋ ಖೋ ಆಟಗಾರ್ತಿ ವೀಣಾ ಅವರನ್ನು ಪತ್ರಕರ್ತರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಮಣ್ಯ, ನಗರ ಕಾರ್ಯದರ್ಶಿ ರಂಗಸ್ವಾಮಿ, ಉಪಾಧ್ಯಕ್ಷ ಎಂ.ಎಸ್.ಬಸವಣ್ಣ, ಖಜಾಂಚಿ ನಾಗೇಶ್ ಪಾಣತ್ತಲೆ, ರಾಜ್ಯ ಸಮಿತಿ ಸದಸ್ಯ ಬಿ.ರಾಘವೇಂದ್ರ, ಕಾರ್ಯಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಮೈಸೂರು, ಜು.15(ಜಿಎ)– ಪತ್ರಿಕಾ ದಿನಾಚರಣೆಯ ಅಂಗವಾಗಿ ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ ಕ್ರೀಡಾಕೂಟಕ್ಕೆ ಶನಿವಾರ ಚಾಲನೆ ದೊರಕಿತು.

ಮೈಸೂರಿನ ಮಹಾರಾಜ ಕಾಲೇಜಿನ ಸ್ಪೋರ್ಟ್ಸ್ ಪೆವಿಲಿಯನ್ ಮೈದಾನದಲ್ಲಿ ಏರ್ಪಡಿಸಿದ್ದ ಕ್ರೀಡಾಕೂಟವನ್ನು, ಶಾಸಕ ಶ್ರೀವತ್ಸ, ಜಿ.ಪಂ ಸಿಇಓ ಕೆ.ಎಂ. ಗಾಯತ್ರಿ, ಮುಡಾ ಆಯುಕ್ತ ದಿನೇಶ್ ಹಾಗೂ ಅಂತಾರಾಷ್ಟ್ರೀಯ ಖೋ ಖೋ ಆಟಗಾರ್ತಿ ವೀಣಾ ಚಾಲನೆ ನೀಡಿದರು.

ನಂತರ ಜಿಪಂ ಸಿಇಓ ಕೆ.ಎಂ.ಗಾಯತ್ರಿ ಮಾತನಾಡಿ, ಹಿಂದಿನ ದಿನಗಳಲ್ಲಿ ಪತ್ರಿಕೆಯನ್ನು ಹೊರತರುವುದು ಕಷ್ಟಕರವಾಗಿತ್ತು. ತಡರಾತ್ರಿವರೆವಿಗೂ ಅಕ್ಷರಗಳನ್ನು ಜೋಡಿಸಿ ಮುದ್ರಣ ಮುಗಿದ ಬಳಿಕವಷ್ಟೇ ಮನೆಗೆ ತೆರಳುತ್ತಿದ್ದರು. ಆ ವೇಳೆಗಾಗಲೇ ಮಧ್ಯರಾತ್ರಿಯೂ ಮೀರಿ ಹೋಗಿರುತ್ತದೆ. ಕುಟುಂಬಕ್ಕೂ ಸಹ ಸಮಯ ನೀಡದ ಸ್ಥಿತಿ ಪತ್ರಕರ್ತನಿಗಿದ್ದು, ಒತ್ತಡ ಜೀವನದಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಹಾಗಾಗಿ ಕುಟುಂಬದ ಸದಸ್ಯರೊಂದಿಗೆ ಕಾಲ ಕಳೆಯಲು ಕ್ರೀಡಾಕೂಟ ಆಯೋಜಿಸಿರುವುದು ಸ್ವಾಗತಾರ್ಹ ಎಂದರು. ಮೊದಲ ದಿನ ನಡೆದ ಕ್ರೀಡಾಕೂಟದಲ್ಲಿ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಅಧ್ಯಕ್ಷರ ಇಲೆವನ್, ಉಪಾಧ್ಯಕ್ಷರ ತಂಡ, ಖಜಾಂಚಿ ತಂಡ, ಕಾರ್ಯದರ್ಶಿಗಳ ತಂಡ ಮತ್ತು ಸಮಿತಿ ಸದಸ್ಯರ ತಂಡಗಳು ಪಾಲ್ಗೊಂಡವು. ರೋಚಕ ಘಟ್ಟ ತಲುಪಿದ್ದ ಫೈನಲ್ ಪಂದ್ಯಾವಳಿಯಲ್ಲಿ ಅಧ್ಯಕ್ಷರ ಇಲೆವೆನ್ ತಂಡ ಜಯಗಳಿಸುವ ಮೂಲಕ ಟ್ರೋಫಿ ತನ್ನದಾಗಿಸಿಕೊಂಡಿತು.

ಉಪಾಧ್ಯಕ್ಷರ ತಂಡವು ರನ್ನರ್ ಅಪ್ ಸ್ಥಾನ ಪಡೆದುಕೊಂಡಿತು. ಫೈನಲ್ ಪಂದ್ಯದಲ್ಲಿ ದಿಲೀಪ್ ಚೌಡಳ್ಳಿ (54 ರನ್) ಅವರ ಭರ್ಜರಿ ಬ್ಯಾಟಿಂಗ್ ಹಾಗೂ ರಾಕೇಶ್ ಅವರ ಆಕರ್ಷಕ ಬೌಲಿಂಗ್ ನೆರವಿನಿಂದ ಅಧ್ಯಕ್ಷರ ಇಲೆವೆನ್ 3 ರನ್‌ಗಳ ರೋಚಕ ಗೆಲುವು ಸಾಧಿಸಿತು. ಫೈನಲ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಅಧ್ಯಕ್ಷರ ಇಲೆವೆನ್ 8 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 88 ರನ್‌ಗಳಿಸಿತು. ತಂಡದ ಪರ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದ ಟಿವಿ9 ವರದಿಗಾರ ದಿಲೀಪ್ ಚೌಡಳ್ಳಿ 54 ರನ್‌ಗಳಿಸಿ ಮಿಂಚಿದರು. 89 ರನ್‌ಗಳ ಟಾರ್ಗೆಟ್ ಚೇಸ್ ಮಾಡಿದ ಉಪಾಧ್ಯಕ್ಷರ ಇಲೆವೆನ್, ನಿಗದಿತ 8 ಓವರ್‌ಗಳಲ್ಲಿ 9 ವಿಕೆಟ್‌ಗಳನ್ನ ಕಳೆದುಕೊಂಡು 85 ರನ್‌ಗಳಿಸುವ ಮೂಲಕ 3 ರನ್‌ಗಳ ವಿರೋಚಿತ ಸೋಲು ಕಂಡಿತು.

ಉತ್ತಮ ಬೌಲಿಂಗ್ ದಾಳಿ ನಡೆಸಿದ ರಾಕೇಶ್ 3 ವಿಕೆಟ್‌ಗಳನ್ನ ಪಡೆದು ತಂಡದ ಗೆಲುವಿಗೆ ಕಾರಣರಾದರು. ಪಂದ್ಯದಲ್ಲಿ ಆಲ್‌ರೌಂಡ್ ಪ್ರದರ್ಶನ ನೀಡಿದ ದಿಲೀಪ್ ಚೌಡಳ್ಳಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಮಣ್ಯ, ನಗರ ಕಾರ್ಯದರ್ಶಿ ರಂಗಸ್ವಾಮಿ, ಉಪಾಧ್ಯಕ್ಷ ಎಂ.ಎಸ್. ಬಸವಣ್ಣ, ಖಜಾಂಚಿ ನಾಗೇಶ್ ಪಾಣತ್ತಲೆ, ರಾಜ್ಯ ಸಮಿತಿ ಸದಸ್ಯ ಬಿ.ರಾಘವೇಂದ್ರ, ಕಾರ್ಯಕಾರಿ ಸಮಿತಿ ಸದಸ್ಯರಾದ ರಂಗಸ್ವಾಮಿ ಮಾದಾಪುರ, ಸುರೇಶ್, ಕೆ.ಪಿ.ನಾಗರಾಜ್, ಮಾಚಮ್ಮ ಮಲ್ಲಿಗೆ, ಶಿವಮೂರ್ತಿ ಜುಪ್ತಿಮಠ್, ಬೀರೇಶ್, ಹಿರಿಯ ಪತ್ರಕರ್ತರಾದ ಕಾಶಿನಾಥ್, ಪ್ರಭುರಾಜನ್, ಪ್ರಗತಿ ಗೋಪಾಲಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಇಂದಿನ ಕ್ರೀಡಾಕೂಟ

ಜು.16ರಂದು ಬೆಳಗ್ಗೆ 6 ಗಂಟೆಗೆ ದೈಹಿಕ ಶಿಕ್ಷಣ ವಿಭಾಗದ ಒಳಾಂಗಣದಲ್ಲಿ ಪತ್ರಕರ್ತರು ಹಾಗೂ 16 ವರ್ಷ ಮೇಲ್ಪಟ್ಟ ಅವರ ಮಕ್ಕಳಿಗೆ ಷಟಲ್ ಬ್ಯಾಡ್ಮಿಂಟನ್ (ಡಬಲ್) ಪಂದ್ಯಾವಳಿ ನಡೆಯಲಿದೆ. ನಂತರ 8 ಗಂಟೆಯಿಂದ ಪತ್ರಕರ್ತರ ಕುಟುಂಬದ ಮಕ್ಕಳು, ಮಹಿಳೆಯರು ಹಾಗೂ ಪುರುಷರ ವಿವಿಧ ವಯೋಮಾನದವರಿಗೆ ಓಟದ ಸ್ಪರ್ಧೆ, ಗುಂಡು ಎಸೆತ, ಗೋಣಿಚೀಲದ ಓಟ, ಲೆಮನ್ ಅಂಡ್ ಸ್ಪೂನ್ ಮತ್ತಿತರ ಸ್ಪರ್ಧೆಗಳು ನಡೆಯಲಿವೆ. ಮಧ್ಯಾಹ್ನ 3 ಗಂಟೆಗೆ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಲಿದ್ದು, ಮೇಯರ್ ಶಿವಕುಮಾರ್, ಕೌಟಿಲ್ಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಟಿ.ಬಾಬು ಹಾಗೂ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ (ಪ್ರಭಾರ) ಪ್ರೊ.ಸಿ.ವೆಂಕಟೇಶ್ ಭಾಗವಹಿಸಲಿದ್ದಾರೆ.

ಮೋದಿ–ಶೇಖ್ ಮೊಹಮ್ಮದ್ ದ್ವಿಪಕ್ಷೀಯ ಚರ್ಚೆ: ಭಾರತ–ಯುಎಇ ವ್ಯಾಪಾರ ದ್ವಿಗುಣ



ಅಬುದಾಬಿ, ಜು.15– ಫ್ರಾನ್ಸ್ ಪ್ರವಾಸದ ಬಳಿಕ ಗಲ್ಫ್ ರಾಷ್ಟ್ರವಾದ ಅರಬ್ ಸಂಯುಕ್ತ ಸಂಸ್ಥಾನದ (ಯುಎಇ) ರಾಜಧಾನಿ ಅಬುದಾಬಿಗೆ ಆಗಮಿಸಿದ ಪ್ರಧಾನಿ ನರೇಂದ್ರ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಜೊತೆಗೆ ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಒಪ್ಪಂದ ಕುರಿತು ಮಾತುಕತೆ ನಡೆಸಿದರು.

ಕಳೆದ ವರ್ಷ ಭಾರತ–ಯುಎಇ ನಡುವಿನ ಆರ್ಥಿಕ ಒಪ್ಪಂದದಿಂದಾಗಿ ಎರಡೂ ದೇಶಗಳ ನಡುವೆ ಶೇ 20ರಷ್ಟು ವ್ಯಾಪಾರ ವಹಿವಾಟು ವೃದ್ಧಿಸಿದ್ದು, ಈ ಕುರಿತು ಇಬ್ಬರೂ ನಾಯಕರು ಚರ್ಚಿಸಿದರು.

ಬಳಿಕ ಹಲವು ಒಪ್ಪಂದಗಳಿಗೆ ಸಹಿ ಹಾಕಿದ ಮೋದಿ ಅವರು, ಎರಡು ರಾಷ್ಟ್ರಗಳ ಕರೆನ್ಸಿಗಳು ಸದೃಢ ಆರ್ಥಿಕತೆ ವೃದ್ಧಿಗೆ ಪೂರಕವಾಗಿದ್ದು, ನಮ್ಮ ನಡುವೆ ಮತ್ತಷ್ಟು ವಿಶ್ವಾಸ ವೃದ್ಧಿಗೆ ನಾಂದಿ ಹಾಡಿವೆ ಎಂದು ಹೇಳಿದ್ದಾರೆ.

ಉಭಯ ದೇಶಗಳ ನಡುವಣ ಪರಸ್ಪರ ಸಹಕಾರ ಮತ್ತು ನೆರವಿಗೆ ಈ ಒಪ್ಪಂದ ಸಹಕಾರಿಯಾಗಲಿದೆ ಎಂದು ಯುಎಇ ಅಧ್ಯಕ್ಷರು ಪ್ರತಿಕ್ರಿಯಿಸಿದ್ದಾರೆ.

ಇದಕ್ಕೂ ಮೊದಲು ಮೋದಿ ಅವರಿಗೆ ಅಧ್ಯಕ್ಷರ ಅರಮನೆಯಲ್ಲಿ ಅದ್ದೂರಿ ಸ್ವಾಗತ ಕೋರಲಾಯಿತು. ತ್ರಿವರ್ಣ ಧ್ವಜ ಹಿಡಿದು ಹಾಜರಿದ್ದ ಮಕ್ಕಳು ಈ ಅಪೂರ್ವ ಕ್ಷಣಕ್ಕೆ ಸಾಕ್ಷಿಯಾದರು.

ಎರಡೂ ದೇಶಗಳು ವ್ಯಾಪಾರ, ಹೂಡಿಕೆ, ಇಂಧನ, ಆಹಾರ ಭದ್ರತೆ, ವಿಜ್ಞಾನ ಮತ್ತು ತಂತ್ರಜ್ಞಾನ, ಶಿಕ್ಷಣ, ಹಣಕಾಸು, ರಕ್ಷಣೆ, ಭದ್ರತೆ ಸೇರಿದಂತೆ ಹಲವು ವಿಷಯಗಳಿಗೆ ಸಂಬಂಧಿಸಿದ ಒಪ್ಪಂದಗಳಿಗೆ ಸಹಿ ಹಾಕಿವೆ.

ಸಮ್ಮೇಳನಕ್ಕೆ ಸಹಕಾರ: ನವೆಂಬರ್ 28ರಿಂದ ಡಿಸೆಂಬರ್ 12ರವರೆಗೆ ದುಬೈನ ಎಕ್ಸ್ಪೋ ಸಿಟಿಯಲ್ಲಿ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಮ್ಮೇಳನ (ಸಿಒಪಿ28) ನಡೆಯಲಿದೆ. ಇದರ ನೇತೃತ್ವವನ್ನು ಯುಎಇ ಹೊತ್ತಿದ್ದು, ಸಮ್ಮೇಳನದ ಯಶಸ್ಸಿಗೆ ಭಾರತ ಸಂಪೂರ್ಣ ಸಹಕಾರ ನೀಡಲಿದೆ ಎಂದು ಮೋದಿ ಭರವಸೆ ನೀಡಿದ್ದಾರೆ.

ಯುಎಇ ಸಾಂಸ್ಕೃತಿಕ ಹೆಗ್ಗುರುತಾದ ಅಧ್ಯಕ್ಷರ ಅರಮನೆ ಕಸ್ರ್–ಅಲ್–ವತನ್‌ನಲ್ಲಿ ಪ್ರಧಾನಿ ಮೋದಿ ಅವರಿಗೆ ಔತಣಕೂಟ ಏರ್ಪಡಿಸಲಾಗಿತ್ತು.

ಸುಧರ್ಮಾ ಸಂಸ್ಕೃತ ಪತ್ರಿಕೆ ಸಂಸ್ಥಾಪನಾ ದಿನಾಚರಣೆ



ಮೈಸೂರು, ಜು.15(ಎಂಕೆ)– ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ 'ಸುಧರ್ಮಾ' ಸಂಸ್ಕೃತ ದಿನಪತ್ರಿಕೆಯ ಸಂಸ್ಥಾಪನಾ ದಿನ ಆಚರಿಸಲಾಯಿತು.

ಈ ವೇಳೆ 'ಸುಧರ್ಮಾ' ಪತ್ರಿಕಾ ವಿಶೇಷ ಸಂಚಿಕೆಯನ್ನು ಮೈಸೂರು ವಿವಿ ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿವೃತ್ತ ಉಪನಿರ್ದೇಶಕ ಡಾ.ಟಿ.ವಿ.ಸತ್ಯನಾರಾಯಣ ಬಿಡುಗಡೆಗೊಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಸ್ಕೃತ ವಿದ್ವಾನ್ ಡಾ.ಹೆಚ್.ವಿ. ನಾಗರಾಜರಾವ್, ಪ್ರಸ್ತುತ ದಿನಗಳಲ್ಲಿ ಪತ್ರಿಕೆ ಮುದ್ರಣದ ಖರ್ಚು ಹೆಚ್ಚಾಗುತ್ತಿದ್ದು, ಪತ್ರಿಕೆ ನಡೆಸುವುದೇ ಕಷ್ಟವಾಗಿದೆ. ಕಳೆದ 53 ವರ್ಷಗಳಿಂದ ಸಂಸ್ಕೃತ ಭಾಷೆ, ಸಾಹಿತ್ಯ ಪರಿಚಯಿಸುವಲ್ಲಿ ಸಕ್ರಿಯವಾಗಿ ತೊಡಗಿರುವ 'ಸುಧರ್ಮಾ' ಸಂಸ್ಕೃತ ದಿನ ಪತ್ರಿಕೆ ಮುಂದುವರೆಯಬೇಕಾದರೆ ಉದ್ಯಮಿಗಳ ಸಹಕಾರ ಅತ್ಯಂತ ಅವಶ್ಯವಾಗಿದೆ ಎಂದರು.

ಋಷಿಗಳ ಕಾಲದಿಂದಲೂ ಬಂದಿರುವ ಸಂಸ್ಕೃತ ಭಾಷೆಯಲ್ಲಿ ಖಗೋಳ, ಆಯುರ್ವೇದ ವಿಜ್ಞಾನ ಸೇರಿದಂತೆ ದೇಶದ ಕಲೆ–ಸಾಹಿತ್ಯ, ಸಂಸ್ಕೃತಿ ತಿಳಿಸುವ ಮೂಲ ಗ್ರಂಥಗಳಿದ್ದು, ಅವುಗಳ ಅಧ್ಯಯನಕ್ಕೆ ಸಂಸ್ಕೃತ ಭಾಷೆ ಕಲಿಯುವುದು ಅತ್ಯಂತ ಅವಶ್ಯವಾಗಿದೆ. ಸಂಸ್ಕೃತ ಭಾಷೆ ಉಳಿಸುವ ನಿಟ್ಟಿನಲ್ಲಿ ಸೇವೆ ಮಾಡುತ್ತಿರುವ 'ಸುಧರ್ಮಾ' ಸಂಸ್ಕೃತ ಪತ್ರಿಕೆ ಮುನ್ನಡೆಸಲು ಉದ್ಯಮಿಗಳು ಜಾಹೀರಾತು ನೀಡುವ ಮೂಲಕ ಸಹಕರಿಸಬೇಕು ಎಂದು ಹೇಳಿದರು.

ಮಹಾರಾಜ ಸಂಸ್ಕೃತ ಪಾಠಶಾಲೆ ಪ್ರಾಂಶುಪಾಲ ಡಾ.ಪಿ.ಸತ್ಯನಾರಾಯಣ, ಸಂಸ್ಕೃತ ಶಿಕ್ಷಕ ಶ್ರೀನಿವಾಸ ಸಿದ್ಧಾಂತಿ, 'ಸುಧರ್ಮಾ' ಸಂಸ್ಕೃತ ದಿನಪತ್ರಿಕೆಯ ಸಂಪಾದಕರಾದ ಜಯಲಕ್ಷ್ಮಿ ಮತ್ತಿತರರಿದ್ದರು.

ದೇಶದಲ್ಲಿಯೇ ಅತ್ಯಧಿಕ ವಿಮೆ ಕೊಟ್ಟ ಕೆಎಸ್‌ಆರ್‌ಟಿಸಿ: ಮೃತರ ಕುಟುಂಬಕ್ಕೆ ಕೋಟಿ ಪರಿಹಾರ

ಬೆಂಗಳೂರು, ಜು.15– ಅಪಘಾತದಲ್ಲಿ ಮೃತಪಟ್ಟ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಚಾಲನಾ ಸಿಬ್ಬಂದಿಗಳಾದ ಜಿ.ವಿ.ಚಲಪತಿ ಹಾಗೂ ಪಿ.ಎನ್. ನಾಗರಾಜು ಅವರ ಕುಟುಂಬದ ಅವಲಂಬಿತರಿಗೆ ಶನಿವಾರ ಕೆ.ಎಸ್.ಆರ್.ಟಿ.ಸಿ ಕೇಂದ್ರ ಕಚೇರಿಯಲ್ಲಿ ತಲಾ ರೂ.1 ಕೋಟಿ ಅಪಘಾತ ಪರಿಹಾರ ಚೆಕ್ ವಿತರಣೆಯನ್ನು ಮಾಡಲಾಯಿತು.

ಕೆಎಸ್‌ಆರ್‌ಟಿಸಿಯು ದೇಶದಲ್ಲಿಯೇ ಪ್ರಪ್ರಥಮವಾಗಿ ಕಾರ್ಮಿಕ ಕಲ್ಯಾಣದ ವಿನೂತನ ಯೋಜನೆ ಅಡಿಯಲ್ಲಿ ತನ್ನ ಸಿಬ್ಬಂದಿಗಳಿಗೆ ರೂ.1 ಕೋಟಿ ಮೊತ್ತದ ಅಪಘಾತ ವಿಮೆಯನ್ನು (On duty & Off Duty ಅಪಘಾತ) ಜಾರಿಗೊಳಿಸಿದೆ. ಈ ಯೋಜನೆಯಲ್ಲಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವತಿಯಿಂದ ಪ್ರೀಮಿಯಂ ರಹಿತ ರೂ 50 ಲಕ್ಷಗಳ ವಿಮೆ ಹಾಗೂ ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ರವರಿಂದ ವಾರ್ಷಿಕ ರೂ.885/– ಪ್ರೀಮಿಯಂ (ನೌಕರರಿಂದ) ಪಾವತಿಯ ಮೇರೆಗೆ ರೂ.50 ಲಕ್ಷಗಳ ವಿಮೆಯು ಒಳಗೊಂಡಿರುತ್ತದೆ.

ನಿಮ್ಮೊಂದಿಗೆ ನಾವಿದ್ದೇವೆ: ಮೃತಪಟ್ಟ ಚಾಲನಾ ಸಿಬ್ಬಂದಿಗಳನ್ನು ಮರಳಿ ತರಲು ಸಾಧ್ಯವಿಲ್ಲ. ಆದರೆ, ಅವರ ಕುಟುಂಬಗಳ ಸುಭದ್ರತೆಗಾಗಿ ನಿಗಮವು ಜಾರಿಗೊಳಿಸಿರುವ ಈ ಅಪಘಾತ ಪರಿಹಾರ ವಿಮಾ ಯೋಜನೆಯು ಬಹಳ ಉತ್ತಮವಾಗಿದ್ದು, ಈ ಯೋಜನೆಯನ್ನು ಸದ್ಯದಲ್ಲಿಯೇ ಇತರೆ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಜಾರಿಗೊಳಿಸಲು ಕೂಡಲೇ ಕ್ರಮ ಜರುಗಿಸಲು ಸೂಚಿಸಲಾಗುವುದು. ಕುಟುಂಬದವರು ಹಣವನ್ನು ಬ್ಯಾಂಕಿನಲ್ಲಿ ಸ್ಥಿರ ಠೇವಣಿಯನ್ನು ಇಟ್ಟು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಾಗೂ ತಮ್ಮ ಮುಂದಿನ ಜೀವನಕ್ಕಾಗಿ ಕಾಪಾಡಿಕೊಳ್ಳಬೇಕು. ಅನುಕಂಪ ಆಧಾರದ ಮೇಲಿನ ಕೆಲಸಕ್ಕೆ ಅರ್ಜಿ ಸಲ್ಲಿಸಲು ತಿಳಿಸಿದರು. ನಿಗಮದ ಸಿಬ್ಬಂದಿಗಳ ಹಾಗೂ ಕುಟುಂಬದವರ ಹಿತಾಸಕ್ತಿ ಕಾಪಾಡಲು ನಾವು ನಿಮ್ಮೊಡನೆ ಸದಾ ಇರುವುದಾಗಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭರವಸೆ ನೀಡಿದರು.

14 ವರ್ಷಸೇವೆ ಸಲ್ಲಿಸಿದ್ದ ಚಾಲಕ ನಾಗರಾಜು: ಪಿ.ಎನ್. ನಾಗರಾಜು (52) ವರ್ಷ, ಚಾಲಕ–ಕಂ–ನಿರ್ವಾಹಕರು, ಬಿಲ್ಲೆ ಸಂಖ್ಯೆ 1173, ಘಟಕ–2, ಹಾಸನ ವಿಭಾಗರವರು ನಿಗಮದಲ್ಲಿ 17 ವರ್ಷಗಳ ಸೇವೆ ಸಲ್ಲಿಸಿದ್ದರು. ಫೆಬ್ರವರಿ 1ರಂದು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಹಿಂದಿನಿಂದ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಮರಣ ಹೊಂದಿದ್ದರು. ಇವರು ಹೆಂಡತಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿರುತ್ತಾರೆ. ವಿಮಾ ಪರಿಹಾರ ರೂ.1 ಕೋಟಿ ಹೊರತುಪಡಿಸಿ, ನಿಗಮದ ವತಿಯಿಂದ ರೂ.21.94 ಲಕ್ಷ ಪರಿಹಾರಕ್ಕೆ ಅರ್ಹರಿದ್ದು, ಈ ಪೈಕಿ ರೂ.16.19 ಲಕ್ಷ ಪರಿಹಾರ ಈಗಾಗಲೇ ವಿತರಿಸಲಾಗಿದೆ. ಬಾಕಿ ಮೊತ್ತ ರೂ. 5.75 ಲಕ್ಷ ಮೃತರ ಅವಲಂಬಿತರು ಸೂಕ್ತ ದಾಖಲಾತಿ ಸಲ್ಲಿಸಿದೊಡನೆ ಭವಿಷ್ಯ ನಿಧಿ ಇಲಾಖೆಯಿಂದ ಶೀಘ್ರದಲ್ಲಿಯೇ ಪಾವತಿಯಾಗಲಿದೆ.

11 ವರ್ಷ ಸೇವೆ ಸಲ್ಲಿಸಿದ್ದ ಜಿ.ವಿ. ಚಲಪತಿ: ದೊಡ್ಡ ಮೊತ್ತದ ವಿಮೆ ಯೋಜನೆಯ ಜಾರಿಯ ನಂತರದಲ್ಲಿ ಕೆ.ಎಸ್.ಆರ್.ಟಿ.ಸಿ. ಯ ಚಾಲನಾ ಸಿಬ್ಬಂದಿ ಜಿ.ವಿ.ಚಲಪತಿ (41) ಚಾಲಕ–ಕಂ–ನಿರ್ವಾಹಕರು, ಬಿಲ್ಲೆ ಸಂಖ್ಯೆ 7275, ಘಟಕ–6, ಬೆಂಗಳೂರು ಕೇಂದ್ರೀಯ ವಿಭಾಗದಲ್ಲಿ 11 ವರ್ಷಗಳ ಸೇವೆ ಸಲ್ಲಿಸಿದ್ದರು. ಜನವರಿ 20ರಂದು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಲಾರಿ ಮತ್ತು ದ್ವಿಚಕ್ರ ವಾಹನದ ನಡುವೆ ಅಫಘಾತ ಸಂಭವಿಸಿ ಮೃತಪಟ್ಟಿದ್ದರು. ಇವರು ಹೆಂಡತಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ವಿಮಾ ಪರಿಹಾರ ರೂ.1 ಕೋಟಿ ಹೊರತುಪಡಿಸಿ, ನಿಗಮದ ವತಿಯಿಂದ ರೂ.17.21 ಲಕ್ಷ ಪರಿಹಾರಕ್ಕೆ ಅರ್ಹರಿದ್ದು, ಈ ಪೈಕಿ ರೂ.12.71 ಲಕ್ಷ ಪರಿಹಾರ ಈಗಾಗಲೇ ವಿತರಿಸಲಾಗಿದೆ. ಬಾಕಿ ಮೊತ್ತ ರೂ. 4.50 ಲಕ್ಷವನ್ನು ಮೃತ ಅವಲಂಬಿತರು ಸೂಕ್ತ ದಾಖಲಾತಿ ಸಲ್ಲಿಸಿದೊಡನೆ ಭವಿಷ್ಯ ನಿಧಿ ಇಲಾಖೆಯಿಂದ ಶೀಘ್ರದಲ್ಲಿ ಪಾವತಿಯಾಗಲಿದೆ.

ಮಾನವ ಸಂಪನ್ಮೂಲ ಕಲ್ಪಿಸಲು ಟೆಂಡರ್ ಅರ್ಜಿ ಆಹ್ವಾನ

ಮೈಸೂರು,ಜು.15–ಡಿಸಿ ಕಚೇರಿ ಕಂದಾಯ ಶಾಖೆಯಲ್ಲಿ ಕಾರ್ಯನಿರ್ವಹಿಸಲು ವಿವಿಧ ಮಾನವ ಸಂಪನ್ಮೂಲ ಸೇವೆಗಳನ್ನು ಹೊರಗುತ್ತಿಗೆ ಮೂಲಕ ಪಡೆಯಲು (ಇಂಡೆಂಟ್ ಸಂ: DMA/2023-24/SE0294) ಇ–ಪ್ರಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಿದ್ದು, www.eprocurement.karnataka.gov.in ಮುಖಾಂತರ ಟೆಂಡರನ್ನು ಸಲ್ಲಿಸಬಹುದು. ಟೆಂಡರ್ ಸಲ್ಲಿಸಲು ಜು.27 ಕೊನೆಯ ದಿನ. ತಾಂತ್ರಿಕ ಬಿಡ್‌ಅನ್ನು ಜು.28ರಂದು ತೆರೆಯಲಾಗುವುದು. ಮಾಹಿತಿಗಾಗಿ ಡಿಸಿ ಕಚೇರಿಯ ಜಿಲ್ಲಾ ನಗರಾಭಿವೃದ್ಧಿ ಕೋಶ ಕಚೇರಿ ತಾಂತ್ರಿಕ ಶಾಖೆ ಸಂಪರ್ಕಿಸಿ.

ಪ್ರಜಾಪ್ರಭುತ್ವ ಉಳಿದಿದೆ ಎಂದರೆ ಅದಕ್ಕೆ ಬಾಪೂ ಹೇಳಿಕೊಟ್ಟ ಪಾಠ ಕಾರಣ



ಮೈಸೂರು, ಜು.15(ಸಿಎನ್)– ಗಾಂಧೀಜಿಯ ತತ್ವ ಆದರ್ಶ, ಚಿಂತನೆಗಳನ್ನು ಸರಿಯಾಗಿ ಅರಿತುಕೊಂಡಿದ್ದರೆ ಮಹಾತ್ಮರನ್ನು ನಾಥೂರಾವ್ ಗೋಡ್ಸೆ ಕೊಲ್ಲುತ್ತಿರಲಿಲ್ಲ ಎಂದು ಖ್ಯಾತ ಲೇಖಕ ನಟರಾಜ್ ಹುಳಿಯಾರ್ ಅಭಿಪ್ರಾಯಪಟ್ಟರು.

ನಗರದ ಕೆಆರ್ ಆಸ್ಪತ್ರೆಯಲ್ಲಿರುವ ಪೆಥಾಲಜಿ ಶತಮಾನೋತ್ಸವ ಸಭಾಂಗಣದಲ್ಲಿ ಉಪನ್ಯಾಸ ಮಾಲೆ ಶೀರ್ಷಿಕೆಯಡಿ ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಸಹಯೋಗದಲ್ಲಿ, ಕನ್ನಡ ಸಂಘದ ವತಿಯಿಂದ ಶನಿವಾರ ಆಯೋಜಿಸಲಾಗಿದ್ದ 'ನಮಗೆ ಬೇಕಾದ ಗಾಂಧೀಜಿ' ವಿಷಯ ಕುರಿತು ಅವರು ಮಾತನಾಡಿದರು.

ಗಾಂಧಿ ಎಂದರೆ ಸಹನೆ, ಅಹಿಂಸೆ ಎಂದೇ ಹೇಳಲಾಗುತ್ತದೆ. ಆ ಸಹನೆ ಇರುವುದರಿಂದಲೇ ಕೋವಿಡ್ ಸಂದರ್ಭದಲ್ಲಿ ವೈದ್ಯರು ಪ್ರಾಣದ ಹಂಗು ತೊರೆದು ದೇಶದ ಜನತೆಯನ್ನು ಉಳಿಸುವ ನಿಟ್ಟಿನಲ್ಲಿ ಹೋರಾಡಿದ್ದೀರಿ. ಈ ಸಹನೆ ಎಲ್ಲಿಂದ ಬಂತು ಎಂದರೆ ಗಾಂಧಿಯ ತತ್ವಗಳಿಂದ ಎನ್ನಬಹುದು. ಗಾಂಧೀಜಿ ನಿಮಗೆ ಇಷ್ಟವಾಗದಿದ್ದರೆ ಅವರನ್ನು ಸ್ಮರಿಸಬೇಡಿ. ಆದರೆ ಗೋಡ್ಸೆಯಂಥವರನ್ನು ವಿಜೃಂಭಿಸುವ ಕೆಲಸ ಮಾಡಬೇಡಿ ಎಂದರು.

ನಿಜವಾದ ಪ್ರಜಾಪ್ರಭುತ್ವವೆಂದರೆ 'ಇನ್ನೊಬ್ಬರ ವಿಷಯವನ್ನು ಕೇಳಿಸಿಕೊಳ್ಳುವುದು' ಈ ರೀತಿಯ ಪ್ರಜಾಪ್ರಭುತ್ವವನ್ನು ಬ್ರಿಟಿಷರು ಅರ್ಥಮಾಡಿಕೊಳ್ಳುವ ಹಾಗೇ ಮಾಡಿದ್ದು ಗಾಂಧೀಜಿಯವರು. ದೇಶಕ್ಕೆ ಬಾಬಾ ಸಾಹೇಬರು ಕೊಟ್ಟ ಸಂವಿಧಾನದಲ್ಲಿ ಪ್ರಜಾಪ್ರಭುತ್ವ ಉಳಿದಿದೆ ಎಂದರೆ ಅದು ಬಾಪೂ ಕಲಿಸಿಕೊಟ್ಟ ಪಾಠ ಎಂದರು.

ಗಾಂಧೀಜಿಯವರು ಸರಳ ಇಂಗ್ಲಿಷ್ ಭಾಷೆ ಕಲಿತಿದ್ದರು. ಬಹುದೊಡ್ಡ ಲೇಖಕರಾದ ಅವರು 'ಕಟ್ಟ ಕಡೆಯ ಮನುಷ್ಯನಿಂದ ಯೋಚಿಸಬೇಕು' (unto this last) ಆಂಗ್ಲ ಭಾಷೆಯ ಪುಸ್ತಕವನ್ನು ಗುಜರಾತಿಗೆ 'ಸರ್ವೋದಯ' ಎಂದು ಅನುವಾದಿಸಿದ್ದಾರೆ. ಒಬ್ಬ ಪತ್ರಕರ್ತ, ರಾಜಕಾರಣಿ, ಐಎಎಸ್ ಅಧಿಕಾರಿ ಯಾವುದೇ ಹುದ್ದೆಯಲ್ಲಿರಲಿ ಕಟ್ಟ ಕಡೆಯ ವ್ಯಕ್ತಿಯನ್ನು ಗುರುತಿಸುವಂತಾಗಲಿ ಎಂಬುದು ಪುಸ್ತಕದ ಸಾರಾಂಶ.

ಅವರಲ್ಲಿ ಕಲಿಕಾ ಆಸಕ್ತಿ ಅಪಾರವಾಗಿತ್ತು. ಈ ಹಿಂದೆ ಗಾಂಧೀಜಿ ದಕ್ಷಿಣ ಆಫ್ರಿಕಾದ ಜೈಲಿನಲ್ಲಿದ್ದಾಗ ಚಪ್ಪಲಿ ಹೊಲಿಯುವುದನ್ನು ಕಲಿತಿದ್ದರು. ಆ ಚಪ್ಪಲಿಯನ್ನು ಅಲ್ಲಿನ ಪೊಲೀಸ್ ದಂಡಾಧಿಕಾರಿಗೆ ಉಡುಗೊರೆಯಾಗಿ ನೀಡಿದ್ದರು. ಆ ಅಧಿಕಾರಿ 'ಗಾಂಧೀಜಿ ಅವರು ನನ್ನ ಕೈದಿಯಾಗಿದ್ದರು ಆದರೆ ಅವರು ಕೊಟ್ಟ ಚಪ್ಪಲಿಯನ್ನು ಧರಿಸಲು ನನಗೆ ಯೋಗ್ಯತೆ ಇಲ್ಲ' ಎಂದು ಹೇಳಿದ್ದಾರೆ ಎಂದು ಕಥೆ ಮೂಲಕ ವಿವರಿಸಿದರು.

ಹರಿಶ್ಚಂದ್ರ, ಶ್ರವಣ ಕುಮಾರನ ಕತೆಯಲ್ಲಿ ಕರ್ತವ್ಯ ಹಾಗೂ ಸತ್ಯ ಪ್ರತಿಬಿಂಬಿಸುತ್ತದೆ. ಆದ್ದರಿಂದ ಎಂತಹ ಸಂದರ್ಭದಲ್ಲೂ ಕರ್ತವ್ಯದಿಂದ ದೂರ ಉಳಿಯಬಾರದು ಎಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ.ಎಸ್.ಚಂದ್ರಶೇಖರ್, ಕನ್ನಡ ಸಂಘದ ಅಧ್ಯಕ್ಷ ಡಾ. ಸಿ.ರವೀಂದ್ರನಾಥ್, ಉಪಾಧ್ಯಕ್ಷೆ ಡಾ.ಶುಭಾ ಜಯರಾಂ, ಕಾರ್ಯದರ್ಶಿ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಸಾನಬಾಳ್, ಉಪ ಪ್ರಧಾನ ಕಾರ್ಯದರ್ಶಿ ಚಂದನ್ ರೆಡ್ಡಿ, ಡಾ.ಯೋಗೇಶ್ ಸೇರಿದಂತೆ ವೈದ್ಯಕೀಯ ವಿದ್ಯಾರ್ಥಿಗಳು ಹಾಜರಿದ್ದರು.



ಕಡೆ ಆಷಾಢ ಶುಕ್ರವಾರದ ಅಂಗವಾಗಿ ಮೈಸೂರಿನ ರಾಜರಾಜೇಶ್ವರಿ ನಗರದಲ್ಲಿರುವ ಶ್ರೀ ರಾಜರಾಜೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಅಮ್ಮನವರಿಗೆ ಬಳೆ ಮತ್ತು ಹೂವಿನ ಅಲಂಕಾರದೊಂದಿಗೆ ವಿಶೇಷ ಪೂಜೆ ನೆರವೇರಿಸಲಾಯಿತು.

ನಾಳೆ ಭಾರತೀಯ ಭಾಷಾ ಸಂಸ್ಥಾನದ 55ನೇ ಸಂಸ್ಥಾಪನಾ ದಿನ

ಮೈಸೂರು,ಜು.15– ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಅಧೀನ ಸಂಸ್ಥೆಯಾದ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನವು ತನ್ನ 55ನೇ ಸಂಸ್ಥಾಪನಾ ದಿನಾಚರಣೆಯ ಉದ್ಘಾಟನಾ ಸಮಾರಂಭವನ್ನು ಜು.17ರಂದು ಬೆಳಗ್ಗೆ 10 ಗಂಟೆಗೆ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಭಾರತೀಯ ಭಾಷೆಗಳ ಪ್ರಚಾರದ ಉನ್ನತ ಅಧಿಕಾರ ಸಮಿತಿಯ ಮುಖ್ಯಸ್ಥ ಪದ್ಮಶ್ರೀ ಚಾಮು ಕೃಷ್ಣಶಾಸ್ತ್ರಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದು, ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸುವರು ಎಂದು ಭಾರತೀಯ ಭಾಷಾ ಸಂಸ್ಥಾನದ ಸಂಯೋಜಕ ಡಾ. ಸುಜೋಯ್ ಸರ್ಕಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ಫ.ಗು.ಹಳಕಟ್ಟಿ ಸಾಹಿತ್ಯ ಸೇವೆ ಅಜರಾಮರ



ಮೈಸೂರು, ಜು.15(ಎಸ್‌ಪಿಎನ್)– ಕಾಲಗರ್ಭದಲ್ಲಿ ಹುದುಗಿ ಹೋಗಿದ್ದ ವಚನ ಸಾಹಿತ್ಯವೆಂಬ ಅನರ್ಘ್ಯ ರತ್ನವನ್ನು ಶೋಧಿಸಿ, ಸಂಗ್ರಹಿಸಿ ಸಂಶೋಧನಾ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿರುವ ಕೀರ್ತಿ ಡಾ.ಫ.ಗು. ಹಳಕಟ್ಟಿಯವರಿಗೆ ಸಲ್ಲುತ್ತದೆ ಎಂದು ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಪ್ರಾಧ್ಯಾಪಕಿ ಡಾ.ಎಸ್.ಡಿ.ಶಶಿಕಲಾ ಅಭಿಪ್ರಾಯಪಟ್ಟರು.

ಮೈಸೂರು ನ್ಯೂ ಕಾಂತರಾಜ ಅರಸ್ ರಸ್ತೆಯ ಜೆಎಸ್‌ಎಸ್ ಕಾನೂನು ಕಾಲೇಜು ಆವರಣದಲ್ಲಿ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕದ ವತಿಯಿಂದ ಆಯೋಜಿಸಿದ್ದ 'ಡಾ.ಫ.ಗು.ಹಳಕಟ್ಟಿಯವರ ಜಯಂತಿ' ಮತ್ತು 'ವಚನ ಸಾಹಿತ್ಯ ಸಂರಕ್ಷಣಾ' ದಿನಾಚರಣೆಯ ದತ್ತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಧಾರವಾಡ ಹಳಕಟ್ಟಿಯವರು ಬೆಳಗಾವಿಯಲ್ಲಿ ವಕೀಲಿ ವೃತ್ತಿ ಆರಂಭಿಸಿ, ಜನಪ್ರಿಯ ವಕೀಲರಾಗಿ, ವೀರಶೈವ ಮಹಾಸಭಾ ಅಧ್ಯಕ್ಷರಾಗಿಯೂ ಕೆಲಸ ನಿರ್ವಹಿಸಿದ್ದರು. ಸಾಮಾನ್ಯ ವಕೀಲಿ ವೃತ್ತಿ ಮಾಡುತ್ತಿದ್ದ ಹಳಕಟ್ಟಿಯವರು ವಚನ ಸಾಹಿತ್ಯದ ತಾಳೆಗರಿಗಳನ್ನು ಅನ್ವೇಷಿಸಿ, ಸಂಶೋಧಿಸಿ, ಓದುಗರಿಗೆ ನೀಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಹಾಗಾಗಿ ಇವರು ಕರ್ನಾಟಕದ ಮಾಕ್ಸ್‌ಮುಲ್ಲರ್ ಎಂದೇ ಖ್ಯಾತಿ ಹೊಂದಿದ್ದಾರೆ ಎಂದು ತಿಳಿಸಿದರು.


ಫ.ಗು.ಹಳಕಟ್ಟಿಯವರ ಹುಟ್ಟಿದ ದಿನವನ್ನು ವಚನ ಸಾಹಿತ್ಯ ಸಂರಕ್ಷಣಾ ದಿನವನ್ನಾಗಿ ಸರ್ಕಾರ ಘೋಷಣೆ ಮಾಡಿರುವುದು ಅತ್ಯಂತ ಸಂತೋಷ ಸಂಗತಿ. ನಾನು ಪ್ರಾಧ್ಯಾಪಕ ವೃತ್ತಿ ಆರಂಭಿಸಿದ ದಿನದಿಂದ ಹಳೆಗನ್ನಡದ ಪಂಪ, ರನ್ನ, ಜನ್ನದ ಸಾಹಿತ್ಯ ಪಾಠಗಳನ್ನು ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಿದ್ದೆ. ಆ ಪಾಠಗಳು ವಿದ್ಯಾರ್ಥಿಗಳಿಗೆ ತಿಳಿಸುವುದು ಸುಲಭವೂ ಆಗಿತ್ತು. ಆದರೆ, ವಚನ ಸಾಹಿತ್ಯವನ್ನು ಹೆಚ್ಚಾಗಿ ಬೋಧನಾ ವಿಷಯವಾಗಿ ಗಮನಹರಿಸಿರಲಿಲ್ಲ. ನಂತರ ದಿನಗಳಲ್ಲಿ ವಚನ ಸಾಹಿತ್ಯ ಬೋಧನೆ ಮಾಡುವುದು ಅನಿವಾರ್ಯ ಸಂದರ್ಭ ಬಂತು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮಾತನಾಡಿ, ವಚನ ಪಿತಾಮಹ ಎಂದೇ ಕರೆಯಲ್ಪಡುವ ಡಾ.ಫ.ಗು.ಹಳಕಟ್ಟಿಯವರು ವಕೀಲ ವೃತ್ತಿಯಲ್ಲಿ ಗಮನಹರಿಸಿದ್ದರೆ, ವೈಯಕ್ತಿಕವಾಗಿ ಶ್ರೀಮಂತರಾಗಬಹುದಿತ್ತು. ತಮ್ಮ ಮಕ್ಕಳಿಗೆ ಸಾಕಷ್ಟು ಆಸ್ತಿ ಸಂಪಾದನೆ ಮಾಡಬಹುದಿತ್ತು. ಆದರೆ, ಹಳಕಟ್ಟಿಯವರು ವಚನ ಸಾಹಿತ್ಯ ಸಂಶೋಧನೆಯಲ್ಲಿ ತೊಡಗಿ, ಇಂದಿನ ಪೀಳಿಗೆಗೆ ವಚನ ಸಾಹಿತ್ಯದ ಸಂರಕ್ಷಣೆ ಮಾಡಿಕೊಟ್ಟಿದ್ದಾರೆ ಎಂದರು.

ಈ ವೇಳೆ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮ.ಗು.ಸದಾನಂದಯ್ಯ, ಕಾರ್ಯದರ್ಶಿ ಟಿ.ಎಸ್.ಕುಮಾರಸ್ವಾಮಿ, ಮರಿಮಲ್ಲಪ್ಪ ವಿದ್ಯಾಸಂಸ್ಥೆ ಆಡಳಿತಾಧಿಕಾರಿ ಮಂಗಳ ಮುದ್ದುಮಾದಪ್ಪ ಸೇರಿದಂತೆ ಇತರರಿದ್ದರು.

ಕಲಾದೇವಿ ಎಲ್ಲರನ್ನೂ ಸ್ವಾಗತಿಸಿದರೂ ಕೆಲವರನ್ನಷ್ಟೇ ಆಯ್ಕೆ ಮಾಡಿಕೊಳ್ಳುತ್ತಾಳೆ

● ಸಾಹಿತಿ ಬನ್ನೂರು ರಾಜು ಅಭಿಮತ ● ನಟ ಸುಪ್ರೀತ್ ಅವರಿಗೆ ಅಭಿನಂದನೆ



ಮೈಸೂರು, ಜು. 15–ಎಷ್ಟೇ ಅಪ್ರತಿಮ ಪ್ರತಿಭಾವಂತರಾಗಿದ್ದರೂ, ಅದೆಷ್ಟೇ ಸುರಸುಂದರರೇ ಆಗಿದ್ದರೂ ಸಿನಿಮಾ ಲೋಕದ ಕಲಾದೇವಿ ಅಷ್ಟು ಸುಲಭಕ್ಕೆ ಎಲ್ಲರಿಗೂ ಒಲಿಯುವುದಿಲ್ಲ. ಇದಕ್ಕೆ ಅಪಾರ ಪರಿಶ್ರಮ, ಅವಿರತ ಪ್ರಯತ್ನ, ಇದೆಲ್ಲಕ್ಕಿಂತ ಹೆಚ್ಚಾಗಿ ಅದೃಷ್ಟವಿರಬೇಕೆಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ನಗರದ ಹಿಮಾಲಯ ಪ್ರತಿಷ್ಠಾನ ಮತ್ತು ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಹಾಗೂ ಚಿತ್ರನಟ ಸುಪ್ರೀತ್ ಸ್ನೇಹ ಬಳಗದ ಸಂಯುಕ್ತ ಆಶ್ರಯದಲ್ಲಿ ಅಗ್ರಹಾರದ ತ್ಯಾಗರಾಜ ರಸ್ತೆಯಲ್ಲಿರುವ ಅಕ್ಕನ ಬಳಗದ ಶಾಲಾ ಆವರಣದಲ್ಲಿ ಶನಿವಾರ ಆಯೋಜಿಸಿದ್ದ 'ಹುಲಿದುರ್ಗ' ಚಲನಚಿತ್ರದ ಖ್ಯಾತಿಯ ಕನ್ನಡ ಚಿತ್ರರಂಗದ ಉದಯೋನ್ಮುಖ ನಾಯಕ ನಟ ಸುಪ್ರೀತ್ ಅವರ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕಲಾದೇವಿ ಎಲ್ಲರನ್ನೂ ಕೈಬೀಸಿ ಕರೆದರೂ ಕೆಲವರನ್ನು ಮಾತ್ರ ಆಯ್ಕೆ ಮಾಡಿಕೊಳ್ಳುತ್ತಾಳಾದ್ದರಿಂದ ಇಂತಹ ಆಯ್ಕೆಯ ಅದೃಷ್ಟ ಈಗಷ್ಟೇ ಚಿತ್ರರಂಗಕ್ಕೆ ಹೆಜ್ಜೆ ಇರಿಸಿರುವ ಉದಯೋನ್ಮುಖ ನಾಯಕ ನಟ ಸುಪ್ರೀತ್ ಅವರದಾಗಲೆಂದರು.

ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ, ಹಿಮಾಲಯ ಪ್ರತಿಷ್ಠಾನ ಹಾಗೂ ಸುಪ್ರೀತ್ ಸ್ನೇಹ ಬಳಗ ಈ ಮೂರೂ ಸಂಸ್ಥೆಗಳ ವತಿಯಿಂದ ನಟ ಸುಪ್ರೀತ್ ನಟನೆಯ ಇಷ್ಟರಲ್ಲೇ ತೆರೆ ಕಾಣಲು ಸಿದ್ಧವಾಗಿರುವ 'ರಾಘವೇಂದ್ರ' ಚಿತ್ರದ ಹೆಸರಿನ ಬೃಹತ್ ಕೇಕನ್ನು ಕತ್ತರಿಸಿ ನಟ ಸುಪ್ರೀತ್ ಅವರನ್ನು ಅಭಿನಂದಿಸಲಾಯಿತು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ನಟ ಸುಪ್ರೀತ್ ಅವರು, ಕನ್ನಡ ಚಲನಚಿತ್ರರಂಗಕ್ಕೆ ನಮ್ಮ ಮೈಸೂರೇ ಮೂಲವಾಗಿದ್ದು ಬಹಳಷ್ಟು ಕಲಾವಿದರುಗಳನ್ನು, ನಿರ್ದೇಶಕರುಗಳನ್ನು, ತಂತ್ರಜ್ಞರನ್ನು ನಾಡಿಗೆ ನೀಡಿದ ಕೀರ್ತಿ ಮೈಸೂರಿಗೆ ಸಲ್ಲುತ್ತದೆ. ಇಂತಹ ಸಾಂಸ್ಕೃತಿಕ ನಗರಿ ಮೈಸೂರು ಭಾಗದ ಕಲಾವಿದ ನಾನು ಎಂಬುದಕ್ಕೆ ಬಹಳ ಹೆಮ್ಮೆ ಇದೆ ಎಂದರು.

ಚಿತ್ರ ನಿರ್ಮಾಪಕರಾದ ವೆಂಕಟೇಶ್, ಉಮೇಶ್, ಸಿದ್ದರಾಜು, ಚಿತ್ರ ನಿರ್ದೇಶಕ ಯಶೋಧ್, ನಾಯಕಿ ನಟಿ ಪ್ರತೀಕ್ಷಾ, ಗಿಚ್ಚಿ ಗಿಲಿ ಗಿಲಿ ಖ್ಯಾತಿಯ ಹಾಸ್ಯನಟ ಚಂದ್ರಪ್ರಭ, ಕಲಾವಿದರಾದ ಮಂಜು ಗಾಳಿಪುರ, ಕುಮಾರ್ ಅರಸೇಗೌಡ, ವಿದ್ಯಾ ಹಾಗೂ ಬೇಬಿ ನಿಯತಿ ಕಾರ್ಯಕ್ರಮ ಕುರಿತು ಮಾತನಾಡಿದರು.

ಇದೇ ಸಂದರ್ಭದಲ್ಲಿ 'ಮಿಸ್ ಕರ್ನಾಟಕ' ಪ್ರಶಸ್ತಿಗೆ ಭಾಜನರಾಗಿರುವ ಕುಮಾರಿ ತನಿಷ್ಕಾ, ವಿಕ್ರಂ ಅಯ್ಯಂಗಾರ್ ಅವರ ಸಮಾಜ ಸೇವಾ ಕಾರ್ಯಗಳನ್ನು ಗುರುತಿಸಿ ಅವರಿಗೆ 'ಬಸವಭೂಷಣ' ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಶ್ರೀಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಶ್ರೀಬಸವರಾಜೇಂದ್ರ ಸ್ವಾಮಿ, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್. ಅನಂತ, ಅಕ್ಕನ ಬಳಗ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಸುಗುಣಾವತಿ ಹಾಗೂ 'ಹುಲಿದುರ್ಗ' ಮತ್ತು 'ರಾಘವೇಂದ್ರ' ಎರಡೂ ಚಿತ್ರತಂಡಗಳ ಜಗದೀಶ್, ಶೇಖರ್, ಅಭಿಷೇಕ್ ಮತ್ತಿತರರು ಉಪಸ್ಥಿತರಿದ್ದರು.

ಕೊಡವರನ್ನು ಎಸ್ಟಿಗೆ ಸೇರಿಸಲು ಕುಲಶಾಸ್ತ್ರೀಯ ಅಧ್ಯಯನ

ಕೊಡವ ನ್ಯಾಷನಲ್ ಕೌನ್ಸಿಲ್ ನಿಯೋಗಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ



ಮೈಸೂರು, ಜು.15– ಕೊಡವ ಬುಡಕಟ್ಟು ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭರವಸೆ ನೀಡಿದರು.

ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶನಿವಾರ ಶಾಸಕ ಎ.ಎಸ್.ಪೊನ್ನಣ್ಣ ಅವರ ನೇತೃತ್ವದಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ನಿಯೋಗವು ಭೇಟಿ ಮಾಡಿ ಚರ್ಚಿಸಿ, ಮನವಿ ಸಲ್ಲಿಸಿತು.

ಈ ವೇಳೆ ಮುಖ್ಯಮಂತ್ರಿಗಳು ಅವರೊಟ್ಟಿಗೆ ಮಾತನಾಡಿ, 'ಕೊಡಗರು' ಎಂದು ನಮೂದಾಗಿರುವ ಕೊಡವ ಸಮುದಾಯದ ಹೆಸರನ್ನು 'ಕೊಡವ' ಎಂದು ತಿದ್ದುಪಡಿ ಮಾಡಿ ಗೆಜೆಟ್ ಅಧಿಸೂಚನೆ ಹೊರಡಿಸಲು ಕೂಡ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಈ ವೇಳೆ ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ, ಬೆಂಗಳೂರು ಕೊಡವ ಸಮಾಜದ ಅಧ್ಯಕ್ಷ, ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ, ಕೆ.ಟಿ. ಪೆಮ್ಮಯ್ಯ, ಉಪಾಧ್ಯಕ್ಷರಾದ ಕರ್ನಲ್ ವಿವೇಕ್ ಮುತ್ತಣ್ಣ, ಮತ್ತಿತರರು ಉಪಸ್ಥಿತರಿದ್ದರು.

ಕಾಡಿಗೆ ಬಿಟ್ಟರೂ ಮತ್ತೆ ನಾಡಿಗೆ ಬಂದ ಕಾಡಾನೆ

- ನೂರು ಕಿಮೀ ದೂರದಿಂದ ಬಂದಿರುವ ಆನೆ
- ಕಾರ್ಮಿಕರು, ಬೆಳೆಗಾರರಲ್ಲಿ ಮತ್ತೆ ಆತಂಕ

ಮಡಿಕೇರಿ, ಜು.15– ಅಪಾರ ಪ್ರಮಾಣದ ಕೃಷಿ ಪಸಲು ನಾಶ ಮಾಡುವುದರ ಮೂಲಕ ಕಾರ್ಮಿಕರು ಮತ್ತು ಬೆಳೆಗಾರರಲ್ಲಿ ಆತಂಕ ಸೃಷ್ಟಿ ಮಾಡಿ ಹಾಡಹಗಲಿನಲ್ಲೂ ರಾಜಾರೋಷವಾಗಿ ಓಡಾಡಿಕೊಂಡು ಹಲವರ ಮೇಲೆ ದಾಳಿ ಮಾಡುತ್ತಿದ್ದ ಕಾಡಾನೆಯನ್ನು ಸೆರೆಹಿಡಿದು ಕಾಡಿಗೆ ಬಿಟ್ಟರೂ ಮರಳಿ ಬಂದಿರುವುದರಿಂದ ಕಾರ್ಮಿಕರು, ಬೆಳೆಗಾರರಲ್ಲಿ ಮತ್ತೆ ಆತಂಕ ಸೃಷ್ಟಿಯಾಗಿದೆ.

ವಿರಾಜಪೇಟೆ ತಾಲೂಕಿನ ಅಮ್ಮತಿ ಸಮೀಪದ ಒಂಟಿ ಅಂಗಡಿ ಬಳಿಯ ಕಾಫಿ ತೋಟವೊಂದರಲ್ಲಿ ಬೀಡುಬಿಟ್ಟಿದ್ದ ಈ ಕಾಡಾನೆಯನ್ನು ಕಾರ್ಮಿಕರು, ಬೆಳೆಗಾರರ ಒತ್ತಾಯದ ಮೇರೆಗೆ ಹರಸಾಹಸದಿಂದ ಪಟ್ಟು ಸೆರೆಹಿಡಿದು ರೇಡಿಯೋ ಕಾಲರ್ ಅಳವಡಿಸಿ ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲೂಕು ಅಂತರಸಂತೆ ವ್ಯಾಪ್ತಿಯ ಅರಣ್ಯಕ್ಕೆ ಬಿಡಲಾಗಿತ್ತು.

20 ದಿನಗಳ ನಂತರ ಮತ್ತೆ ಕೊಡಗು ಜಿಲ್ಲೆಗೆ ಲಗ್ಗೆ ಇಟ್ಟಿರುವ ಕಾಡಾನೆ ಚೆನ್ನಂಗಿ, ಪಾಲಿ ಬೆಟ್ಟ, ಮಾಲ್ದಾರೆ ವ್ಯಾಪ್ತಿಯ ಕಾಫಿ ತೋಟಗಳಲ್ಲಿ ಸುತ್ತಾಡುತ್ತಿರುವುದು ರೇಡಿಯೋ ಕಾಲರ್ ಮ್ಯಾಪ್ ನಲ್ಲಿ ಅರಣ್ಯ ಇಲಾಖೆಯ ಲೋಕೇಶನ್‌ನಲ್ಲಿ ಕಂಡು ಬಂದಿದೆ. ಸ್ಥಳೀಯ ಕಾರ್ಮಿಕರು ಆನೆ ಬಂದಿರುವ ಬಗ್ಗೆಯೂ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ.

ಇದೀಗ ಚನ್ನಂಗಿ ವ್ಯಾಪ್ತಿಯ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಆನೆಯ ಹುಡುಕಾಟದಲ್ಲಿ ನಿರತರಾಗಿದ್ದು ಚಲನವಲನದ ಬಗ್ಗೆ ನಿಗಾ ವಹಿಸಿದ್ದಾರೆ. ಅರಣ್ಯ ಇಲಾಖೆಗೆ ಸವಾಲಾಗಿ ಪರಿಣಮಿಸಿರುವ ಕಾಡಾನೆಯಿಂದ ಮತ್ತಷ್ಟು ಸಮಸ್ಯೆ ಎದುರಿಸುವಂತಾಗಿದೆ.



ಪುಂಡಾಟ ನಡೆಸುತ್ತಿದ್ದ ಕಾಡಾನೆಯನ್ನು ಈ ಹಿಂದೆ ಸೆರೆ ಹಿಡಿದು ಕಾಡಿಗೆ ಬಿಡಲು ಕರೆದೊಯ್ಯುತ್ತಿರುವುದು.

> "ನಿರಂತರವಾಗಿ ಕಾಫಿ ತೋಟಗಳಲ್ಲಿ ಬೀಡು ಬಿಟ್ಟು ಅಪಾರ ಪ್ರಮಾಣದ ಕೃಷಿ ಪಸಲು ನಾಶ ಮಾಡುವುದರ ಮೂಲಕ ಕಾರ್ಮಿಕರು ಬೆಳೆಗಾರರಲ್ಲಿ ಆತಂಕ ಸೃಷ್ಟಿ ಮಾಡುತ್ತಿರುವ ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟುವುದನ್ನು ಬಿಟ್ಟು ಕಾಟಾಚಾರಕ್ಕೆ ಆನೆ ಸೆರೆ ಹಿಡಿದು ಸ್ಥಳಾಂತರಿಸಿ ಮತ್ತೆ ಕಾಫಿ ತೋಟಕ್ಕೆ ಬರುವಂತೆ ಮಾಡುತ್ತಿರುವುದು ಸರಿಯಲ್ಲ ಅರಣ್ಯ ಇಲಾಖೆ ವೈಜ್ಞಾನಿಕವಾಗಿ ಕಾರ್ಯೋಜನೆಗಳನ್ನು ರೂಪಿಸಿ ಕಾಡು ಪ್ರಾಣಿಗಳ ಹಾವಳಿಯನ್ನು ತಡೆಗಟ್ಟಬೇಕು.
> –ಮಂಡೆಪಂಡ ಪ್ರವೀಣ್ ಬೋಪಯ್ಯ, ಅಮ್ಮತ್ತಿ ಹೋಬಳಿ ರೈತ ಸಂಘದ ಅಧ್ಯಕ್ಷ.

> "ಸೆರೆಹಿಡಿದ ಕಾಡಾನೆ ವಾಪಸ್ ಚೆನ್ನಂಗಿ ಭಾಗದಲ್ಲಿ ಕಂಡು ಬಂದಿದೆ ಎಂದು ಹೇಳಲಾಗುತ್ತಿದೆ. ರೇಡಿಯೋ ಕಾಲರ್ ಮಾಹಿತಿ ಮೂಲಕ ಪತ್ತೆಹಚ್ಚಿ ಮತ್ತೆ ಕಾಡಿಗೆ ಅಟ್ಟಲಾಗುವುದು.
> –ಶರಣಬಸಪ್ಪ, ವಿರಾಜಪೇಟೆ ಡಿಎಫ್ಓ

100 ಕಿಲೋ ಮೀಟರ್ ದೂರದಿಂದ ಬಂದ ಕಾಡಾನೆ: ಆನೆಯ ಚಲನವಲನ ಪರಿಶೀಲನೆ ಮಾಡಲು ಅರಣ್ಯ ಇಲಾಖೆಯ ರೇಡಿಯೋ ಕಾಲರ್‌ನಲ್ಲಿ ಪರಿಶೀಲಿಸಿದ ಸಂದರ್ಭ ಐದು ದಿನಗಳ ಹಿಂದೆ ಪಿರಿಯಾಪಟ್ಟಣ ಸಮೀಪದ ಲಿಂಗಾಪುರ ಬಳಿಯ ಅರಣ್ಯದಲ್ಲಿ ಕಾಣಿಸಿಕೊಂಡಿತ್ತು. ನಂತರದ ದಿನಗಳಲ್ಲಿ ಚೆನ್ನಂಗಿ ಅರಣ್ಯ ವ್ಯಾಪ್ತಿಯಲ್ಲಿ ಕಾಣಿಸಿಕೊಂಡ ಕಾಡಾನೆ ತನ್ನ ವಾಸ ಸ್ಥಳವಾದ ಚೆನ್ನಂಗಿ, ಮೇಕೂರು, ಮಾಲ್ದಾರೆ, ಬಡಗ ಬಣಂಗಾಲ, ಮೈಲಾಪುರ ಭಾಗದಲ್ಲಿ ಸುತ್ತಾಡುತ್ತಿರುವುದು ಕಂಡು ಬಂದಿದೆ.

ಅರಗಲ್ಲು ಬಳಿ ಆಟೋ ಪಲ್ಟಿ ಎಂಟು ವಿದ್ಯಾರ್ಥಿಗಳಿಗೆ ಗಾಯ

ಕುಶಾಲನಗರ, ಜು.15– ತಾಲೂಕಿನ ಅರಗಲ್ಲು ಬಳಿ ವಿದ್ಯಾರ್ಥಿಗಳನ್ನು ಕರೆದೊಯ್ಯುತ್ತಿದ್ದ ಆಟೋರಿಕ್ಷಾವೊಂದು ಚಾಲಕನ ನಿಯಂತ್ರಣ ತಪ್ಪಿ ಪಲ್ಟಿ ಹೊಡೆದ ಪರಿಣಾಮ ಎಂಟು ವಿದ್ಯಾರ್ಥಿಗಳು ಗಾಯಗೊಂಡಿರುವ ಘಟನೆ ಶುಕ್ರವಾರ ಸಂಜೆ ನಡೆದಿದೆ.



ತೊರೆನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಅಳುವಾರ, ಸಿದ್ಧಲಿಂಗಪುರ, ಅರಗಲ್ಲು ಗ್ರಾಮಗಳ ಎಂಟು ವಿದ್ಯಾರ್ಥಿಗಳು ತೊರೆನೂರು ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದು, ತರಗತಿ ಮುಗಿಸಿ ಆಟೋರಿಕ್ಷಾದಲ್ಲಿ ಮನೆಗೆ ತೆರಳುತ್ತಿದ್ದರು. ಈ ಸಂದರ್ಭ ಚಾಲಕನ ನಿಯಂತ್ರಣ ತಪ್ಪಿ ಆಟೋ ಪಲ್ಟಿಯಾಗಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ. ಗಂಭೀರವಾಗಿ ಗಾಯಗೊಂಡ ಇಬ್ಬರು ವಿದ್ಯಾರ್ಥಿಗಳನ್ನು ಕೂಡಲೇ ಮೈಸೂರು ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ತೊರೆನೂರು ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳ ವಿದ್ಯಾರ್ಥಿಗಳು ಪ್ರೌಢ ಶಿಕ್ಷಣಕ್ಕಾಗಿ ತೊರೆನೂರು ಸರ್ಕಾರಿ ಪ್ರೌಢಶಾಲೆಯನ್ನು ಅವಲಂಬಿಸಿದ್ದಾರೆ. ಶಾಲೆಗೆ ಹೋಗಲು ಬಸ್ ಸೌಕರ್ಯ ಇಲ್ಲದ ಹಿನ್ನೆಲೆಯಲ್ಲಿ ಆಟೋರಿಕ್ಷವೇ ಅನಿವಾರ್ಯವಾಗಿದೆ.

ಆಟೋರಿಕ್ಷಾದಲ್ಲಿ ಇದ್ದ ಎಂಟು ವಿದ್ಯಾರ್ಥಿಗಳ ಪೈಕಿ ಮೂವರಿಗೆ ಗಂಭೀರವಾದ ಗಾಯಗಳಾಗಿದ್ದು, ಇಬ್ಬರನ್ನು ಮೈಸೂರಿಗೆ ಹಾಗೂ ಓರ್ವ ವಿದ್ಯಾರ್ಥಿಯನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಐವರು ವಿದ್ಯಾರ್ಥಿಗಳು ಸಣ್ಣ ಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಾಸಕ ಭೇಟಿ: ಆಟೋ ಅಪಘಾತಕ್ಕೆ ಒಳಗಾದ ಸುದ್ದಿ ತಿಳಿದು ಶಾಸಕ ಡಾ.ಮಂತರ್ ಗೌಡ ಅವರು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಾಗಿದ್ದ ಮಕ್ಕಳನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ವೈದ್ಯರೊಂದಿಗೆ ಸಮಾಲೋಚನೆ ನಡೆಸಿ ಉತ್ತಮವಾದ ವೈದ್ಯಕೀಯ ಸೌಲಭ್ಯ ಒದಗಿಸುವಂತೆ ಸೂಚನೆ ನೀಡಿದರು. ಮಕ್ಕಳಿಗೆ ಹಾಗೂ ಪೋಷಕರಿಗೆ ಧೈರ್ಯ ತುಂಬಿದರು.

ಕರಿಕೆ ಆರೋಗ್ಯ ಕೇಂದ್ರದಲ್ಲಿ ಔಷಧಿಗಳ ಕೊರತೆ

ರೋಗಿಗಳ ಪರದಾಟ, ಔಷಧಿ ಪೂರೈಸಲು ಮನವಿ

ಮಡಿಕೇರಿ,ಜು.15– ಕೊಡಗು ಜಿಲ್ಲೆಯಲ್ಲಿ ಅತಿ ಹೆಚ್ಚು ಮಳೆಯಾಗುವ ಪ್ರದೇಶಗಳಲ್ಲಿ ಗಡಿಗ್ರಾಮ ಕರಿಕೆ ಕೂಡ ಒಂದು. ಮಳೆಗಾಲದಲ್ಲಿ ರೋಗಿಗಳ ಸಂಖ್ಯೆಯೂ ಇಲ್ಲಿ ಹೆಚ್ಚು, ಆದರೆ ಇಲ್ಲಿರುವ ಆರೋಗ್ಯ ಕೇಂದ್ರದಲ್ಲಿ ಸಕಾಲದಲ್ಲಿ ಔಷಧಿ ಲಭಿಸುತ್ತಿಲ್ಲ ಎನ್ನುವ ಆರೋಪ ಕೇಳಿ ಬರುತ್ತಿದೆ.

ಪ್ರತಿವರ್ಷ ಮಳೆಗಾಲ ಬಂತೆಂದರೆ ಕೊಡಗು–ಕೇರಳ ಗಡಿಯಲ್ಲಿರುವ ಕರಿಕೆ ಗ್ರಾಮದಲ್ಲಿ ವಿವಿಧ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಳ್ಳುತ್ತವೆ. ಇಲ್ಲಿನ ರೋಗಿಗಳು ಸುಮಾರು 70 ಕಿಮೀ ದೂರದಲ್ಲಿರುವ ಮಡಿಕೇರಿಯ ಜಿಲ್ಲಾಸ್ಪತ್ರೆ ಅಥವಾ ಕೇರಳದ ಪಾಣತ್ತೂರು ಆಸ್ಪತ್ರೆಗೆ ತೆರಳಬೇಕಾಗುತ್ತದೆ. ಕರಿಕೆಯಲ್ಲಿ ಆರೋಗ್ಯ ಕೇಂದ್ರ ಇದೆಯಾದರೂ ಸೂಕ್ತ ಔಷಧಿಗಳು ಸಕಾಲದಲ್ಲಿ ದೊರೆಯುತ್ತಿಲ್ಲ. ದೂರದ ಊರುಗಳಿಗೆ ತೆರಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಬಡ ಕುಟುಂಬಗಳಿಗೆ ಸಾಧ್ಯವಾಗುತ್ತಿಲ್ಲ.

ಇದನ್ನು ಮನಗಂಡ ಕರಿಕೆ ಗ್ರಾಪಂ ಉಪಾಧ್ಯಕ್ಷ ಎನ್.ಬಾಲಚಂದ್ರ ನಾಯರ್ ಅವರು ಮಡಿಕೇರಿಯಲ್ಲಿ ಜಿಲ್ಲಾ ಆರೋಗ್ಯ ಅಧಿಕಾರಿಗಳನ್ನು ಭೇಟಿಯಾಗಿ ಆರೋಗ್ಯ ಕೇಂದ್ರದ ಕುಂದು ಕೊರತೆಗಳನ್ನು ವಿವರಿಸಿದರು.

ಕರಿಕೆಯಲ್ಲಿ ಪರಿಶಿಷ್ಟ ಜಾತಿ, ಪಂಗಡದ ಕುಟುಂಬಗಳು ಹಾಗೂ ಕೃಷಿ ಕೂಲಿ ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ರೋಗಗಳು ಕಾಣಿಸಿಕೊಂಡರೆ ಇವರುಗಳಿಗೆ ದೂರದ ಊರುಗಳಿಗೆ ತೆರಳಿ ಚಿಕಿತ್ಸೆ ಪಡೆಯುವುದು ಅಸಾಧ್ಯವಾಗಿದೆ ಎಂದಿದ್ದಾರೆ.

ಸುಂಟಿಕೊಪ್ಪ ಬಳಿ ಕಾಡಾನೆಗಳ ದಾಂಧಲೆ

ಕಾರ್ಮಿಕನಿಗೆ ತುಳಿದು ಗಾಯ, ಗೇಟು ಮುರಿದ ಆನೆ

ಸುಂಟಿಕೊಪ್ಪ,ಜು.15– ಸುಂಟಿಕೊಪ್ಪ ಹೋಬಳಿ ವ್ಯಾಪ್ತಿಯಲ್ಲಿ ಕಾಡಾನೆಗಳು ದಾಂಧಲೆ ನಡೆಸಿದ್ದು ಓರ್ವ ಕಾರ್ಮಿಕ ಗಾಯಗೊಂಡು ಆಸ್ಪತ್ರೆಗೆ ದಾಖಲಾದ ಘಟನೆ ನಡೆದಿದೆ. ಸಮೀಪದ ಅತ್ತೂರು ನಲ್ಲೂರು ಗ್ರಾಮದ ಕಂಬಿಬಾಣೆಯ ವೃಂದಾವನ ತೋಟದ ಬಳಿ ಕೆಲಸ ಮುಗಿಸಿ ಬರುತ್ತಿದ್ದ ಭೂತನಕಾಡು ನಿವಾಸಿ ರಾಮಸ್ವಾಮಿ ಎಂಬವರ ಮೇಲೆ ಕಾಡಾನೆಯೊಂದು ದಿಡೀರ್ ದಾಳಿ ನಡೆಸಿ ಕಾಲನ್ನು ತುಳಿದಿದೆ. ಬಲ ಕಾಲಿಗೆ ಗಂಭೀರ ಗಾಯವಾಗಿದ್ದರೆ, ಎಡ ಕಾಲು, ಎದೆಯ ಭಾಗದಲ್ಲಿ ಗಾಯಗಳಾಗಿವೆ.

ಕಾರ್ಮಿಕ ರಾಮಸ್ವಾಮಿಯ ಬೊಬ್ಬೆಗೆ ಹೆದರಿದ ಆನೆ ಅಲ್ಲಿಂದ ಕಾಲ್ಕಿತ್ತಿದೆ. ವಿಷಯವರಿತ ಸ್ಥಳೀಯರು ಗಾಯಗೊಂಡಿದ್ದ ಕಾರ್ಮಿಕನನ್ನು ಸುಂಟಿಕೊಪ್ಪ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಲಾಯಿತು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಹಾಗೆಯೇ ಕಂಬಿಬಾಣೆಯ ಚಿಕ್ಲಿಹೊಳೆಯ ರಸ್ತೆಗೆ ತೆರಳುವ ಕಾಫಿ ಬೆಳೆಗಾರ ಎಂ.ಕೆ.ನರೇಂದ್ರ ಅವರ ಮನೆಯ ಗೇಟನ್ನು ಕಾಡಾನೆ ತುಳಿದು ಹಾನಿಗೊಳಿಸಿದೆ. ಕಂಬಿಬಾಣೆ ವ್ಯಾಪ್ತಿಯಲ್ಲಿ ಕಳೆದ ಹಲವು ದಿನಗಳಿಂದ ಕಾಡಾನೆಗಳು ಬೀಡು ಬಿಟ್ಟು ಆತಂಕ ಸೃಷ್ಟಿಸುತ್ತಿವೆ.

ಜು.20, ಜಿಲ್ಲಾ ಮಟ್ಟದ ಕೈಗಾರಿಕಾ ಸ್ಪಂದನಾ ಸಭೆ

ಮಡಿಕೇರಿ ಜು.15– ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಕೈಗಾರಿಕಾ ಸ್ಪಂದನಾ ಸಭೆಯು ಜು.20 ರಂದು ನಡೆಯಲಿದೆ. ಈ ಸಭೆಯಲ್ಲಿ ಉದ್ದಿಮೆದಾರರ ಸಮಸ್ಯೆಗಳನ್ನು ಚರ್ಚಿಸಲಾಗುವುದು.

ಕೈಗಾರಿಕೆಗಳಲ್ಲಿ ಸಮಸ್ಯೆಗಳಿದ್ದಲ್ಲಿ, ಸಮಸ್ಯೆಗಳನ್ನು ಲಿಖಿತ ರೂಪದಲ್ಲಿ ಈ ಕಾರ್ಯಾಲಯಕ್ಕೆ ಜು.18 ರೊಳಗೆ ಇ–ಮೇಲ್ dicjdkodagu@gmail.com ಮುಖಾಂತರ ಅಥವಾ ಖುದ್ದಾಗಿ ಲಿಖಿತವಾಗಿ ಸಲ್ಲಿಸುವಂತೆ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಇಂಜಿಲಗೆರೆಯಲ್ಲಿ ಒಂಟಿ ಸಲಗ ಲಗ್ಗೆ

ಹಲಸಿನ ಮರ ಬೀಳಿಸಿ ದಾಂಧಲೆ; ಕಾಫಿ, ಮೆಣಸು ಬೆಳೆ ನಾಶ

ಮಡಿಕೇರಿ,ಜು.15– ಅಮ್ಮತ್ತಿಯ ಮಲ್ಲೇರಿ ಗ್ರಾಮದ ಇಂಜಿಲಗೆರೆಯಲ್ಲಿ ಒಂಟಿ ಸಲಗ ದಾಂಧಲೆ ನಡೆಸಿದೆ. ಸ್ಥಳೀಯ ಬೆಳೆಗಾರ ಬಿ.ಎಸ್.ಮೋಹನ ಎಂಬವರ ತೋಟಕ್ಕೆ ಲಗ್ಗೆ ಇಟ್ಟ ಕಾಡಾನೆ ಹಲಸಿನ ಮರವೊಂದನ್ನು ಬೀಳಿಸಿದೆ.

ಮರ ಬಿದ್ದ ಪರಿಣಾಮ ಅನೇಕ ಕಾಫಿ ಗಿಡಗಳಿಗೆ ಹಾನಿಯಾಗಿದೆ. ಮರಕ್ಕೆ ಹಬ್ಬಿಸಲಾಗಿದ್ದ ಕಾಳುಮೆಣಸಿನ ಬಳ್ಳಿ ನಾಶವಾಗಿದೆ. ಸ್ಪಿಂಕ್ಲರ್ ಪೈಪ್‌ಗಳು ಮುರಿದು ಹೋಗಿದ್ದು, ಬಾಳೆ ಗಿಡಗಳನ್ನು ಆನೆ ತಿಂದು ತೇಗಿದೆ. ಒಂಟಿ ಸಲಗ ತೋಟದ ತುಂಬೆಲ್ಲ ಓಡಾಡಿದ ಪರಿಣಾಮ ಗಿಡಗಳೆಲ್ಲವೂ ಹಾನಿಗೊಳಗಾಗಿದ್ದು, ಅಪಾರ ನಷ್ಟ ಉಂಟಾಗಿದೆ.



ಕಾಡಾನೆ ದಾಳಿ ಬಗ್ಗೆ ಬೇಸರ ವ್ಯಕ್ತಪಡಿಸಿರುವ ಬೆಳೆಗಾರ ಮೋಹನ ನಮ್ಮಂತಹ ಸಣ್ಣ ಬೆಳೆಗಾರರಿಗೆ ಇದು ತುಂಬಲಾರದ ನಷ್ಟವಾಗಿದೆ ಎಂದರು. ಪರಿಹಾರಕ್ಕಾಗಿ ಇಲಾಖೆಯಿಂದ ಇಲಾಖೆಗೆ ಅರ್ಜಿ ಹಿಡಿದು ಅಲೆದಾಡಬೇಕಾಗಿದೆ. ಇದರಿಂದ ನಮ್ಮ ಸಮಯವೂ ವ್ಯರ್ಥ, ಹಣವೂ ವ್ಯರ್ಥ. ಪರಿಹಾರವೂ ಅಲ್ಪ ಮೊತ್ತದ್ದಾಗಿರುತ್ತದೆ ಎಂದು ಅಸಹಾಯಕತೆ ವ್ಯಕ್ತಪಡಿಸಿದರು. ಕಾಡಾನೆ ದಾಳಿ ಮಾಡಿದಾಗ ಅಲ್ಪ ಪರಿಹಾರ ನೀಡಿ ಕಣ್ಣೊರೆಸುವ ಬದಲು ವನ್ಯಜೀವಿಯ ಉಪಟಳ ತಡೆಗೆ ಶಾಶ್ವತ ಪರಿಹಾರ ಸೂಚಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು. ಇಂಜಿಲಗೆರೆಯಲ್ಲಿ ಕಾಡಾನೆಗಳ ಹಾವಳಿ ಮಿತಿಮೀರಿರುವ ಬಗ್ಗೆ ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.

ಚಾಮರಾಜನಗರದಲ್ಲಿ ಸರ್ಕಾರಿ ಕಾನೂನು ಕಾಲೇಜು ಆರಂಭ ಹಿನ್ನೆಲೆ

ಕಾನೂನು ವಿವಿ ಸ್ಥಾನಿಕ ಪರಿಶೀಲನಾ ಸಮಿತಿ ಭೇಟಿ, ಪರಿಶೀಲನೆ

ಚಾಮರಾಜನಗರ, ಜು.15– ನಗರದಲ್ಲಿ ಸರ್ಕಾರಿ ಕಾನೂನು ಕಾಲೇಜನ್ನು 2023–24ನೇ ಶೈಕ್ಷಣಿಕ ಸಾಲಿಗೆ ಪ್ರಾರಂಭಿಸುವ ಸಂಬಂಧ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸ್ಥಾನಿಕ ಪರಿಶೀಲನಾ ಸಮಿತಿ ತಂಡ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರೊಂದಿಗೆ ಶನಿವಾರ ಪರಿಶೀಲನೆ ನಡೆಸಿತು.

ಸ್ಥಾನಿಕ ಪರಿಶೀಲನಾ ಸಮಿತಿ ಅಧ್ಯಕ್ಷರು ಹಾಗೂ ಉಡುಪಿಯ ವೈಕುಂಠ ಬಾಳಿಗ ಕಾನೂನು ಕಾಲೇಜಿನ ಪ್ರಾಂಶುಪಾಲ ಕೆ.ಎಸ್. ರಘುನಾಥ್, ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ಮಂಡ್ಯ ಪಿಇಎಸ್ ಕಾನೂನು ಕಾಲೇಜಿನ ಸಹಾಯಕ ಪ್ರೊ.ಕೆ.ಎಸ್.ಜಯಕುಮಾರ್, ಸಮಿತಿ ಸದಸ್ಯರಾದ ಹುಬ್ಬಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ ಸಹಾಯಕ ಪ್ರೊಫೆಸರ್ ಹಾಗೂ ಸಹಾಯಕ ಕುಲಸಚಿವ ಡಾ. ಸುನೀಲ್ ಬಾಗಡೆ ಅವರನ್ನೊಳಗೊಂಡ ತಂಡ ನಗರದ ರೇಷ್ಮೆ ಇಲಾಖೆಗೆ ಸೇರಿದ ಕಟ್ಟಡಕ್ಕೆ ಭೇಟಿ ನೀಡಿ ಪರಿಶೀಲಿಸಿತು.

ಆರಂಭದಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರೊಂದಿಗೆ ಕಾಲೇಜಿನ ಪ್ರಾಂಶುಪಾಲರ ಕಚೇರಿಯಲ್ಲಿ ಸ್ಥಾನಿಕ ಪರಿಶೀಲನಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು ವಿವರವಾಗಿ ಚರ್ಚಿಸಿದರು. ಬಳಿಕ ಕಾಲೇಜು ಕಟ್ಟಡದಲ್ಲಿ ತರಗತಿ ಕೊಠಡಿಗಳು, ಬೋಧಕರ ಕೊಠಡಿ, ಗ್ರಂಥಾಲಯ, ಇನ್ನಿತರ ಮೂಲ ಸೌಕರ್ಯಗಳನ್ನು ಪರಿಶೀಲಿಸಿದರು.



ಕೊಠಡಿಯಲ್ಲಿ ಲಭ್ಯವಿರುವ ಮೇಜು, ಕುರ್ಚಿ, ಇತರೆ ಪೀಠೋಪಕರಣಗಳನ್ನು ವೀಕ್ಷಿಸಿ ಅಗತ್ಯವಿರುವ ಪೀಠೋಪಕರಣಗಳು ಸೇರಿದಂತೆ ಬೇಕಿರುವ ಪರಿಕರಗಳ ಕುರಿತು ಸಮಿತಿ ಅಗತ್ಯ ಸೂಚನೆ ನೀಡಿತು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಸರ್ಕಾರಿ ಕಾನೂನು ಕಾಲೇಜಿಗೆ ಪ್ರಸ್ತುತ ತಾತ್ಕಾಲಿಕ ಕಟ್ಟಡ ನೀಡಲಾಗಿದೆ. ಕಾಲೇಜಿಗೆ ಅವಶ್ಯವಿರುವ ಕಂಪ್ಯೂಟರ್, ಹೆಚ್ಚುವರಿ ಪೀಠೋಪಕರಣ, ಗ್ರಂಥಾಲಯಕ್ಕೆ ಬೇಕಿರುವ ಪುಸ್ತಕಗಳು, ಇತರೆ ಮೂಲ ಸೌಕರ್ಯ ಒದಗಿಸಲಾಗುವುದು. ಈ ಶೈಕ್ಷಣಿಕ ಸಾಲಿನಲ್ಲೇ ಕಾನೂನು ಕಾಲೇಜು ಆರಂಭಕ್ಕೆ ಬೇಕಿರುವ ಎಲ್ಲ ನೆರವು ದೊರಕಿಸಿಕೊಡಲಾಗುವುದು ಎಂದರು.

ಕಾನೂನು ಕಾಲೇಜು ಸ್ವಂತ ಕಟ್ಟಡಕ್ಕಾಗಿ ಯಡಪುರದಲ್ಲಿ 4 ಎಕರೆ ಜಾಗ ನೀಡಲಾಗಿದೆ. ಅಲ್ಲಿಯೇ ಕಟ್ಟಡ ನಿರ್ಮಾಣ ಮಾಡಲಾಗುತ್ತದೆ. ಕಟ್ಟಡ ನಿರ್ಮಾಣವಾಗುವವರೆಗೆ ತಾತ್ಕಾಲಿಕವಾಗಿ ಇಲ್ಲಿನ ರೇಷ್ಮೆ ಇಲಾಖೆಯ (ಹಿಂದಿನ ಕೇಂದ್ರೀಯ ವಿದ್ಯಾಲಯ) ಕಟ್ಟಡದಲ್ಲಿ ಕಾನೂನು ಕಾಲೇಜು ನಡೆಸಲು ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಸ್ಥಾನಿಕ ಪರಿಶೀಲನಾ ಸಮಿತಿ ಅಧ್ಯಕ್ಷ ಕೆ.ಎಸ್.ರಘುನಾಥ್ ಮಾತನಾಡಿ, ಕಾನೂನು ಕಾಲೇಜು ಆರಂಭಿಸುವ ಸಂಬಂಧ ಬಾರ್ ಕೌನ್ಸಿಲ್ ಆಫ್ ಇಂಡಿಯಾ ಸೂಚನೆ ಮೇರೆಗೆ ಕಾಲೇಜು ಕಟ್ಟಡ ಪರಿಶೀಲಿಸಲಾಗಿದೆ. ಕಾಲೇಜಿಗೆ ಇನ್ನಷ್ಟು ಮೂಲ ಸೌಲಭ್ಯಗಳು ಮೇಲ್ದರ್ಜೆಗೆ ಏರಬೇಕಿದೆ. ಈ ಬಗ್ಗೆ ಅಗತ್ಯ ನಿರ್ದೇಶನ ನೀಡಿದ್ದೇವೆ. ಶಾಸಕರು ಕಾಲೇಜು ಆರಂಭಕ್ಕೆ ಅಗತ್ಯವಿರುವ ಎಲ್ಲ ಮೂಲ ಸೌಕರ್ಯ ಕಲ್ಪಿಸುವುದಾಗಿ ತಿಳಿಸಿದ್ದಾರೆ ಎಂದರು.

ಪ್ರಸಕ್ತ ಸಾಲಿನಿಂದಲೇ 3 ವರ್ಷಗಳ ಕಾನೂನು ಪದವಿ ತರಗತಿಗಳನ್ನು ಆರಂಭಿಸಬಹುದಾಗಿದೆ. ಆದರೆ ಇದಕ್ಕೂ ಮೊದಲು ಬಾರ್ ಕೌನ್ಸಿಲ್ ಆಫ್ ಇಂಡಿಯಾ ಪರಿಶೀಲಿಸಿ ಅನುಮತಿ ನೀಡುವುದು ಅಗತ್ಯವಾಗಿದೆ. ಕಾಲಮಿತಿಯೊಳಗೆ ಎಲ್ಲಾ ಸಿದ್ಧತೆಗಳನ್ನು ಪೂರ್ಣಗೊಳಿಸಿಕೊಳ್ಳಬೇಕು ಎಂದರು.

ಸರ್ಕಾರಿ ಕಾನೂನು ಕಾಲೇಜಿನ ಪ್ರಾಂಶುಪಾಲ ಡಾ.ಎ.ಗೋಪಾಲ, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ.ರವಿಕುಮಾರ್ ಇತರರಿದ್ದರು.

ಗೃಹಲಕ್ಷ್ಮಿ ಯೋಜನೆ ಅನುಷ್ಠಾನಕ್ಕೆ ಸಿದ್ಧತೆ ಕೈಗೊಳ್ಳಿ

ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಸೂಚನೆ



ಚಾಮರಾಜನಗರ, ಜು.15– ಕುಟುಂಬದ ಯಜಮಾನಿಗೆ ಪ್ರತಿ ತಿಂಗಳು 2 ಸಾವಿರ ರೂ. ನೀಡುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹಲಕ್ಷ್ಮಿ ಯೋಜನೆ ಅನುಷ್ಠಾನಕ್ಕೆ ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ಗೃಹಲಕ್ಷ್ಮಿ ಯೋಜನೆ ಜಾರಿ ಸಂಬಂಧ ಗೂಗಲ್ ಮೀಟ್ ಮೂಲಕ ಅಧಿಕಾರಿಗಳ ಸಭೆ ನಡೆಸಿ ಅವರು ಮಾತನಾಡಿದರು. ಮಹಿಳೆಯರ ಆರ್ಥಿಕ ಸ್ಥಿತಿ ಹೆಚ್ಚಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕುಟುಂಬದ ಯಜಮಾನಿಗೆ ಪ್ರತಿ ತಿಂಗಳು 2 ಸಾವಿರ ರೂ. ನೀಡುವ ಗೃಹಲಕ್ಷ್ಮಿ ಯೋಜನೆಗೆ ಆ. 19ರಂದು ರಾಜ್ಯ ಮಟ್ಟದಲ್ಲಿ ಚಾಲನೆ ದೊರೆಯಲಿದೆ. ಜಿಲ್ಲೆಯಲ್ಲೂ ವ್ಯಾಪಕವಾಗಿ ಫಲಾನುಭವಿಗಳ ನೋಂದಣಿ ಪ್ರಕ್ರಿಯೆ, ಮಂಜೂರಾತಿ ಪತ್ರ ನೀಡುವ ಕಾರ್ಯವನ್ನು ಸುಸೂತ್ರವಾಗಿ ನಿರ್ವಹಿಸಲು ಸಿದ್ಧತೆ ಕೈಗೊಳ್ಳಬೇಕೆಂದು ನಿರ್ದೇಶನ ನೀಡಿದರು.

ಪಡಿತರ ಚೀಟಿಯಲ್ಲಿ ಗುರುತಿಸಲಾಗಿರುವ ಯಜಮಾನಿ ಮಹಿಳೆ ಯೋಜನೆ ಫಲಾನುಭವಿಯಾಗಲಿದ್ದಾರೆ. ನೋಂದಣಿಗಾಗಿ ಗ್ರಾಮ ಒನ್, ಬಾಪೂಜಿ ಸೇವಾ ಕೇಂದ್ರ, ಕರ್ನಾಟಕ ಒನ್ ಕೇಂದ್ರಗಳಲ್ಲಿ ಅವಕಾಶವಿರುವ ಹಿನ್ನೆಲೆಯಲ್ಲಿ ಈ ಕೇಂದ್ರಗಳಲ್ಲಿ ನೋಂದಣಿ ಕಾರ್ಯಕ್ಕೆ ಯಾವುದೇ ತಾಂತ್ರಿಕ ತೊಂದರೆ ಬಾರದಂತೆ ಎಲ್ಲಾ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ನೋಂದಣಿಯಾಗುವ ಪ್ರತಿ ಕೇಂದ್ರಗಳಿಗೆ ನೋಡಲ್ ಅಧಿಕಾರಿಗಳ ನೇಮಕವಾಗಬೇಕು. ಡೇಟಾ ಎಂಟ್ರಿ ಆಪರೇಟರ್‌ಗಳಿಗೆ ನೋಂದಣಿ ಸಂಬಂಧ ತುರ್ತಾಗಿ ತರಬೇತಿ ನೀಡಬೇಕು. ಅಗತ್ಯ ಸಿಬ್ಬಂದಿಗೆ ಎಲ್ಲ ಮಾರ್ಗದರ್ಶನ ಮಾಡಬೇಕು. ನೋಂದಣಿ ಪ್ರಕ್ರಿಯೆ ಬಗ್ಗೆ ಪೂರ್ಣ ಪ್ರಮಾಣದ ಮಾಹಿತಿ ಇರಬೇಕು ಎಂದರು.

ನೋಂದಣಿ ಕೇಂದ್ರಗಳು, ಕಂದಾಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗ್ರಾಪಂ ಕಚೇರಿ ವ್ಯಾಪ್ತಿಯಲ್ಲಿ ಗೃಹಲಕ್ಷ್ಮಿ ಯೋಜನೆ ಕುರಿತು ವ್ಯಾಪಕ ಪ್ರಚಾರ ಮೂಡಿಸುವ ಫಲಕಗಳನ್ನು ಅಳವಡಿಸಬೇಕು. ಫಲಾನುಭವಿಗಳು ನೋಂದಣಿಗೆ ಯಾವುದೇ ಹಣ ನೀಡುವಂತಿಲ್ಲ. ಮಧ್ಯವರ್ತಿಗಳು ಇದರ ದುರುಪಯೋಗಪಡಿಸಿಕೊಳ್ಳದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು ಎಂದರು.

ಅರ್ಹರೆಲ್ಲರಿಗೂ ಯೋಜನೆ ಪ್ರಯೋಜನ ತಲುಪಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ದಕ್ಷತೆಯಿಂದ ಕಾರ್ಯ ನಿರ್ವಹಿಸಬೇಕು. ಗೃಹಲಕ್ಷ್ಮಿ ಯೋಜನೆ ಜಿಲ್ಲೆಯಲ್ಲಿ ಸಮರ್ಪಕ ಅನುಷ್ಠಾನಕ್ಕೆ ಅಗತ್ಯ ಕ್ರಮಗಳನ್ನು ತುರ್ತಾಗಿ ಕೈಗೊಳ್ಳುವಂತೆ ಡಿಸಿ ಸೂಚಿಸಿದರು. ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಪಂ ಉಪ ಕಾರ್ಯದರ್ಶಿ ಸರಸ್ವತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಗೀತಾಲಕ್ಷ್ಮಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಸುಧಾ, ತಹಸೀಲ್ದಾರರು, ತಾಪಂ ಇಓಗಳು, ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು, ಮುಖ್ಯಾಧಿಕಾರಿಗಳು, ಕಂದಾಯ ಇಲಾಖೆ ಅಧಿಕಾರಿಗಳು ಇತರರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಯಳಂದೂರು, ಜು.15– ಯಳಂದೂರು, ಕುಂತೂರು ಹಾಗೂ ಮಾಂಬಳ್ಳಿ ವಿವಿ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ಜು.16ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಯಳಂದೂರು ಟೌನ್, ಯರಿಯೂರು, ಮದ್ದೂರು, ಆಲ್ಕೆರೆ ಅಗ್ರಹಾರ, ಬೂದಿತಿಟ್ಟು, ಎ.ದೇವರಹಳ್ಳಿ, ಟಿ.ಹೊಸೂರು, ಶಿವಕಹಳ್ಳಿ, ಅಗರ, ಮಾಂಬಳ್ಳಿ, ಬನ್ನಿ ಸಾರಿಗೆ, ಕಿನಕಹಳ್ಳಿ, ಕೆಸ್ತೂರು, ಮಲ್ಲಿಗಹಳ್ಳಿ, ಕೆ.ಹೊಸೂರು, ವೈ.ಕೆ.ಮೋಳೆ, ಹೆಗ್ಗಡಿಹುಂಡಿ, ಗುಂಬಳ್ಳಿ, ಯರಗಂಬಳ್ಳಿ, ಬಿಳಿಗಿರಿರಂಗನಬೆಟ್ಟ ಗೌಡಹಳ್ಳಿ, ಗಣಿಗನೂರು, ವಡಗೆರೆ, ಕೊಮಾರನಪುರ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪತ್ರಕರ್ತರಿಗೆ ಕಾನೂನು ಅರಿವು ಅಗತ್ಯ

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್.ಭಾರತಿ

ಚಾಮರಾಜನಗರ, ಜು.15– ಪತ್ರಕರ್ತರಿಗೆ ಕಾನೂನು ಅರಿವು ಅಗತ್ಯ ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್.ಭಾರತಿ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ನ್ಯಾಯಾಲಯದ ಆವರಣದ ವ್ಯಾಜ್ಯ ಪೂರ್ವ ಪರಿಹಾರ ಕೇಂದ್ರದಲ್ಲಿ ಶನಿವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘದ ಸಹಯೋಗದಲ್ಲಿ ಪತ್ರಕರ್ತರಿಗೆ ಹಮ್ಮಿಕೊಳ್ಳಲಾಗಿದ್ದ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಪತ್ರಕರ್ತರಿಗೆ ಕಾನೂನಿನ ಬಗ್ಗೆ ತಿಳಿದಿರುತ್ತದೆ. ಕಾನೂನಿನ ಬಗ್ಗೆ ಎಷ್ಟೇ ತಿಳುವಳಿಕೆ ಇದ್ದರೂ ಹೊಸ ಕಾನೂನುಗಳು ಬರುತ್ತವೆ. ಅವುಗಳ ಬಗ್ಗೆ ಅರಿವಿದ್ದರೆ ಸುದ್ದಿಗಳನ್ನು ಮಾಡುವಾಗ ಎಚ್ಚರಿಕೆಯಿಂದ ನಿರ್ವಹಿಸಲು ಸಾಧ್ಯವಾಗುತ್ತದೆ. ಪತ್ರಕರ್ತರು ಇಂತಹ ಕಾರ್ಯಾಗಾರಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಮಕ್ಕಳ ಸ್ನೇಹಿ ನ್ಯಾಯಾಲಯದ ನ್ಯಾಯಾಧೀಶರಾದ ನಿಶಾರಾಣಿ ಮಾತನಾಡಿ, ಪೋಕ್ಸೋ ಕಾಯ್ದೆ ಸಂಬಂಧ ಪ್ರಕರಣದಲ್ಲಿ ಶಿಕ್ಷೆ ಘೋಷಣೆಯಾದಾಗ ಸಂತ್ರಸ್ತರ ಹೆಸರನ್ನು ಬಹಿರಂಗಪಡಿಸಬಾರದು. ಶಿಕ್ಷೆ ಪ್ರಮಾಣ ಬರೆದರೆ ಅನುಕೂಲ. ಶಿಕ್ಷೆ ಸಂಬಂಧ ಜನರಿಗೆ ಅರಿವು ಮೂಡಿಸುವ ವಿಚಾರ ಬರೆದರೆ ಉತ್ತಮ. ಬಾಲ್ಯ ವಿವಾಹ ನಿಷೇಧ ಕಾಯ್ದೆ ಸಂಬಂಧ ಸುದ್ದಿ ಹೆಚ್ಚು ಬಂದಲ್ಲಿ ಜನರಲ್ಲಿ ಜಾಗೃತಿ ಉಂಟಾಗಲು ಸಹಾಯಕವಾಗಲಿದೆ ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶ ಎಂ. ಶ್ರೀಧರ ಮಾತನಾಡಿ, ಪ್ರಜಾಪ್ರಭುತ್ವದ 4ನೇ ಅಂಗ ಎನಿಸಿಕೊಂಡಿರುವ ಪತ್ರಿಕಾರಂಗ ಸಮಾಜದ ಧ್ವನಿಯಾಗಿದೆ. ವಾಕ್, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅವಕಾಶವಿದೆ. ಆದರೆ ಮತ್ತೊಬ್ಬರ ಸ್ವಾತಂತ್ರ್ಯ ಹರಣವಾಗದಂತೆ ಎಚ್ಚರಿಕೆ ವಹಿಸಬೇಕಿದೆ. ಈ ನಿಟ್ಟಿನಲ್ಲಿ ಕಾಯ್ದೆಗಳ ಬಗ್ಗೆ ಹೆಚ್ಚು ಅರಿವು ಹೊಂದಬೇಕಿದೆ ಎಂದರು.

ಪ್ರಜಾವಾಣಿ ಪತ್ರಿಕೆ ಮೈಸೂರು ಬ್ಯೂರೋ ಮುಖ್ಯಸ್ಥ ಕೆ.ನರಸಿಂಹ ಮೂರ್ತಿ ಮಾತನಾಡಿ, ಪತ್ರಕರ್ತರು ನೈತಿಕ ಜವಾಬ್ದಾರಿ ಅರಿತು ಕೆಲಸ ಮಾಡಬೇಕು. ಸುದ್ದಿ ಆಯಸ್ಸು ಕಡಿಮೆ. ಸರಿಯಾದ ಹಾಗೂ ನೈಜ ಸುದ್ದಿ ಕೊಡುವುದು ಪತ್ರಕರ್ತರ ಮಹತ್ತರ ಜವಾಬ್ದಾರಿ. ಪತ್ರಕರ್ತರಿಗೆ ಬರವಣಿಗೆ, ವಿಷಯ ಜ್ಞಾನ ಇರಬೇಕು. ತಾವು ಮಾಡುವ ವರದಿಗೆ ಉತ್ತರದಾಯಿತ್ವ, ಜವಾಬ್ದಾರಿಯಾಗಿರ ಬೇಕು ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಮಾತನಾಡಿದರು. ಹಿರಿಯ ವಕೀಲರಾದ ರವಿ ಪತ್ರಿಕಾ ಸಂಬಂಧ ಕಾಯ್ದೆಗಳ ಕುರಿತು ಉಪನ್ಯಾಸ ನೀಡಿದರು. ವಾರ್ತಾಧಿಕಾರಿ ಎ.ರಮೇಶ್, ಜಿಲ್ಲಾ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷಸ್ವಾಮಿ ಇತರರಿದ್ದರು.

ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

ಚಾಮರಾಜನಗರ, ಜು.15– ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2023–24ನೇ ಸಾಲಿನಲ್ಲಿ ಕೊಳ್ಳೇಗಾಲ ಮತ್ತು ಹನೂರು ತಾಲೂಕು ವ್ಯಾಪ್ತಿಯಲ್ಲಿ ವ್ಯಾಸಂಗ ಮಾಡುತ್ತಿರುವ ದ್ವಿತೀಯ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಪ್ರೋತ್ಸಾಹ ಧನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.


ಅರ್ಜಿಯನ್ನು ಸಮಾಜ ಕಲ್ಯಾಣ ಇಲಾಖೆ ವೆಬ್‌ಸೈಟ್ https:sw.kar.nic.in ನಲ್ಲಿ ಪೂರಕ ದಾಖಲಾತಿಗಳಾದ ಜಾತಿ, ಆದಾಯ ದೃಢೀಕರಣ ಪತ್ರ ಹಾಗೂ ಅಂಕಪಟ್ಟಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಪುಸ್ತಕ ಜೆರಾಕ್ಸ್ ಪ್ರತಿಗಳೊಂದಿಗೆ ಆಗಸ್ಟ್ 31ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ಕೊಳ್ಳೇಗಾಲ ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಗನವಾಡಿಗಳಿಗೆ ಪೌಷ್ಟಿಕ ಆಹಾರ ವಿತರಣೆ

ಚಾಮರಾಜನಗರ, ಜು.15– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಚಾಮರಾಜನಗರ ತಾಲೂಕು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಬರುವ 281 ಅಂಗನವಾಡಿ ಕೇಂದ್ರಗಳಿಗೆ ಮೇ 2023ರ ಮಾಹೆಯ ಪೂರಕ ಪೌಷ್ಟಿಕ ಆಹಾರ ಪದಾರ್ಥಗಳನ್ನು ಅಂಗನವಾಡಿ ಕೇಂದ್ರಗಳಿಗೆ ವಿತರಿಸಲಾಗುತ್ತದೆ.

ಜು.17 ರಾಮಸಮುದ್ರದ, 18 ಹರವೆ, 19 ಅರಳೀಕಟ್ಟೆ, ಉಡಿಗಾಲ, 20 ಬಿಸಲವಾಡಿ, ಅಮಚವಾಡಿ, 21 ಕೊತ್ತಲವಾಡಿ, 22 ಬೀಡಿ ಕಾಲೋನಿ, 24 ಬಂಡಿಗೆರೆ, 25 ರಂದು ರೈಲ್ವೆ ಬಡಾವಣೆ ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಟಿಕ ಆಹಾರ ಪದಾರ್ಥಗಳನ್ನು ವಿತರಿಸಲಾಗುತ್ತದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುರುಶಾಂತಮ್ಮ ನಿಧನ



ಚಾಮರಾಜನಗರ, ಜು.15– ನಗರದ ರಾಮಸಮುದ್ರ ಬಡಾವಣೆ ಹಳ್ಳದ ಬೀದಿ ನಿವಾಸಿ ಗುರುಶಾಂತಮ್ಮ (75) ಶನಿವಾರ ಬೆಳಗ್ಗೆ ನಿಧನರಾದರು.

ಮೃತರು ಪತಿ ಎಲ್.ಮಹದೇವಪ್ಪ, ಪುತ್ರರಾದ ಲೆಕ್ಕ ಪರಿಶೋಧನಾ ಅಧಿಕಾರಿ ಶಿವಕುಮಾರಸ್ವಾಮಿ, ಆರ್.ಎಂ.ಬಸವರಾಜು, ಪುತ್ರಿ ನಿರ್ಮಲಾ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ರಾಮಸಮುದ್ರ ಬಡಾವಣೆಯ ರುದ್ರಭೂಮಿಯಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಭಾನುವಾರ 16 ಜುಲೈ 2023

ಪ್ಲಾಸ್ಟಿಕ್ ಮಾರಾಟಗಾರರಿಗೆ ಎಚ್ಚರಿಕೆ ನೀಡಿದ ನ್ಯಾ.ಸುಭಾಷ್ ಬಿ.ಆಡಿ

●ಮನ್ನಾರ್ ಮಾರುಕಟ್ಟೆ, ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಪ್ಲಾಸ್ಟಿಕ್ ಮಾರುತ್ತಿದ್ದ ಮಳಿಗೆಗಳಿಗೆ ದಂಡ ●ಮಾರಾಟ ಮುಂದುವರೆಸಿದರೆ ಟ್ರೇಡ್ ಲೈಸೆನ್ಸ್ ರದ್ದು ಮಾಡಲು ಸೂಚನೆ ●ಪಾಲಿಕೆ ಸಿಬ್ಬಂದಿಗಳೊಂದಿಗೆ ವಿವಿಧೆಡೆ ಪರಿಶೀಲನೆ





ಮೈಸೂರು,ಜು.15(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರನ್ನು ಪ್ಲಾಸ್ಟಿಕ್ ಮುಕ್ತ ನಗರವಾಗಿಸುವ ನಿಟ್ಟಿನಲ್ಲಿ ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ಮಾರಾಟಕ್ಕೆ ಕಡಿವಾಣ ಹಾಕುವಂತೆ ಸೂಚನೆ ನೀಡಿದ್ದ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಮುಖ್ಯಸ್ಥರಾದ ನ್ಯಾ.ಸುಭಾಷ್ ಬಿ.ಆಡಿ ಶನಿವಾರ ಮೈಸೂರಿನ ವಿವಿಧೆಡೆ ಪರಿಶೀಲನೆ ನಡೆಸಿ, ನಿಷೇಧಿತ ಪ್ಲಾಸ್ಟಿಕ್ ವ್ಯಾಪಾರ ಮಾಡುತ್ತಿದ್ದವರಿಗೆ ಬಿಸಿ ಮುಟ್ಟಿಸಿದರು.

ಮೈಸೂರಿನ ಜಿ.ಪಂ. ಸಭಾಂಗಣದಲ್ಲಿ ಶುಕ್ರವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮೈಸೂರಿನ ಪ್ರವಾಸಿ ತಾಣಗಳಲ್ಲಿ ಪ್ಲಾಸ್ಟಿಕ್ ಬಳಕೆ ಹಾಗೂ ಮಾರಾಟ ನಿಷೇಧಿಸುವಂತೆ ಸೂಚನೆ ನೀಡಿದ್ದರು. ನ್ಯಾ.ಸುಭಾಷ್ ಬಿ.ಆಡಿ ಶನಿವಾರ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ವಿವಿಧೆಡೆ ಅನಿರೀಕ್ಷಿತ ಭೇಟಿ ನೀಡಿ, ಪರಿಶೀಲಿಸಿದರು.

ಕೋಟೆ ಆಂಜನೇಯಸ್ವಾಮಿ ದೇವಾಲಯ: ಮೈಸೂರಲ್ಲೇ ವಾಸ್ತವ್ಯ ಹೂಡಿದ್ದ ನ್ಯಾ.ಸುಭಾಷ್ ಬಿ.ಆಡಿ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿದರು. ಅದಕ್ಕೂ ಮುನ್ನ ದೇವಾಲಯದ ಮುಂಭಾಗ ಮಹಿಳೆಯರು ಬಿದಿರಿನ ತಟ್ಟೆಯಲ್ಲಿ ಪೂಜಾ ಸಾಮಗ್ರಿ ನೀಡಿದ್ದಕ್ಕೆ ಪ್ರಶಂಸೆ ವ್ಯಕ್ತಪಡಿಸಿದರು. ಕಳೆದ ಬಾರಿ ದೇವಾಲಯಕ್ಕೆ ಬಂದಿದ್ದಾಗ ಪ್ಲಾಸ್ಟಿಕ್ ಕವರ್‌ನಲ್ಲಿ ಪೂಜಾ ಸಾಮಗ್ರಿ ನೀಡಿದ್ದರು. ಇಂದು ಪರಿಸ್ಥಿತಿ ಬದಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮಾಂತರ ಬಸ್ ನಿಲ್ದಾಣ: ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಪಾಲಿಕೆ ಅಧಿಕಾರಿಗಳೊಂದಿಗೆ ಗ್ರಾಮಾಂತರ ಬಸ್‌ನಿಲ್ದಾಣಕ್ಕೆ ಆಗಮಿಸಿದ ನ್ಯಾಯಮೂರ್ತಿಗಳು ತಪಾಸಣೆ ನಡೆಸಿದರು. ಈ ವೇಳೆ ಎರಡು ಮಳಿಗೆಗಳಲ್ಲಿ ನಿಷೇಧಿತ ಪ್ಲಾಸ್ಟಿಕ್ ಮಾರಾಟ ಮಾಡುತ್ತಿರುವುದು ಕಂಡು ಬಂದಿತು. ಕೂಡಲೇ ಎರಡೂ ಅಂಗಡಿಗಳಿಗೂ ತಲಾ 5 ಸಾವಿರ ರೂ. ದಂಡ ವಿಧಿಸಲು ಅಧಿಕಾರಿಗಳಿಗೆ ಸೂಚಿಸಿದರು.

ರೈಲ್ವೆ ನಿಲ್ದಾಣಕ್ಕೆ ಭೇಟಿ: ನಂತರ ರೈಲ್ವೆ ನಿಲ್ದಾಣಕ್ಕೆ ಆಗಮಿಸಿದ ನ್ಯಾ.ಸುಭಾಷ್ ಬಿ.ಆಡಿ, ಪ್ಲಾಟ್ ಫಾರಂ, ರೈಲ್ವೆ ಬೋಗಿ, ವಿಶ್ರಾಂತಿ ಕೊಠಡಿ, ಮಳಿಗೆಗಳನ್ನು ಪರಿಶೀಲಿಸಿದರು. ಪ್ಲಾಸ್ಟಿಕ್ ಮುಕ್ತವಾಗಿರುವ ಹಾಗೂ ಸ್ವಚ್ಛತೆ ಕಾಪಾಡಿಕೊಂಡಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮನ್ನಾರ್ಸ್ ಮಾರುಕಟ್ಟೆಯಲ್ಲಿ ಪರಿಶೀಲನೆ: ತಳ್ಳುವ ಗಾಡಿಗಳಲ್ಲಿ ವ್ಯಾಪಾರ ಮಾಡುವವರ ಬಳಿ ಸಿಗುವ ಪ್ಲಾಸ್ಟಿಕ್ ಕವರ್‌ನ ಮೂಲದ ಬಗ್ಗೆ ಮಾಹಿತಿ ಪಡೆದು ಮನ್ನಾರ್ಸ್ ಮಾರುಕಟ್ಟೆಗೆ ಆಗಮಿಸಿದ ನ್ಯಾಯಮೂರ್ತಿಗಳು, ಅಂಗಡಿಗಳನ್ನು ಪರಿಶೀಲಿಸಿದರು. ಈ ವೇಳೆ ಎರಡು ಅಂಗಡಿಗಳಲ್ಲಿ ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ಕವರ್, ಪೇಪರ್ ಮಾರಾಟ ಮಾಡುತ್ತಿರುವುದು ಕಂಡು ಬಂದಿತು. ಆ ಎರಡು ಅಂಗಡಿಗಳಿಗೂ ತಲಾ 5 ಸಾವಿರ ದಂಡ ವಿಧಿಸಲಾಯಿತು.

ವ್ಯಾಪಾರಿಗಳಿಂದ ಆಕ್ಷೇಪ: ಪರಿಶೀಲನೆಗೆ ಬಂದ ನ್ಯಾಯಮೂರ್ತಿಗಳ ಮುಂದೆಯೇ ಮನ್ನಾರ್ಸ್ ಮಾರುಕಟ್ಟೆಯ ಕೆಲವು ವ್ಯಾಪಾರಿಗಳು ಆಕ್ಷೇಪ ವ್ಯಕ್ತಪಡಿಸಿದರು. ಮಾರಾಟ ಮಳಿಗೆಗಳ ಮೇಲೆ ದಾಳಿ ಮಾಡುವುದಕ್ಕೂ ಮೊದಲು ಪ್ಲಾಸ್ಟಿಕ್ ತಯಾರಿಸುವ ಕಾರ್ಖಾನೆಗಳ ಮೇಲೆ ದಾಳಿ ಮಾಡಿ. ಉತ್ಪಾದನೆಯನ್ನೇ ಸ್ಥಗಿತಗೊಳಿಸಲು ಕ್ರಮ ಕೈಗೊಳ್ಳಿ ಎಂದು ಆಕ್ಷೇಪಿಸುತ್ತಿದ್ದರು. ಇದನ್ನು ಗಮನಿಸಿದ ನ್ಯಾ.ಸುಭಾಷ್ ಬಿ.ಆಡಿ, ಮುಂದಿನ ದಿನಗಳಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಪ್ಲಾಸ್ಟಿಕ್ ಮಾರಾಟ ಮನರಾವರ್ತನೆಯಾದರೆ ಟ್ರೇಡ್ ಲೈಸೆನ್ಸ್ ರದ್ದು ಮಾಡುವಂತೆ ಸೂಚನೆ ನೀಡಿದರು.

ಪ್ಲಾಸ್ಟಿಕ್‌ನಿಂದ ಟೈಲ್ಸ್ ತಯಾರಿಕೆ: ಮೈಸೂರು ಮಹಾನಗರ ಪಾಲಿಕೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ವಿದ್ಯಾರಣ್ಯಪುರಂನಲ್ಲಿನ ಸೀವೆಜ್ ಫಾರಂ ಆವರಣದಲ್ಲಿ ಪ್ಲಾಸ್ಟಿಕ್‌ನಿಂದ ಟೈಲ್ಸ್, ಇಂಟರ್‌ಲಾಕ್ ತಯಾರಿಸುವ ಜಾಗೃತ್ ಟೆಕ್ ಘಟಕಕ್ಕೆ ಭೇಟಿ ನೀಡಿದರು. ಈ ವೇಳೆ ಪ್ಲಾಸ್ಟಿಕ್‌ನಿಂದ ತಯಾರಿಸಲಾಗುತ್ತಿರುವ ಇಂಟರ್‌ಲಾಕ್ ಹಾಗೂ ಇನ್ನಿತರ ಪರಿಕರವನ್ನು ಪರಿಶೀಲಿಸಿದರು. ಪ್ರತಿದಿನ 2 ಟನ್ ಪ್ಲಾಸ್ಟಿಕ್ ತ್ಯಾಜ್ಯ ಪಡೆದು ಕೆಲ ಇಂಟರ್‌ಲಾಕ್ ಹಾಗೂ ಇನ್ನಿತರ ವಸ್ತುಗಳನ್ನು ತಯಾರಿಸುತ್ತಿರುವ ಮಾಹಿತಿ ಪಡೆದರು.

ದಳವಾಯಿ ಕೆರೆ ಪರಿಶೀಲನೆ: ದಳವಾಯಿ ಕೆರೆಗೆ ಒಳಚರಂಡಿ ನೀರು ಸೇರುತ್ತಿರುವುದಾಗಿ ಸಾರ್ವಜನಿಕರೊಬ್ಬರು ನೀಡಿದ ದೂರಿನ ಮೇರೆಗೆ ನ್ಯಾಯಮೂರ್ತಿಗಳು ಅಲ್ಲಿಗೆ ಭೇಟಿ ನೀಡಿ, ಪರಿಶೀಲಿಸಿದರು..

ಕೆಸರೆ ತ್ಯಾಜ್ಯ ಘಟಕಕ್ಕೆ ಭೇಟಿ: ಕೆಸರೆಯಲ್ಲಿ ನೂತನವಾಗಿ ನಿರ್ಮಿಸುತ್ತಿರುವ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಹೊಸ ಘಟಕದ ಕಾರ್ಯವೈಖರಿ ಬಗ್ಗೆ ಮಾಹಿತಿ ನೀಡಿದರು. ಈ ವೇಳೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿಗಳು, ಕಸ ಸಂಗ್ರಹ ಹಾಗೂ ವಿಲೇವಾರಿಯ ಕಾರ್ಯವನ್ನು ಸಾಧ್ಯವಾದಷ್ಟು ಬೇಗ ಆರಂಭಿಸಬೇಕು. ವಿದ್ಯುತ್ ಸಂಪರ್ಕದ ಕೆಲಸ ಪೂರ್ಣಗೊಳಿಸಿ, ಸಿಬ್ಬಂದಿಗಳನ್ನು ನಿಯೋಜಿಸಿ, ಪ್ರಾಯೋಗಿಕವಾಗಿ (ಟ್ರಯಲ್ ರನ್) ಕೆಲಸ ಆರಂಭಿಸಬೇಕು. ಯಾವುದೇ ಸಮಸ್ಯೆ ಕಂಡು ಬರದಿದ್ದರೆ ಪೂರ್ಣ ಪ್ರಮಾಣದ ಕಾರ್ಯ ಆರಂಭಿಸಬೇಕು. ಸಿಬ್ಬಂದಿಗಳಿಗೆ ಯಂತ್ರದ ಚಾಲನೆ ಮಾಡುವುದಕ್ಕೆ ಅಗತ್ಯ ತರಬೇತಿ ನೀಡಬೇಕು.

ಈ ಸಂದರ್ಭದಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಪರಿಸರ ಅಧಿಕಾರಿ ಬಿ.ಎಂ.ಪ್ರಕಾಶ್, ಪಾಲಿಕೆಯ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜ್, ಪರಿಸರ ಅಭಿಯಂತರರಾದ ಮೈತ್ರಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ತಂಡ ರಚನೆ ಮಾಡಿ ಕಾರ್ಯಾಚರಣೆ ಮುಂದುವರೆಸಿ

ಮನ್ನಾರ್ಸ್ ಮಾರುಕಟ್ಟೆಯಲ್ಲಿ ವ್ಯಾಪಾರಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಒಬ್ಬೊಬ್ಬರೇ ಪರಿಶೀಲನೆಗೆಂದು ಹೋದರೆ ಸಮಸ್ಯೆಯಾಗಬಹುದು. ಈ ಹಿನ್ನೆಲೆಯಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಮಹಾನಗರ ಪಾಲಿಕೆ, ಪೊಲೀಸ್ ಸಿಬ್ಬಂದಿ ಇರುವ ತಂಡ ರಚಿಸಿಕೊಂಡು ಕಾರ್ಯಾಚರಣೆ ಮುಂದುವರೆಸಬೇಕು. ಎಲ್ಲಾ ಅಂಗಡಿಗಳನ್ನು ಪರಿಶೀಲಿಸಬೇಕು. ಪ್ಲಾಸ್ಟಿಕ್ ಮಾರಾಟ ಕಂಡು ಬಂದರೆ ನಿರ್ದಾಕ್ಷಿಣ್ಯವಾಗಿ ಟ್ರೇಡ್ ಲೈಸೆನ್ಸ್ ರದ್ದು ಮಾಡಬೇಕು.

- ನ್ಯಾಯಮೂರ್ತಿ ಸುಭಾಷ್ ಬಿ.ಆಡಿ,
ಮುಖ್ಯಸ್ಥರು, ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ

ಮೈಸೂರಲ್ಲಿ ಎರಡು ಸ್ಥಳದಲ್ಲಿ ದಾಳಿ: 1920 ಕೆಜಿ ಪ್ಲಾಸ್ಟಿಕ್ ವಶ

ಮೈಸೂರು,ಜು.15(ಎಂಟಿವೈ)– ಪ್ಲಾಸ್ಟಿಕ್ ಮುಕ್ತ ಮೈಸೂರು ಮಾಡುವ ನಿಟ್ಟಿನಲ್ಲಿ ಮೈಸೂರು ಮಹಾನಗರ ಪಾಲಿಕೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಮುಖ್ಯಸ್ಥರಾದ ನ್ಯಾ.ಸುಭಾಷ್ ಬಿ.ಆಡಿ ನೀಡಿದ ಸೂಚನೆ ಮೇರೆಗೆ ಪ್ರತ್ಯೇಕ ಸ್ಥಳದಲ್ಲಿ ದಾಳಿ ನಡೆಸಿ 1920 ಕೆಜಿ ಪ್ಲಾಸ್ಟಿಕ್ ವಶಪಡಿಸಿಕೊಳ್ಳಲಾಗಿದೆ.



ಮೈಸೂರು ಮಹಾನಗರ ಪಾಲಿಕೆ ವಾರ್ಡ್ ನಂ.22ರ ವ್ಯಾಪ್ತಿಯ ಸಂತೇಪೇಟೆ ಬಿ.ಕೆ.ಸ್ಟ್ರೀಟ್‌ನಲ್ಲಿರುವ ಮಹೇಶ್ ಪಾಲಿಮರ್ಸ್ ಮಳಿಗೆ ಹಾಗೂ ಗೋದಾಮಿನ ಮೇಲೆ ದಾಳಿ ನಡೆಸಿದ ಪಾಲಿಕೆಯ ಆರೋಗ್ಯ ಹಾಗೂ ಪರಿಸರ ವಿಭಾಗದ ಅಧಿಕಾರಿಗಳು ಪರಿಸರಕ್ಕೆ ಮಾರಕವಾದ ನಿಷೇಧಿತ ಪ್ಲಾಸ್ಟಿಕ್ ಮಾರಾಟ ಹಾಗೂ ಅಕ್ರಮವಾಗಿ ದಾಸ್ತಾನು ಮಾಡಿದ್ದು ಗೋಚರಿಸಿತು. ಗೋದಾಮಿನಲ್ಲಿ ಸಂಗ್ರಹಿಸಿಡಲಾಗಿದ್ದ 1140 ಕೆಜಿ ಪ್ಲಾಸ್ಟಿಕ್ ಮಿಶ್ರಿತ ಕ್ಯಾರಿ ಬ್ಯಾಗ್ ವಶಪಡಿಸಿಕೊಂಡರು. ಪಾಲಿಕೆಯ ಹೆಲ್ತ್ ಇನ್ಸ್‌ಪೆಕ್ಟರ್‌ಗಳಾದ ಬಸವರಾಜು, ಮಂಜುಕುಮಾರ್, ಪರಿಸರ ಅಭಿಯಂತರರಾದ ಮೈತ್ರಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಪ್ಲಾಸ್ಟಿಕ್ ಕಾರ್ಖಾನೆಯಲ್ಲಿ 780 ಕೆಜಿ ಪ್ಲಾಸ್ಟಿಕ್ ವಶ: ಮೈಸೂರಿನ ಬನ್ನಿಮಂಟಪ ಸಿ.ವಿ.ರಸ್ತೆಯಲ್ಲಿರುವ ಎಸ್.ಎಲ್.ವಿ ಇಂಡಸ್ಟ್ರೀಸ್ ಮೇಲೆ ಪಾಲಿಕೆಯ ಅಧಿಕಾರಿಗಳ ತಂಡ ದಾಳಿ ಮಾಡಿ 780 ಕೆಜಿ ಪ್ಲಾಸ್ಟಿಕ್ ವಶಪಡಿಸಿಕೊಂಡಿತು. ಈ ವೇಳೆ ಪಾಲಿಕೆ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜು, ಪರಿಸರ ಅಭಿಯಂತರಾದ ಮೈತ್ರಿ, ವಲಯ 6, 7 ಆರೋಗ್ಯ ನಿರೀಕ್ಷಕರು, ಅಭಯ ತಂಡದ ಸದಸ್ಯರು ಪಾಲ್ಗೊಂಡಿದ್ದರು.

ಮೈಸೂರು ಸಂಸ್ಥಾನಕ್ಕೆ ಹೆಸರು ತಂದವರು ಮುಮ್ಮಡಿ ಕೃಷ್ಣರಾಜ ಒಡೆಯರು

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸ್ಮರಣೆ



ಮೈಸೂರು, ಜು.15(ಎಂಟಿವೈ)– ಮೈಸೂರು ಸಂಸ್ಥಾನ ವಿಶ್ವದಲ್ಲಿಯೇ ಪ್ರಸಿದ್ಧಿಯಾಗಲು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಅಪಾರವಾಗಿದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ತಿಳಿಸಿದರು.

ನಗರದ ಜೂನಿಯರ್ ಮಹಾರಾಜ ಕಾಲೇಜು ಆವರಣದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ 224ನೇ ಜಯಂತಿ ಅಂಗವಾಗಿ ಅವರ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಅವರು, ಮುಮ್ಮಡಿ ಕೃಷ್ಣರಾಜ ಒಡೆಯರ್ ಸ್ವತಃ ಕವಿಗಳಾಗಿದ್ದು, ಕಲೆಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಮುಖಾಂತರ ಮುಂದಿನ ಪೀಳಿಗೆಗೆ ಆದರ್ಶಪ್ರಾಯರಾಗಿದ್ದರು. ಅವರ ತತ್ವ ಆದರ್ಶಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.


ಮೈಸೂರನ್ನು ಆಳಿದ ರಾಜರುಗಳು ದೂರದೃಷ್ಟಿ ಉಳ್ಳಂತವರಾಗಿದ್ದರು. ಮೈಸೂರನ್ನು ಸುಂದರ ನಗರವನ್ನಾಗಿ ಕಟ್ಟಿದ್ದಾರೆ. ಅಗಲವಾದ ರಸ್ತೆಗಳು, ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯ, ನೀರಾವರಿ ಯೋಜನೆಗಳು, ಆಸ್ಪತ್ರೆಗಳನ್ನು ನಿರ್ಮಿಸಿ ಜನರ ಕಲ್ಯಾಣಕ್ಕಾಗಿ ಶ್ರಮಿಸಿದ್ದಾರೆ. ಮೈಸೂರು ದಸರಾ ಜಗತ್ತಿಗೆ ಪ್ರಸಿದ್ಧವಾಗಿದೆ. ಮೈಸೂರು ಪ್ರವಾಸಿ ತಾಣ ವಾಗಿದ್ದು, ಅರಮನೆ, ಚಾಮುಂಡಿಬೆಟ್ಟ, ಮೃಗಾಲಯ ಜನರನ್ನು ಆಕರ್ಷಿಸುತ್ತಿವೆ. ಆದ್ದರಿಂದ ಇಂತಹ ಮಹನೀಯರನ್ನು ನಿತ್ಯ ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಜೆಡಿಎಸ್ ಮುಖಂಡ ಹೆಚ್.ಕೆ.ರಾಮು, ಸಮಾಜ ಸೇವಕ ರಘುರಾಂ ವಾಜಪೇಯಿ, ದಿನೇಶ್‌ಗೌಡ, ಕನ್ನಡಪರ ಸಂಘಟನೆಯ ಮುಖಂಡರು ಉಪಸ್ಥಿತರಿದ್ದರು.

ಹಾಸನದಲ್ಲಿ ಯುವಕರಿಬ್ಬರ ನಿಗೂಢ ಸಾವು

ಹಾಸನ: ಹಾಸನದ ಹನುಮಂತಪುರ ಗ್ರಾಮದಲ್ಲಿ ರಾತ್ರಿ ಊಟ ಮಾಡಿ ಮಲಗಿದ್ದ ಇಬ್ಬರು ಯುವಕರು ನಿಗೂಢವಾಗಿ ಮೃತಪಟ್ಟಿರುವ ಘಟನೆ ವರದಿಯಾಗಿದೆ.

ಮೃತರನ್ನು 24 ವರ್ಷದ ನವಾಬ್ ಮತ್ತು 30 ವರ್ಷದ ರಾಮ ಸಂಜೀವನ್ ಎಂದು ಗುರುತಿಸಲಾಗಿದ್ದು ಇಬ್ಬರ ಮೃತದೇಹ ಕೊಠಡಿಯಲ್ಲಿ ಪತ್ತೆಯಾಗಿವೆ.

ಉತ್ತರಪ್ರದೇಶದ ನಯನ್‌ಪುರ ಗ್ರಾಮದವರಾದ ಯುವಕರು ಉದ್ಯೋಗ ಅರಸಿ ಹಾಸನ ತಾಲೂಕಿನ ಹನುಮಂತಪುರ ಗ್ರಾಮಕ್ಕೆ ಬಂದಿದ್ದು ಹನುಮಂತಪುರ ಗ್ರಾಮದ ಮಹೇಶ್ ಎಂಬುವರ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಜ್ವರ ಬಂದಿದ್ದರಿಂದ ಔಷಧಿ ಸೇವಿಸಿ ಮಲಗಿದ್ದ ಅವರು ಮತ್ತೆ ಎದ್ದೇಳಲಿಲ್ಲ. ಒಂದು ದಿನ ಕಳೆದರು ಮನೆಯ ಬಾಗಿಲು ತೆರೆಯದಿದ್ದರಿಂದ ಮನೆಯ ಮಾಲೀಕ ಮಹೇಶ್ ಅನುಮಾನಗೊಂಡು ಬಾಗಿಲು ಒಡೆದು ನೋಡಿದಾಗ ಯುವಕರು ಮಲಗಿದ್ದ ಜಾಗದಲ್ಲಿಯೇ ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ. ಪ್ರಕರಣ ದಾಖಲಿಸಿಕೊಂಡಿರುವ ಹಾಸನ ಗ್ರಾಮಾಂತರ ಠಾಣೆಯ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ತನಿಖೆ ಕೈಗೊಂಡಿದ್ದಾರೆ.



ಮೈಸೂರಿನ ದೇವರಾಜ ಮಾರ್ಕೆಟ್ ಯುವ ಬ್ರಿಗೇಡ್ ವತಿಯಿಂದ 15ನೇ ವರ್ಷದ ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವ ಆಚರಿಸಲಾಯಿತು. ಮುಖಂಡರಾದ ಕೆ.ಗಿರೀಶ್, ಎಲ್.ಸುಜಿತ್ ಕುಮಾರ್, ಅಧ್ಯಕ್ಷ ಬಿ.ಸಂದೀಪ್, ರವಿಕುಮಾರ್, ಅಭಿಲಾಶ್, ಸಂಜಯ್, ರವಿಚಂದ್ರ ಮತ್ತಿತರರು ಭಾಗವಹಿಸಿದ್ದರು.

ಮೂರನೇ ಪುಟದಿಂದ

'ಗೃಹಲಕ್ಷ್ಮಿ' ನೋಂದಣಿ

ಸಮಯ ಮತ್ತು ಸ್ಥಳದ ವಿವರ ತಿಳಿಸಲಾಗುವುದು. ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಒನ್ ಕೇಂದ್ರ ಅಥವಾ ಬಾಬುಜಿ ಸೇವಾ ಕೇಂದ್ರದಲ್ಲಿ ನೋಂದಣಿಗೆ ಅವಕಾಶ ಮಾಡಲಾಗುವುದು. ಅಲ್ಲದೆ ಸರ್ಕಾರದಿಂದ ನೇಮಕಗೊಳ್ಳುವ ಪ್ರಜಾಪ್ರತಿನಿಧಿ ಮೂಲಕವೂ ನೋಂದಾಯಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗುವುದು.

ಪ್ರತಿ ಫಲಾನುಭವಿಯು ನೋಂದಣಿಗೆ ನಿಗದಿ ಮಾಡಿರುವ ದಿನ, ಸಮಯ ಮತ್ತು ಸ್ಥಳವನ್ನು 1902ಕ್ಕೆ ಕರೆ ಮಾಡಿ ಇಲ್ಲವೇ 8147500500 ನಂಬರ್‌ಗೆ ಎಸ್‌ಎಂಎಸ್ ಇಲ್ಲವೇ ವಾಟ್ಸಪ್ ಮೂಲಕ ಸಂದೇಶ ಕಳುಹಿಸಿ, ಮಾಹಿತಿ ಪಡೆಯಬಹುದು ಎಂದು ತಿಳಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ವಹಿಸಿಕೊಂಡ ತಕ್ಷಣವೇ ಪಕ್ಷ ಜನತೆಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವ ನಿರ್ಧಾರ ಕೈಗೊಂಡಿತು. ತದನಂತರ ಆದೇಶವೂ ಹೊರಬಿದ್ದಿತು.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ವಿದ್ಯಾರ್ಥಿನಿಯರು ಮತ್ತು ಮಹಿಳೆಯರು ಉಚಿತವಾಗಿ ಪ್ರಯಾಣಿಸುವ ಶಕ್ತಿ ಯೋಜನೆ ಈಗಾಗಲೇ ಜಾರಿಗೊಂಡಿದೆ.

ಬಿಪಿಎಲ್ ಪಡಿತರ ಚೀಟಿದಾರರಿಗೆ ಹೆಚ್ಚುವರಿಯಾಗಿ ಪ್ರತಿ ಯುನಿಟ್‌ಗೆ ಐದು ಕೆಜಿ ಅಕ್ಕಿ ಬದಲು 170 ರೂ. ಪಡಿತರದಾರರ ಮುಖ್ಯಸ್ಥರ ಖಾತೆಗೆ ಸಂದಾಯವಾಗುತ್ತದೆ. ಇನ್ನು ಗೃಹಜ್ಯೋತಿ ಯೋಜನೆಯಡಿ ಮಾಸಿಕ 200 ಯುನಿಟ್ ವಿದ್ಯುತ್ ಉಚಿತ ನೀಡುವ ಯೋಜನೆ ಜುಲೈ 1 ರಿಂದ ಜಾರಿಗೊಂಡಿದ್ದರೂ, ಆಗಸ್ಟ್ ತಿಂಗಳಲ್ಲಿ ಫಲಾನುಭವಿಗಳಿಗೆ ಅದರ ಪ್ರತಿಫಲ ದೊರೆಯುತ್ತದೆ. ಇದೀಗ ಭಾಗ್ಯಲಕ್ಷ್ಮಿ ಯೋಜನೆಗೆ ಚಾಲನೆ ನೀಡುತ್ತಿರುವ ಸರ್ಕಾರ, ಯುವನಿಧಿ ಯೋಜನೆಯನ್ನು ನವೆಂಬರ್ ತಿಂಗಳಲ್ಲಿ ಅನುಷ್ಠಾನಗೊಳಿಸಲು ಸಿದ್ಧತೆ ಮಾಡಿಕೊಂಡಿದೆ.

ನೀರು ಬಿಡುವಂತೆ ತಮಿಳ್ನಾಡು ಪಟ್ಟು

ಜಲಾಶಯಕ್ಕೆ 1932 ಕ್ಯುಸೆಕ್ಸ್ ಒಳಹರಿವಿದ್ದು 395 ಕ್ಯುಸೆಕ್ಸ್ ನೀರನ್ನು ಜಲಾಶಯದಿಂದ ಹೊರಗೆ ಬಿಡಲಾಗುತ್ತಿದೆ. ಜಲಾಶಯದಲ್ಲಿ ಡೆಡ್ ಸ್ಟೋರೇಜ್ ಬಿಟ್ಟರೆ ಇನ್ನುಳಿದಿರುವುದು 11 ಟಿಎಂಸಿ ನೀರು ಮಾತ್ರ ಇನ್ನು 2284 ಅಡಿ ಗರಿಷ್ಠ ಮಟ್ಟವಿರುವ ಕಬಿನಿ ಜಲಾಶಯದಲ್ಲಿ ಸದ್ಯ 2270 ಅಡಿ ನೀರಿದೆ. 2273 ಒಳ ಹರಿವಿದ್ದು, 800 ಕ್ಯುಸೆಕ್ಸ್ ನೀರನ್ನು ಹೊರಗೆ ಬಿಡಲಾಗುತ್ತಿದೆ. ಕಬಿನಿ ಜಲಾಶಯದಲ್ಲಿ ಪ್ರಸ್ತುತ 6 ಟಿಎಂಸಿ ಮಾತ್ರ ನೀರಿದೆ.


ನ್ಯಾಯಾಧೀಕರಣದ ಆದೇಶಾನುಸಾರ ಜೂನ್ ತಿಂಗಳಲ್ಲಿ 9 ಹಾಗೂ ಜುಲೈ ತಿಂಗಳಲ್ಲಿ 31 ಟಿಎಂಸಿ ಒಟ್ಟು 40 ಟಿಎಂಸಿ ನೀರನ್ನು ತಮಿಳುನಾಡಿಗೆ ಹರಿಸಬೇಕಿತ್ತು. ಆದರೆ ಕಾವೇರಿ ಜಲಾಯನ ಪ್ರದೇಶದಲ್ಲಿ ಮಳೆ ಇಲ್ಲದೆ ಎರಡೂ ಜಲಾಶಯಗಳಲ್ಲಿ ನೀರಿಲ್ಲದ ಕಾರಣ ತಮಿಳುನಾಡಿಗೆ ನೀರು ಬಿಟ್ಟಿಲ್ಲ. ಈ ಪರಿಸ್ಥಿತಿಯಲ್ಲೂ 40 ಟಿಎಂಸಿ ನೀರಿಗಾಗಿ ತಮಿಳುನಾಡು ಕಾವೇರಿ ನಿರ್ವಹಣಾ ಮಂಡಳಿಯ ಮೊರೆ ಹೋಗುವ ಮೂಲಕ ಗಾಯದ ಮೇಲೆ ಬರೆ ಎಳೆಯಲು ಹೊರಟಿದೆ.

ಕೆಆರ್‌ಎಸ್‌ನಲ್ಲಿ 11 ಹಾಗೂ ಕಬಿನಿಯಲ್ಲಿ 7 ಸೇರಿ ಒಟ್ಟು 18 ಟಿಎಂಸಿ ನೀರು ಮಾತ್ರವಿದೆ. ಹೀಗಿರುವಾಗ ತಮಿಳುನಾಡು ಸರ್ಕಾರ ಕೇಳರೆ 40 ಟಿಎಂಸಿ ನೀರು ಬಿಡಲು ಹೇಗೆ ಸಾಧ್ಯ. ಮೈಸೂರು ಹಾಗೂ ಮಂಡ್ಯದಲ್ಲಿ ಭತ್ತದ ನಾಟಿಯೇ ಆಗಿಲ್ಲ. ಆದರೆ ತಮಿಳುನಾಡಿನಲ್ಲಿ ಈಗಾಗಲೇ ಬೆಳೆ ಬೆಳೆದಿದ್ದಾರೆ. ಅಕ್ಟೋಬರ್‌ನಲ್ಲಿ ಮತ್ತೆ ನಾಟಿ ಮಾಡಲಿದ್ದು, ಇದಕ್ಕಾಗಿ ಜಲಾಶಯದಲ್ಲಿ ತುಂಬಿಸಿಕೊಳ್ಳಲು ಕರ್ನಾಟಕದಿಂದ ನೀರು ಕೇಳುತ್ತಿದ್ದಾರೆ. ಮೆಟ್ಟೂರಿನಲ್ಲಿ ಸದ್ಯ 60 ಟಿಎಂಸಿ ನೀರಿದ್ದರೂ ಮುಂದಿನ ಬೆಳೆಗಾಗಿ ನೀರು ಸಂಗ್ರಹಿಸಲು ಈ ರೀತಿ ಒತ್ತಡ ಹೇರುತ್ತಿದ್ದಾರೆ.

ಕಾವೇರಿ ನ್ಯಾಯಾಧೀಕರಣ 740 ಟಿಎಂಸಿ ನೀರು ಹಂಚಿಕೆ ಮಾಡಿ 2007ರಲ್ಲಿ ತೀರ್ಪು ನೀಡಿದೆ. ಕರ್ನಾಟಕಕ್ಕೆ 270 ಟಿಎಂಸಿ, ತಮಿಳುನಾಡಿಗೆ 419 ಟಿಎಂಸಿ, ಕೇರಳಕ್ಕೆ 30 ಟಿಎಂಸಿ, ಪುದುಚೇರಿಗೆ 10 ಟಿಎಂಸಿ, ಪರಸರ ಸಂರಕ್ಷಣೆಗೆ 10 ಟಿಎಂಸಿ ಹಾಗೂ ಸಮುದ್ರ ಸೇರುವುದು 4 ಟಿಎಂಸಿ, ಹೀಗೆ ನೀರನ್ನು ಹಂಚಿಕೆ ಮಾಡಲಾಗಿದೆ. ಕಳೆದ ವರ್ಷ ಬಾರೀ ಮಳೆಯಾಗಿದ್ದರಿಂದ ಕಬಿನಿ ಹಾಗೂ ಕೆಆರ್‌ಎಸ್ ಜಲಾಶಯ ಸಂಪೂರ್ಣ ಭರ್ತಿಯಾಗಿದ್ದವು. ಹಾಗಾಗಿ ನಿಗದಿಗಿಂತ ಹೆಚ್ಚು ಪ್ರಮಾಣದ ನೀರನ್ನು ತಮಿಳುನಾಡಿಗೆ ಬಿಡಲಾಗಿತ್ತು.

> ಕಾವೇರಿ ನ್ಯಾಯಾಧೀಕರಣ ತೀರ್ಪಿನಂತೆ ನೀರು ಬಿಡುವಂತೆ ತಮಿಳುನಾಡು ಸರ್ಕಾರ ಕಾವೇರಿ ನಿರ್ವಹಣಾ ಮಂಡಳಿ ಮುಂದೆ ಮನವಿ ಮಾಡಿದೆ. ಆದರೆ ಕಾವೇರಿ ಜಲಾನಯನ ಪ್ರದೇಶಗಳಲ್ಲಿ ಮಳೆ ಬಾರದ ಕಾರಣ ನಮ್ಮ ಜಲಾಶಯಗಳಲ್ಲಿ ಕುಡಿಯುವಷ್ಟು ಮಾತ್ರ ನೀರಿದೆ. ಈ ಹಿನ್ನೆಲೆಯಲ್ಲಿ ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲ. ಈ ಬಗ್ಗೆ ಕರ್ನಾಟಕ ಸರ್ಕಾರದ ಕಾನೂನು ವಿಭಾಗ ಕಾವೇರಿ ನಿರ್ವಹಣಾ ಪ್ರಾಧಿಕಾರಕ್ಕೆ ಪರಿಸ್ಥಿತಿ ಮನವರಿಕೆ ಮಾಡಿಕೊಡಲಿದೆ.
>
> –ಶಂಕರೇಗೌಡ, ವ್ಯವಸ್ಥಾಪಕ ನಿರ್ದೇಶಕ, ಕಾವೇರಿ ನೀರಾವರಿ ನಿಗಮ

ಮುಮ್ಮಡಿ ಕೃಷ್ಣರಾಜ ಒಡೆಯರ್ ಜನ್ಮ ದಿನಾಚರಣೆ



ಮೈಸೂರು, ಜು.15(ಎಂಟಿವೈ)– ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ 229ನೇ ಜನ್ಮ ದಿನವನ್ನು ಆಚರಿಸಿ, ಸಿಹಿ ವಿತರಿಸಲಾಯಿತು.

ಕರ್ನಾಟಕ ಸೇನಾಪಡೆ ವತಿಯಿಂದ ಆಯೋಜಿಸಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಹಾಗೂ ಇನ್ನಿತರರು ಮುಮ್ಮಡಿ ಕೃಷ್ಣರಾಜ ಒಡೆಯರ್ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿದರು.

ಬಳಿಕ ಸಿ.ಎನ್.ಮಂಜೇಗೌಡ ಮಾತನಾಡಿ, ಮೈಸೂರು ಮಾತ್ರವಲ್ಲದೇ ನಾಡಿಗೆ ಮೈಸೂರು ರಾಜವಂಶಸ್ಥರು ನೀಡಿರುವ ಕೊಡುಗೆ ಅಪಾರ. ಅದರಲ್ಲೂ ಮುಮ್ಮಡಿ ಕೃಷ್ಣರಾಜ ಒಡೆಯರ್ ಮಹತ್ತರವಾದ ಕೊಡುಗೆ ನೀಡಿದ್ದಾರೆ. ಟಿಪ್ಪುಸುಲ್ತಾನ್ ನಿಧನದ ಬಳಿಕ ಮೈಸೂರು ಸಂಸ್ಥಾನವನ್ನು ಕಟ್ಟಿ ಬೆಳೆಸಿ ಶ್ರೀರಂಗಪಟ್ಟಣದಲ್ಲಿದ್ದ ರಾಜಧಾನಿಯನ್ನು ಮೈಸೂರಿಗೆ ತಂದರು. ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿ ಮಹಾರಾಜ, ಮಹಾರಾಣಿ ಕಾಲೇಜು ಸೇರಿದಂತೆ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಕಲೆ, ಸಾಹಿತ್ಯಕ್ಕೆ ಒತ್ತು ನೀಡಿದ್ದರು. ಇಂತಹ ಮಹನೀಯರ ತತ್ವ ಆದರ್ಶಗಳನ್ನು ಶಾಲಾ ಹಂತದಲ್ಲೇ ಎಲ್ಲ ಮಕ್ಕಳಿಗೂ ತಿಳಿಸುವ ಅಗತ್ಯವಿದೆ ಎಂದರು.

ಸಮಾಜ ಸೇವಕ ಡಾ. ರಘುರಾಂ ಕೆ.ವಾಜಪೇಯಿ ಮಾತನಾಡಿ, ಕನ್ನಡದ ಭೋಜರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಚಿಕ್ಕವಯಸ್ಸಿನಲ್ಲಿಯೇ ಅಧಿಕಾರ ವಹಿಸಿಕೊಂಡರು. ತಮ್ಮ ಆಡಳಿತದಲ್ಲಿ ಶಿಕ್ಷಣ, ಕಲೆ, ಸಾಹಿತ್ಯ ಪರಂಪರೆಗಳಿಗೆ ಹೆಚ್ಚು ಒತ್ತನ್ನು ನೀಡಿ ಸಮಗ್ರ ಸಾಹಿತ್ಯಕ್ಕೆ ಭದ್ರ ಬುನಾದಿ ಹಾಕಿದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖಂಡ ಹೆಚ್.ಕೆ. ರಾಮು, ಕರ್ನಾಟಕ ಸೇನಾಪಡೆ ಅಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಲಯನ್ ಗೋಲ್ಡ್ ಸುರೇಶ್, ಡಾ. ಪಿ.ಶಾಂತರಾಜೇ ಅರಸ್, ಮಹಾರಾಜ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಉದಯಶಂಕರ್, ಹೇಮಾವತಿ, ಜಗದೀಶ್ ಗೌಡ, ವಿಜಯೇಂದ್ರ ಕೃಷ್ಣಯ್ಯ, ಅನಿಲ್, ಚಂದ್ರು ಅಂಬಾ ಅರಸ್, ನೇಹಾ, ಪ್ರಭಾಕರ್, ಶಿವಲಿಂಗಯ್ಯ, ಪದ್ಮ, ಎಳನೀರು ರಾಮಣ್ಣ, ದರ್ಶನ್ ಗೌಡ, ಮಹಾದೇವ ಸ್ವಾಮಿ, ರವಿ ನಾಯಕ್ ಇನಿತರರು ಉಪಸ್ಥಿತರಿದ್ದರು.

ನೇಮಕಾತಿ ಹಗರಣ ತನಿಖೆಗೆ ಆಗ್ರಹಿಸಿ ಪತ್ರ ಚಳವಳಿ



ಮೈಸೂರು, ಜು.15(ಜಿಎ)–ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಹಗರಣದ ಬಗ್ಗೆ ತನಿಖೆ ಮಾಡುವಂತೆ ಒತ್ತಾಯಿಸಿ ಡಿ. ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನ ಸಮಿತಿಯ ವತಿಯಿಂದ ಪತ್ರ ಚಳವಳಿ ನಡೆಸಲಾಯಿತು. ನಗರದ ಮಹಾನಗರ ಪಾಲಿಕೆ ಮುಂಭಾಗ ಇರುವ ಅಂಚೆಪೆಟ್ಟಿಗೆ ಎದುರು ಮುಖ್ಯಮಂತ್ರಿಗಳಿಗೆ ಹಾಗೂ ಉನ್ನತ ಶಿಕ್ಷಣ ಸಚಿವರಿಗೆ ಪತ್ರ ರವಾನೆ ಮಾಡುವ ಮೂಲಕ ಪತ್ರ ಚಳುವಳಿ ಮಾಡಲಾಯಿತು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, 2021ರಲ್ಲಿ ಅಧಿಸೂಚನೆಯನ್ನು ಹೊರಡಿಸಿ 2022ರಲ್ಲಿ ಪರೀಕ್ಷೆಯು ನಡೆಯಿತು. ಹಗರಣಗಳ ಕುರಿತು ತನಿಖೆಯು (ಸಿ.ಸಿ.ಬಿ) ಸಹ ನಡೆದಿದೆ. ಇದೀಗ ಕಲ್ಯಾಣ ಕರ್ನಾಟಕ ಮತ್ತು ಮಿಕ್ಕುಳಿದ ವೃಂದದ ಮೀಸಲಾತಿಯ ಜಿಕ್ಕಟ್ಟಿನ ಪರಿಣಾಮವಾಗಿ ಪ್ರಕರಣವು ನ್ಯಾಯಾಲಯದ ಅಂಗಳದಲ್ಲಿದೆ. ಹೀಗಾಗಿ ನೇಮಕಾತಿಯಲ್ಲಿನ ಭ್ರಷ್ಟಾಚಾರದ ಬಗ್ಗೆ ಮರು ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಸಮಿತಿಯ ಅಧ್ಯಕ್ಷ ಜಾಕೀರ್ ಹುಸೇನ್, ಮಾಜಿ ಮೇಯರ್ ಪುರುಷೋತ್ತಮ್, ದ್ಯಾವಪ್ಪನಾಯ್ಕ, ಮಾಜಿ ನಗರಪಾಲಿಕೆ ಸದಸ್ಯರಾದ ಮಂಜುನಾಥ್, ಅರಸು ಮಂಡಳಿ ಮಾಜಿ ಅಧ್ಯಕ್ಷ ಹೆಚ್.ಡಿ. ನಂಜರಾಜೇ ಅರಸ್, ಸಮಿತಿಯ ಸದಸ್ಯರಾದ ರಫಿವುಲ್ಲಾಖಾನ್, ಪವನ್ ಸಿದ್ದರಾಮ, ಮತ್ತಿತರರು ಭಾಗಿಯಾಗಿದ್ದರು.

35 ಸಾವಿರ ಮನೆಗಳಿಗೆ ಸಿಎನ್‌ಜಿ ಗ್ಯಾಸ್ ಪೂರೈಕೆಗೆ ಕ್ರಮ

ಮೈಸೂರು,ಜು.15(ಎಂಟಿವೈ)– ಮೈಸೂರು ನಗರದಲ್ಲಿ ಉದ್ದೇಶಿತ 35 ಸಾವಿರ ಮನೆಗಳಿಗೆ 2025ರೊಳಗೆ ಪೈಪ್ ಮೂಲಕ ಸಿಎನ್‌ಜಿ ಗ್ಯಾಸ್ ಪೂರೈಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಎಜಿ ಅಂಡ್ ಪಿ ಪ್ರಥಮ್ ಪ್ರಾದೇಶಿಕ ಮುಖ್ಯಸ್ಥ ಅರುಣ್ ನಾಯಕ್ ತಿಳಿಸಿದ್ದಾರೆ.



ಮೈಸೂರಿನ ಸರಸ್ವತಿಪುರಂನಲ್ಲಿರುವ ಸಂಸ್ಥೆಯ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಲ್ಲಿ ಪ್ರತಿ ಮನೆಗೆ ಸಿಎನ್‌ಜಿ ಗ್ಯಾಸ್ ಪೂರೈಸುವ ಗುರಿ ಇದೆ. ಅದಕ್ಕಾಗಿ ಕಳೆದ ದಸರಾ ಸಂದರ್ಭದಲ್ಲಿ ಪೈಪ್‌ಲೈನ್ ಕಾಮಗಾರಿ ಆರಂಭಿಸಲಾಗಿದೆ. ಇದುವರೆಗೆ 10 ಸಾವಿರ ಮನೆಗಳಿಗೆ ಪ್ಲಂಬಿಂಗ್ ಮಾಡಲಾಗಿದೆ ಎಂದರು.


ವಿಜಯನಗರ, ಕುವೆಂಪುನಗರದಲ್ಲಿ ಪೈಪ್ ಮೂಲಕ 700 ರಿಂದ 800 ಮನೆಗಳಿಗೆ ಸಂಪರ್ಕ ನೀಡಲಾಗಿದೆ. ನಗರ ಪಾಲಿಕೆ ವ್ಯಾಪ್ತಿಯಲ್ಲಿ 45 ಕಿ.ಮೀ. ಪೈಪ್‌ಲೈನ್‌ಗೆ ಅನುಮತಿ ನೀಡಲಾಗಿದೆ. ಈ ವರ್ಷದ ರಾಜ್ಯ ಬಜೆಟ್‌ನಲ್ಲಿ ಪೈಪ್ ಮೂಲಕ ಗ್ಯಾಸ್ ಪೂರೈಕೆಗೆ ಉತ್ತೇಜನ ಕೊಡಲಾಗಿದೆ. ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಹಂತ ಹಂತವಾಗಿ ಯೋಜನೆ ವಿಸ್ತರಿಸಲು ಉದ್ದೇಶಿಸಲಾಗಿದೆ ಎಂದರು.

ಮೈಸೂರಿನ ಹೆಬ್ಬಾಳು, ನಂಜನಗೂಡಿನಲ್ಲಿ ಸಿಎನ್‌ಐ ಘಟಕ ಇದೆ. ಹುಣಸೂರು ಮತ್ತು ಪಿರಿಯಾಪಟ್ಟಣದಲ್ಲಿರುವ ಮನೆಗಳಿಗೆ ಸಿಎನ್‌ಜಿ ಸರಬರಾಜು ಮಾಡಲು ಎರಡು ಪಟ್ಟಣಗಳ ನಡುವೆ ಸಿಎನ್‌ಜಿಯ ಸಣ್ಣ ಘಟಕ ಸ್ಥಾಪಿಸಲು ಉದ್ದೇಶಿಸಲಾಗಿದೆ. ಮೈಸೂರಲ್ಲಿ ಸಿಎನ್‌ಜಿ ಸಂಪರ್ಕ ಪಡೆಯಲು ನಿಗದಿ ಮಾಡಿರುವ 10 ಸಾವಿರ ಶುಲ್ಕದಲ್ಲಿ 6 ಸಾವಿರ ರೂ. ಸೆಕ್ಯೂರಿಟಿ ಡಿಪಾಸಿಟ್ ಒಳಗೊಂಡಿರುತ್ತದೆ. ಅದನ್ನು ಗ್ರಾಹಕರು ಮರಳಿ ಪಡೆಯಬಹುದಾಗಿದೆ. ನಿಗದಿತ ಶುಲ್ಕವನ್ನು ಕಂತಿನ ರೂಪದಲ್ಲಿ ಪಾವತಿಸಲು ಅವಕಾಶ ನೀಡಲಾಗಿದೆ. ಗ್ರಾಹಕರಿಗೆ ಹೊರೆಯಾಗದಂತೆ ಕ್ರಮ ವಹಿಸಿದ್ದೇವೆ ಎಂದರು.

ಎಜಿ ಅಂಡ್ ಪಿ ಪ್ರಥಮ್ ಮಾರುಕಟ್ಟೆ ಮುಖ್ಯಸ್ಥ ನಿತಿನ್ ಮಾತನಾಡಿ, ನಮ್ಮ ಕಂಪನಿಯು 5 ರಾಜ್ಯಗಳಿಂದ 35 ಜಿಲ್ಲೆಗಳಲ್ಲಿ ಸಿಎನ್‌ಜಿ ಪೂರೈಕೆಗೆ ಅನುಮತಿ ಪಡೆದಿದೆ. ಮನೆಗಳಲ್ಲಿ ಗೃಹಬಳಕೆಗೆ, ಹೋಟೆಲ್, ರೆಸ್ಟೋರೆಂಟ್, ಕೈಗಾರಿಕೆ, ವಾಹನಗಳಿಗೆ ಸಿಎನ್‌ಜಿ, ಪಿಎನ್‌ಜಿ ಗ್ಯಾಸ್ ಪೂರೈಸಲಾಗುತ್ತಿದೆ. ಸಿಎನ್‌ಜಿ ಬಳಸಿದರೆ, ಎಲ್‌ಪಿಜಿಗಿಂತ ಶೇ.40, ಡೀಸೆಲ್‌ಗಿಂತ ಶೇ. 30 ಉಳಿತಾಯವಾಗಲಿದೆ. ಆರ್ಥಿಕವಾಗಿ ಲಾಭ ಪಡೆಯಬಹುದು. ಪರಿಸರ ಸ್ನೇಹಿಯಾಗಿದೆ. ಯಾವುದೇ ಅಪಾಯ ಇರುವುದಿಲ್ಲ. ಗ್ರಾಹಕರಿಗೆ ಸಿಎನ್‌ಜಿ ಸುರಕ್ಷಿತವೂ ಆಗಿದ್ದು, ಉಳಿತಾಯ ಮಾಡುವುದಕ್ಕೆ ಸಹಕಾರಿಯಾಗಿದೆ. ಈ ನಿಟ್ಟಿನಲ್ಲಿ ಮೈಸೂರಿನಲ್ಲಿ 25 ಕಾರ್ಖಾನೆಗಳು ಸಿಎನ್‌ಜಿ ಸಂಪರ್ಕ ಪಡೆಯಲು ಮುಂದಾಗಿ ಒಪ್ಪಂದ ಮಾಡಿಕೊಂಡಿವೆ. ಸಿಎನ್‌ಜಿಗೆ ವಾಹನಗಳನ್ನು ಮಾರ್ಪಡಿಸಿಕೊಳ್ಳಲು ಕಾಂಚೀಪುರಂ ಮತ್ತು ಮೈಸೂರಿನಲ್ಲಿ ಘಟಕ ಆರಂಭಕ್ಕೆ ಸಿದ್ಧತೆ ಮಾಡಿಕೊಂಡಿದ್ದೇವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಿಎನ್ ಅಂಡ್ ಜಿ ಪ್ರಥಮ್ ದಕ್ಷಿಣ ಕರ್ನಾಟಕ ವಲಯದ ಮುಖ್ಯಸ್ಥ ಬ್ರಿಜೇಶ್ ಸಿಂಗ್ ಇದ್ದರು.

ಮರ್ಕೆತಾ ವಾಂಡ್ರೋಸ್ತವಾ ಮುಡಿಗೆ ವಿಂಬಲ್ಡನ್ ಕಿರೀಟ

ಲಂಡನ್: ಜೆಕ್ ಗಣರಾಜ್ಯದ ಟೆನಿಸ್ ಆಟಗಾರ್ತಿ ಮರ್ಕೆತಾ ವಾಂಡ್ರೋಸ್ತವಾ ಅತ್ಯಂತ ಆಕ್ರಮಣಕಾರಿ ಹಾಗೂ ಪ್ರಬುದ್ಧ ಆಟ ಪ್ರದರ್ಶಿಸಿ ಪ್ರತಿಷ್ಠಿತ ವಿಂಬಲ್ಡನ್ ಗ್ರ್ಯಾಂಡ್ ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ಜಯಗಳಿಸಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.



ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ಮರ್ಕೆತಾ ವಾಂಡ್ರೋಸ್ತವಾ ಟ್ಯುನಿಷಿಯಾದ ಆನ್ಸ್ ಜುಬರ್ ವಿರುದ್ಧ 6–4, 6–4 ನೇರ ಸೆಟ್‌ಗಳಲ್ಲಿ ಅಧಿಕಾರಯುತ ಜಯಗಳಿಸಿದರು.

ಪಂದ್ಯದ ಆರಂಭದಿಂದಲೇ ಹಿಡಿತ ಸಾಧಿಸಿದ ಮರ್ಕೆತಾ ಎಲ್ಲಿಯೂ ಲಯ ತಪ್ಪಲಿಲ್ಲ. ಅತ್ಯಂತ ಆತ್ಮವಿಶ್ವಾಸದಿಂದ ಎದುರಾಳಿಯ ಹೊಡೆತಗಳಿಗೆ ಪ್ರತ್ಯುತ್ತರ ನೀಡಿದ ಮರ್ಕೆತಾ ಮೊದಲ ಸೆಟ್ ಅನ್ನು 6–4ರಲ್ಲಿ ಜಯಗಳಿಸಿದರು.

ಯಾವುದೇ ಹಂತದಲ್ಲಿಯೂ ಮೈಮರೆಯದೇ ಸಂಪೂರ್ಣ ಹಿಡಿತ ಸಾಧಿಸಿ 6–4 ಅಂತರದಲ್ಲಿ ಸೆಟ್ ಹಾಗೂ ಪಂದ್ಯದಲ್ಲಿ ಜಯ ಸಾಧಿಸಿ ವಿಂಬಲ್ಡನ್ ಪ್ರಶಸ್ತಿಗೆ ಮುತ್ತಿಟ್ಟರು.

ಬಲದ ಪ್ರತೀಕವೇ 'ಭೀಮನ ಅಮಾವಾಸ್ಯೆ'

ಮ.ನ.ಲತಾಮೋಹನ್
ಮೊ.94818 31434



ಆಷಾಢ ಬಂತೆಂದರೆ ಹೊಸದಾಗಿ ಮದುವೆಯಾದ ನವ ದಂಪತಿಗಳಿಗೆ ಸ್ವಲ್ಪ ಬೇಸರವೆನಿಸಿದರೂ ಆನಂತರದಲ್ಲಿ ಬರುವ ಹಬ್ಬಗಳ ಸಾಲು ಅವರಲ್ಲಿ ಅನ್ಯೋನ್ಯತೆಯನ್ನು ತರುವಲ್ಲಿ ಮುನ್ನುಡಿಯಾಗುವುದು.

ಮನಸ್ಸುಗಳನ್ನು ಒಂದು ಮಾಡಿ ಮನೆಯನ್ನು ನಂದನವನವನ್ನಾಗಿಸುವ ಹಬ್ಬಗಳು ಎಂದೂ ನಮ್ಮ ಭಾರತೀಯರ ಪಾಲಿಗೆ ವರದಾನವೇ ಸರಿ. ಸಾಮಾನ್ಯವಾಗಿ ಆಷಾಢ ಬಂತೆಂದರೆ ಒಂದು ರೀತಿಯ ಮೌನದ ನೀರವತೆ ಮನೆ ಮಾಡುತ್ತದೆ. ಯಾವುದೇ ಮದುವೆಗಳಿಲ್ಲ. ಶುಭ ಕಾರ್ಯಗಳಿಲ್ಲ. ಯಾವುದೇ ಹೊಸ ಪದಾರ್ಥಗಳು ಮನೆಗೆ ಬರುವುದಿಲ್ಲ. ಮನೆಯಲ್ಲಿ ಒಂದು ರೀತಿ ಖರ್ಚು ಉಳಿಸುವ ಮಾಸ ಎಂದೇ ಹೇಳಬಹುದು.

ಆದರೆ ಆಷಾಢದಲ್ಲಿ ಯಾವುದೇ ಶುಭಕಾರ್ಯ ಮಾಡುವುದಿಲ್ಲವಾದರೂ ಆಷಾಢದ ಅಮಾವಾಸ್ಯೆ ದಿನ ಜ್ಯೋತಿರ್ಭೀಮೇಶ್ವರ ವ್ರತವನ್ನು ಬಹಳ ಸಡಗರದಿಂದ ಮಾಡುವುದಕ್ಕೆ ಎಲ್ಲಾ ಮಾನಿನಿಯರೂ ಸಂಭ್ರಮಿಸುತ್ತಾರೆ. ಇದಕ್ಕೆ ಪತಿ ಸಂಜೀವಿನಿ ವ್ರತ, ಜ್ಯೋತಿಸ್ತಂಭ ವ್ರತ, ಗಂಡನ ಪೂಜೆ ಎಂದೂ ಕರೆಯುವುದುಂಟು.

ಪತಿ ಭೀಮನಂತೆ ಬಲಶಾಲಿಯಾಗಿ ನೂರ್ಕಾಲ ಬಾಳುವಂತೆ ಹಾಗೂ ತಾವು ದೀರ್ಘ ಸುಮಂಗಲಿಯಾಗಿರಬೇಕೆಂದು ಭಕ್ತಿ ಭಾವದಿಂದ ಶಿವನನ್ನು ಪ್ರಾರ್ಥಿಸಿ ಪೂಜಿಸುವ ಹಬ್ಬವೇ 'ಭೀಮನ ಅಮಾವಾಸ್ಯೆ'. ಶ್ರಾವಣ ಮಾಸದಲ್ಲಿ ಬರುವ ಹಬ್ಬಗಳ ಸಾಲಿನಲ್ಲಿ ಪ್ರಪ್ರಥಮ ಹಬ್ಬ ಇದು. ಸಾಧಾರಣವಾಗಿ ಮದುವೆಯಾದ ಒಂಬತ್ತು ವರ್ಷ ಈ ವ್ರತವನ್ನು ಆಚರಿಸುತ್ತಾರೆ.

ಭೀಮನ ಅಮಾವಾಸ್ಯೆಯನ್ನು ಆಚರಿಸುವ ಮೊದಲು ಸಂಕಲ್ಪ ಮಾಡಿಕೊಳ್ಳುವುದು ಮುಖ್ಯ. ಮದುವೆಯಾಗದವರು ತಮಗೆ ಭೀಮನಂತಹ ಬಲಶಾಲಿಯಾದ ಗಂಡನನ್ನು ಕರುಣಿಸು ಎಂದು ಬೇಡಿದರೆ, ಮದುವೆಯಾದವರು ತಮ್ಮ ಗಂಡನಿಗೆ ಆಯುರಾರೋಗ್ಯ ಹೆಚ್ಚಲಿ ಎಂದು ಜ್ಯೋತಿರ್ಭೀಮೇಶ್ವರನನ್ನು ಪೂಜಿಸುವ ಪರಿ ಎಲ್ಲಾ ಕಡೆ ಚಾಲ್ತಿಯಲ್ಲಿದೆ.

ಕೆಲವೆಡೆ ಈ ಹಬ್ಬದಲ್ಲಿ ಸೋದರಿಯರು ಸೋದರರ ಕೈಯ್ಯಿಂದ ಭಂಡಾರ ಒಡೆಸುತ್ತಾರೆ. ಭಂಡಾರ ಅಂದರೆ, ಕರಿದ ಕಡಬು(ಸಿಹಿ ಇಲ್ಲದ). ಆದರೆ ಅದರೊಳಗೆ ಲಕ್ಷ್ಮೀ ಸ್ವರೂಪಿ ನಾಣ್ಯವನ್ನು ಇಟ್ಟಿರುತ್ತಾರೆ. ಅಂತಹ ಕಡುಬನ್ನು ಮುಂಬಾಗಿಲ ಹೊಸಿಲಲ್ಲಿಟ್ಟು ಸೋದರ ಹೊಸಿಲ ಮೇಲೆ ಕೂತು ತನ್ನ ಮೊಣಕೈಯಿಂದ ಅದನ್ನು ತುಂಡರಿಸುತ್ತಾನೆ.

ಸೋದರಿ ಆ ಸಮಯದಲ್ಲಿ ಅವನ ಬೆನ್ನ ಮೇಲೆ ಪ್ರೀತಿಯಿಂದ ಗುದ್ದುತ್ತಾಳೆ. ನಂತರ ಅಣ್ಣನ ಆಶೀರ್ವಾದ ಬೇಡುವ ಸೋದರಿ, ಫಲ ತಾಂಬೂಲ ನೀಡುತ್ತಾಳೆ. ಇದು ಒಂದು ರೀತಿ ರಕ್ಷಾ ಬಂಧನದ ಇನ್ನೊಂದು ರೂಪದಂತಿರುತ್ತದೆ ಈ ಆಚರಣೆ. ಸೋದರಿಯನ್ನು ಸದಾ ಸೋದರ ರಕ್ಷಣೆ ಮಾಡುತ್ತಾನೆಂಬ ಸಂಕೇತವನ್ನು ಸೂಚಿಸುತ್ತದೆ.

ಈ ವ್ರತದ ಹಿಂದಿನ ಕಥೆ ಹೀಗಿದೆ:- ವಜ್ರಬಾಹು ಎಂಬ ರಾಜನಿಗೆ ಒಬ್ಬನೇ ಮಗ. ಗುಣವಂತ, ಬುದ್ಧಿವಂತ ಆದರೆ ಚಿಕ್ಕ ವಯಸ್ಸಿನಲ್ಲಿ ವಿಧಿವಶದಿಂದ ಮರಣ ಹೊಂದುತ್ತಾನೆ. ಆಗ ರಾಜ ಮತ್ತು ರಾಣಿ ತಮ್ಮ ಮಗನ ಮೃತ ದೇಹಕ್ಕಾದರು ಮದುವೆ ಮಾಡಿ ಸಂತೋಷಪಡಬೇಕೆಂದು ಯೋಚಿಸಿ, ಸೇವಕರನ್ನು ಕಳುಹಿಸಿ "ಮೃತ ರಾಜಕುಮಾರನಿಗೆ ಯಾರಾದರು ಕನ್ಯೆಯನ್ನು ಕೊಟ್ಟರೆ ಅವರಿಗೆ ಲಕ್ಷ ವರಹ ನೀಡಲಾಗುವುದು'' ಎಂದು ಡಂಗೂರ ಸಾರಿಸುತ್ತಾರೆ.

ಒಂದು ಊರಿನಲ್ಲಿ ಮಾಧವನೆಂಬ ಒಬ್ಬ ಬ್ರಾಹ್ಮಣನಿದ್ದನು. ಕಡು ಬಡವನಾದ ಅವನಿಗೆ 5 ಜನ ಹೆಣ್ಣು ಮಕ್ಕಳಿದ್ದರು. ಬಡತನ ತಾಳಲಾರದೆ ತನ್ನ ಒಬ್ಬ ಮಗಳನ್ನು ರಾಜನ ಮಗನಿಗೆ ಕೊಡುವುದಾಗಿ ಒಪ್ಪಿಕೊಂಡನು. ರಾಜ ಮದುವೆ ನಡೆಸಿ, ಮಗನ ಅಂತ್ಯಕ್ರಿಯೆಗೆ ಸ್ಮಶಾನಕ್ಕೆ ಬಂದರು. ಕುಮಾರನನ್ನು ಚಿತೆ ಮೇಲೆ ಮಲಗಿಸಿ ಕಾರ್ಯ ಮುಂದುವರಿಸುವಷ್ಟರಲ್ಲಿ ಜೋರಾಗಿ ಮಳೆ ಬಂದಿತು. ಹುಡುಗಿ ಒಬ್ಬಳನ್ನೇ ಬಿಟ್ಟು ಎಲ್ಲರೂ ಹಿಂದಿರುಗಿದರು.

ಆಕೆ ತನ್ನ ದುರ್ವಿಧಿಯನ್ನು ನೆನೆದು ದೇವರನ್ನು ಪ್ರಾರ್ಥಿಸುತ್ತಿರಲು ಈಶ್ವರ-ಪಾರ್ವತಿ ಪ್ರತ್ಯಕ್ಷರಾದರು. ಬಾಲಕಿಯು ಪಾರ್ವತಿ ದೇವಿಯ ಉಪದೇಶದಂತೆ ಮನಸ್ಸಿನಲ್ಲೇ ಮಂಟಪ ನಿರ್ಮಿಸಿ, ಮಣ್ಣಿನಿಂದ ಜ್ಯೋತಿ ಸ್ತಂಬಗಳನ್ನು ಸ್ಥಾಪಿಸಿ ಪೂಜೆ ಮಾಡುತ್ತಾಳೆ. ಆಗ ಮೃತ ರಾಜಕುಮಾರನಿಗೆ ಜೀವ ಬಂದು, ದಂಪತಿಗಳು ಸಕಲ ಸೌಭಾಗ್ಯಗಳನ್ನು ಅನುಭವಿಸಿ, ಅಂತ್ಯದಲ್ಲಿ ಶಿವ ಸನ್ನಿಧಿ ಸೇರಿದರು ಎಂದು ವ್ರತ ರತ್ನ ಮಾಲೆಯಲ್ಲಿ ಉಲ್ಲೇಖವಾಗಿದೆ.

ಮದುವೆಯಾದ ಹೆಣ್ಣು ಮಕ್ಕಳು ಒಂಭತ್ತು ವರ್ಷ ಈ ವ್ರತವನ್ನು ಆಚರಿಸುತ್ತಾರೆ. ಬಾಳೆಗಿಡ ಮತ್ತು ಮಾವಿನ ಎಲೆಗಳಿಂದ ಮಂಟಪ ನಿರ್ಮಿಸಿ, ಆ ಮಂಟಪದಲ್ಲಿ ಧಾನ್ಯವನ್ನು ಹರಡಿ ಅದರ ಮೇಲೆ ದೀಪ ಇಟ್ಟು ಅರಿಶಿನ ಕೊನೆ ಕಡ್ಡಿಯನ್ನೇ ಜ್ಯೋತಿರ್ಭೀಮೇಶ್ವರ ಎಂದು ಭಾವಿಸಿ ಮಲ್ಲಿಗೆ, ಸಂಪಿಗೆ, ಸೇವಂತಿಗೆ ಮೊದಲಾದ ಹೂವುಗಳಿಂದ ಮತ್ತು ಶಿವನಿಗೆ ಪ್ರಿಯವಾದ ಬಿಲ್ವಪತ್ರೆ, ತುಳಸಿ ಮೊದಲಾದ ಪತ್ರಗಳಿಂದ ಅರ್ಚಿಸಿ ಪೂಜೆ ಮಾಡುತ್ತಾರೆ.

ಬಲಗೈಯಲ್ಲಿ ಒಂಬತ್ತು ಗಂಟುಗಳುಳ್ಳ ದಾರ ಕಟ್ಟಿಕೊಂಡು, ಕಡುಬುಗಳನ್ನು ನಿವೇದನೆ ಮಾಡಿ, ಕಥೆ ಪಾರಾಯಣ ಮಾಡಿ ಪ್ರಸಾದ ಸ್ವೀಕರಿಸುತ್ತಾರೆ. ಪೂಜೆ ಮಾಡಿದ ಹುಡುಗಿಯ ಅಣ್ಣ ತಮ್ಮಂದಿರು ಬಂದು ಕಡುಬನ್ನು ಹೊಸ್ತಿಲ ಮೇಲೆ ಇಟ್ಟು ಭಂಡಾರ ಒಡೆಯುವ ಕಾರ್ಯವು ನಡೆಯುತ್ತದೆ



ಆಷಾಢ ಬಹುಳ ಅಮಾವಾಸ್ಯೆ ದಿನ ಬೆಳಗ್ಗೆ ಎದ್ದು ಮಂಗಳ ಸ್ನಾನ ಮಾಡಿ ಪೂಜಾಸ್ಥಳದಲ್ಲಿ ಮಂಟಪವನ್ನು ನಿರ್ಮಿಸಿ ಅದರಲ್ಲಿ ಧಾನ್ಯ ರಾಶಿ ಮಾಡಿ ಅದರ ಮೇಲೆ ಮಣ್ಣು ಬೊಂಬೆಗಳೆರಡನ್ನು ಇರಿಸಲಾಗುವುದು ಜ್ಯೋತಿಸ್ತಂಭ ಎಂಬ ದೀಪ ಇಟ್ಟು ಆರಾಧಿಸಿ ಸಾನ್ನಿಧ್ಯದಲ್ಲಿ ಮಲಗಿ ನಿದ್ರಿಸಿ, ನೈವೇದ್ಯವನ್ನು ಮಾಡಿ ಮೊದಲ ವರ್ಷವೂ, ಎರಡನೆಯ ವರ್ಷವೂ ಅದನ್ನು ನೂರರಂತೆ ಆಚಾರ್ಯರಿಗೆ ಉಪಾಯನವಾಗಿ ಕೊಡುವ ಸಂಪ್ರದಾಯವಿದೆ.


ಗಣಪತಿಗೆ ಪೂಜೆ ಸಲ್ಲಿಸಿದ ನಂತರ ಮದುವೆಯಾದವರು 9 ಎಳೆಯ ದಾರದಿಂದ 12 ಗಂಟುಗಳಿರುವ (ಈ 12 ಗಂಟುಗಳು 12 ಜ್ಯೋತಿರ್ಲಿಂಗಗಳ ಪ್ರತೀಕ) ಗೌರಿದಾರವನ್ನು ಸಿದ್ಧಪಡಿಸಿ. ಅವಿವಾಹಿತ ಹೆಣ್ಣು ಮಕ್ಕಳು 5 ಎಳೆಯ ದಾರದಿಂದ 5 ಗಂಟುಗಳನ್ನು ಮಾಡಿಕೊಂಡು ಸಂಕಲ್ಪ ಮಾಡಿಕೊಳ್ಳಬೇಕು. ವಿವಾಹಿತೆಯರು ಶಿವ-ಪಾರ್ವತಿ ಪೂಜೆಯ ನಂತರ, ಪತಿಯ ಪಾದಪೂಜೆ ಮಾಡುವಾಗ ಅವರಿಂದ ಈ ಗೌರಿ ದಾರವನ್ನು ಕೈಗೆ ಕಟ್ಟಿಸಿಕೊಳ್ಳಬೇಕು. ಅವಿವಾಹಿತೆಯರು ತಾಯಿಯಿಂದ ತಮ್ಮ ಕೈಗೆ ಈ ದಾರವನ್ನು ಕಟ್ಟಿಸಿಕೊಂಡು ವ್ರತವನ್ನು ಆರಂಭಿಸಬೇಕು. ಶಿವ ಪಾರ್ವತಿಯರ ಪ್ರತೀಕವಾದ ದೀಪಗಳನ್ನು (ತುಪ್ಪದ ದೀಪ ಹಚ್ಚಿದರೆ ಶ್ರೇಷ್ಠ) ಹಚ್ಚಿ, ಆವಾಹನೆ ಮಾಡಿ, ಸಂಕಲ್ಪ ಮಾಡಿಕೊಂಡು ನೈವೇದ್ಯ, ಹೂವು ಹಣ್ಣು, ದೀಪ, ಧೂಪಗಳಿಂದ ಶಿವ ಅಷ್ಟೋತ್ತರ, ಗೌರಿ ಅಷ್ಟೋತ್ತರದೊಂದಿಗೆ ಪೂಜೆ ಮಾಡಿ. ಸಾಧ್ಯವಾದರೆ ಲಲಿತಾ ಸಹಸ್ರನಾಮ ಪಠಣ ಮಾಡಲಾಗುವುದು.

ಐದು ವರ್ಷಗಳು ಈ ರೀತಿ ವ್ರತವನ್ನಾಚರಿಸಿ ಮೊದಲು ಇಲ್ಲವೇ ನಡುವಿನಲ್ಲಿ ಅಥವಾ ಕಡೆಯಲ್ಲಿ ಉದ್ಯಾಪನೆ ಮಾಡಿದರೆ ಎಲ್ಲ ಇಷ್ಟಗಳೂ ಫಲಿಸುತ್ತವೆ ಎಂದು ಹೇಳಲಾಗುತ್ತದೆ. . ಈ ವ್ರತವನ್ನು ಅವಿವಾಹಿತ ಕನ್ಯೆಯರು ವಿವಾಹಿತೆಯರು ಒಂಬತ್ತು ವರ್ಷಗಳ ಕಾಲ ಆಚರಿಸಿ ಉದ್ಯಾಪನೆಯನ್ನು ಮಾಡಬೇಕು. ಎಂಬುದು ಭೀಮನ ಅಮಾವಾಸ್ಯೆ ಸಾರುತ್ತಿರುವ ಸಂದೇಶವಾಗಿದೆ ಎನ್ನಬಹುದು.

ಭಂಡಾರ ಒಡೆಯುವುದು: ಕೆಲವೆಡೆ ಈ ವ್ರತವನ್ನು ಭಂಡಾರದ ಹಬ್ಬ ಎಂದು ಆಚರಿಸುತ್ತಾರೆ. ಈ ದಿನವನ್ನು ಹೆಣ್ಣು ಮಕ್ಕಳು ತಮ್ಮ ಅಣ್ಣ ತಮ್ಮಂದಿರ ಒಳಿತಿಗಾಗಿ ಆಚರಿಸುತ್ತಾರೆ. ಹಾಗೇ ಗಂಡು ಮಕ್ಕಳು ತಮ್ಮ ಸಹೋದರಿಯರ ಜೀವನ ಚೆನ್ನಾಗಿರಲೆಂದು ಹಾರೈಸುತ್ತಾರೆ. ಈ ವಿಶೇಷ ದಿನದಂದು ಮೈದಾ, ಕಾಯಿ ಹೂರದಿಂದ ಕರಿಕಡುಬು ತಯಾರಿಸುತ್ತಾರೆ. ತಯಾರಿಸುವಾಗ ಅದರೊಳಗೆ ನಾಣ್ಯಗಳನ್ನು ಇರಿಸಲಾಗುತ್ತದೆ. ನಂತರ ಇದನ್ನು ಹೊಸ್ತಿಲ ಮೇಲಿಟ್ಟು ಪೂಜೆ ಮಾಡಲಾಗುತ್ತದೆ. ನಂತರ ಅಣ್ಣ ಅಥವಾ ತಮ್ಮ, ಮೊಣಕೈಯಿಂದ ಆ ಭಂಡಾರವನ್ನು ಒಡೆಯಬೇಕು. ತಂಗಿಯಾದವರು ಅಣ್ಣನ ಆಶೀರ್ವಾದ ಪಡೆದರೆ, ಅಕ್ಕನ ಸ್ಥಾನದಲ್ಲಿ ಇರುವವರು ತಮ್ಮನಿಗೆ ಉಡುಗೊರೆ ನೀಡುತ್ತಾರೆ.

ಆಟಿ ಅಮಾವಾಸ್ಯೆ: ದಕ್ಷಿಣ ಕನ್ನಡದ ಕಡೆ ಈ ದಿನವನ್ನು ಆಟಿ ಅಮಾವಾಸ್ಯೆ ಎಂದು ಕರೆಯಲಾಗುತ್ತದೆ. ಈ ದಿನ ಹಾಲೆ ಮರದ ಕಷಾಯವನ್ನು ಸೇವಿಸಲಾಗುತ್ತದೆ. ಇದನ್ನು ಸೇವಿಸುವುದರಿಂದ ದೇಹಕ್ಕೆ ರೋಗ ನಿರೋಧಕ ಶಕ್ತಿ ದೊರೆಯುತ್ತದೆ ಎಂಬ ನಂಬಿಕೆ ಇದೆ. ಈ ಹಾಲೆ/ಪಾಲೆ ಮರಕ್ಕೆ ದೈವಿಕ ಶಕ್ತಿ ಇದೆ ಎನ್ನಲಾಗಿದೆ. ಇದನ್ನು ಸಪ್ತಪರ್ಣಿ ಮರ ಎಂದೂ ಕರೆಯಲಾಗುತ್ತದೆ.

ಈ ವ್ರತವನ್ನು ವಿವಿಧ ಹೆಸರುಗಳಿಂದ ಕರೆದರೂ ಮನೆಯವರ ಒಳಿತಿಗಾಗಿ ಈ ಹಬ್ಬವನ್ನು ಆಚರಿಸಲಾಗುತ್ತದೆ. **'ಸರ್ವೇ ಜನಾಃ ಸುಖಿನೋ ಭವಂತು, ಲೋಕಾಃ ಸಮಸ್ತಾಃ ಸುಖಿನೋ ಭವಂತು'.**



ವಾರಭವಿಷ್ಯ

16.7.2023 ರಿಂದ 22.7.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕಟಕ, ಚಂದ್ರ-ಮಿಥುನ, ಕಟಕ, ಸಿಂಹ, ಕುಜ-ಸಿಂಹ, ಬುಧ-ಕಟಕ, ಗುರು-ಮೇಷ, ಶುಕ್ರ-ಸಿಂಹ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

'ಕರ್ಮಣ್ಯೇ ವಾಧಿಕಾರಸ್ಥೆ...' ಎಂಬ ಗೀತಾವಾಣಿಯಂತೆ ಈ ವಾರ ನಿಮ್ಮ ಕರ್ತವ್ಯ ನಿರ್ವಹಿಸುತ್ತಾ ಭಗವಧ್ಯಾನ ಮಾಡಿ. ಆಸ್ತಿ ಮಾರಾಟದಿಂದ ಧನ ಸಂಗ್ರಹ. ಹಿತೈಷಿಗಳಿಂದ ಜನ್ಮಸ್ಥ ಗುರುವಿನಿಂದ ಮಿಶ್ರಫಲ. ಕೆಲವೊಮ್ಮೆ ಸಮಯೋಚಿತ ವರ್ತನೆ ಇಲ್ಲದೆ ಕೈಗೆ ಬಂದ ತುತ್ತು ಬಾಯಿಗಿಲ್ಲದಂತೆ ಆಗುವುದು.

ಶ್ರೀ ಸುಬ್ರಹ್ಮಣ್ಯ ಸ್ತುತಿ. ಶುಭ ಸಂಖ್ಯೆ-1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಬೇಕಾಗುವುದು. ಸ್ನೇಹಿತರೊಂದಿಗೆ ವಾದ ವಿವಾದ. ಸಾಲಗಾರರ ಒತ್ತಡ. ವಾರ ಮಧ್ಯಾನಂತರ ಯತ್ನ ಕಾರ್ಯ ಸಿದ್ಧಿ. ಧನಲಾಭವಾಗಿ ಬಹಳ ದಿನಗಳ ಕಷ್ಟ ಪರಿಹಾರವಾಗಲಿದೆ. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ. ರೆಡಿಮೇಡ್ ವಸ್ತ್ರ ವ್ಯಾಪಾರಿಗಳಿಗೆ ದೊಡ್ಡ ಮೊತ್ತದ ಆರ್ಡರ್ ದೊರೆಯುವುದು. ಸ್ನೇಹ ವರ್ಗದವರಿಂದ ಅವಶ್ಯಕ ಮಾರ್ಗದರ್ಶನ ದೊರಕುವುದು.

ಶ್ರೀ ದೇವೀ ಉಪಾಸನೆ. ಶುಭ ಸಂಖ್ಯೆ-3.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಹೊಸ ಹುರುಪಿನಿಂದ ಸ್ವಂತ ಕೆಲಸಗಳು ಸಂಪನ್ನಗೊಳ್ಳಲಿವೆ. ವ್ಯಾಪಾರ ವಹಿವಾಟುಗಳು ಪ್ರಗತಿಯ ಹಾದಿಯಲ್ಲಿ ಸಾಗುವುದು. ಸ್ತ್ರೀ ಸುಖ, ವಿಲಾಸ ಜೀವನ, ಧನ, ಕನಕ, ದುಬಾರಿ ವಸ್ತು, ವಾಹನ ಹೊಂದುವ ಅವಕಾಶವಿದೆ. ಬೃಹತ್ ಕೈಗಾರಿಕೆ ಸಂಸ್ಥೆಗಳಿಗೆ ದೊಡ್ಡ ರಫ್ತು ಆರ್ಡರ್ ದೊರೆಯಬಹುದು. ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದ ವಿಚಾರ ಇತ್ಯರ್ಥವಾಗಬಹುದು. ಅಗ್ನಿ, ವಿದ್ಯುತ್ ಅಪಘಾತಗಳಿಂದ ಎಚ್ಚರವಿರಲಿ.

ಶ್ರೀ ಸತ್ಯನಾರಾಯಣ ಸ್ತುತಿ. ಶುಭ ಸಂಖ್ಯೆ-8.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಶ್ರಮವಹಿಸಿ ಮಾಡಿದ ಕೆಲಸದ ಕಾರ್ಯಸಿದ್ಧಿ ಆಗಲಿದೆ. ಇದಕ್ಕೆ ಮಾತೃಶ್ರೀಯವರ ಬೆಂಬಲ ದೊರಕುವುದು. ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಲಭ್ಯವಾಗಲಿದೆ. ಹಣಕಾಸಿನ ಸ್ಥಿತಿಯೂ ಸುಧಾರಿಸುವುದು. ಟೂರಿಸ್ಟ್ ಸಂಸ್ಥೆಗಳಿಗೆ ಉತ್ತಮ ಗಿರಾಕಿಗಳು ದೊರಕುವರು, ದೂರದ ಕ್ಷೇತ್ರ ಪ್ರಯಾಣದಿಂದ ಅಧಿಕ ಲಾಭ. ಮನೆಯಲ್ಲಿ ಹಿರಿಯರಿಗೆ ಅನಾರೋಗ್ಯದ ಸಾಧ್ಯತೆ. ಒರಟು ಮಾತಿನಿಂದ ಮಾನಸಿಕ ನೆಮ್ಮದಿಗೆ ಭಂಗ.

ಶ್ರೀ ಸಪ್ತಮಾತೃಕಾ ದರ್ಶನ. ಶುಭ ಸಂಖ್ಯೆ-4.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದ ಆರಂಭಕ್ಕೆ ಆಪ್ತ ಮಿತ್ರರ ಮಿಲನದಿಂದ ಹರ್ಷ. ವಿದೇಶ ಪ್ರವಾಸ ಯೋಗವಿದೆ. ಉನ್ನತ ಹುದ್ದೆ ಲಭಿಸಬಹುದು. ನಿಪುಣತೆಯಿಂದ ಕಾರ್ಯ ಸಾಧಿಸಲು ದೈವಬಲವಿದೆ. ಹಿಂದೆ ಬಿದ್ದರೆ ಕೈ ತಪ್ಪುವುದು. ಇದು ನಿಮ್ಮ ಭಾಗ್ಯದಲ್ಲಿ ವೃದ್ಧಿಆಗುವ ಸಮಯ. ವಿದ್ಯಾ ಪ್ರಸಂಗಗಳಲ್ಲಿ ಪ್ರಶಸ್ತಿ ಲಭಿಸಲಿದೆ. ಸರ್ಕಾರಿ ಉದ್ಯೋಗಿಗಳಿಗೆ ಬಡ್ತಿಯೊಂದಿಗೆ ಸ್ಥಾನ ಪಲ್ಲಟ. ವಾರಾಂತ್ಯಕ್ಕೆ ಕುಲದೇವತಾ ದರ್ಶನ.

ಅಸಹಾಯಕರಿಗೆ ಅನ್ನದಾನ. ಶುಭ ಸಂಖ್ಯೆ-7

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಭವಿಷ್ಯದ ಕೆಲಸ ಕಾರ್ಯಗಳಿಗೆ ಕಾಲಮಿತಿ ಹಾಕಿಕೊಳ್ಳುವುದು ಉತ್ತಮ. ಸಾಂಸಾರಿಕವಾಗಿ ತೃಪ್ತಿಕರ ಜೀವನ ಸಾಗುವುದು. ಆಸ್ತಿ ವಿವಾದಗಳು ಅಂತ್ಯ ಕಾಣದು. ಪಾಲುದಾರಿಕೆ ವ್ಯವಹಾರದಲ್ಲಿ ಸಾಮರಸ್ಯದ ಕೊರತೆ. ಹಿರಿಯ ಚೇತನರಿಗೆ ಅನಾರೋಗ್ಯ, ಔಷಧೋಪಚಾರಕ್ಕೆ ಹೆಚ್ಚಿನ ಹಣ ವ್ಯಯ. ಅಷ್ಟಮ ರಾಹುವಿನಿಂದ ಆತುರದಿಂದ ಮಾಡುವ ಕೆಲಸಗಳು ಎಡವಟ್ಟಾದೀತು.

ಶ್ರೀ ಮನ್ನಾರಾಯಣ ನಾಮಸ್ಮರಣೆ. ಶುಭ ಸಂಖ್ಯೆ-5.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಮನೋ ಇಚ್ಛಿತ ಕಾರ್ಯಗಳು ಸುಲಲಿತವಾಗಿ ನಡೆಯುವುದು. ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಪ್ರಗತಿ ಹಾಗೂ ಧನಲಾಭ. ವಿವಾಹಯೋಗ್ಯರಿಗೆ ಸಮಾಗಮ ಹಾಗೂ ಅವರ ಆಶೀರ್ವಚನ ದೊರಕುವುದು. ಪಂಚಮ ಶನಿದೇವನಿಂದ ತಪ್ಪು ದಾರಿಯಲ್ಲಿ ನಡೆಯಲು ಪ್ರೇರಣೆ ಆಗುವುದು.

ಶ್ರೀ ಅಪರಾಜಿತ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-6.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ವಾರದಾರಂಭಕ್ಕೆ ಧನಾದಾಯ ಉತ್ತಮವಿರುತ್ತದೆ. ಮರ-ಮುಟ್ಟು ಪೀಠೋಪಕರಣ ವ್ಯಾಪಾರಿಗಳಿಗೆ ಆದಾಯದಲ್ಲಿ ಹೆಚ್ಚಳ. ಎಲೆಕ್ಟ್ರಿಕ್ ಕಾಂಟ್ರಾಕ್ಟರ್‌ಗಳಿಗೆ ಬೇಡಿಕೆ ಹೆಚ್ಚಾಗುವುದು. ರಾಜ ಕಾರಿಣಿಗಳಿಗೆ ಅಗ್ನಿ ಪರೀಕ್ಷೆಯ ಕಾಲ. ನಿಮ್ಮವರೆ ನಿಮ್ಮನ್ನು ಅನುಮಾನಿಸಿ ನೋಡುವರು. 'ಅನುಮಾನಂ ಪೆದ್ದರೋಗಂ' ಎಂಬಂತೆ ಆಗುವುದು ಬೇಡ. ಪಿತ್ತ ಜನಿತ ಕಾಯಿಲೆ ಕಾಡಬಹುದು.

ಶ್ರೀ ರಾಹು-ಕೇತು ಸ್ತೋತ್ರ ಪಠಿಸಿ. ಶುಭ ಸಂಖ್ಯೆ-2.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದ ಆದಿಗೆ ಗುರುಕೃಪೆಯಿಂದ ಮನಸ್ಸಿಗೆ ನೆಮ್ಮದಿ ನೀಡುವ ಹೊಸ ಮಾರ್ಗವೊಂದು ಗೋಚರಿಸಲಿದೆ. ನಿಮ್ಮ ನಿಕಟವರ್ತಿಗಳು ನಿಮ್ಮ ಮಹತ್ವದ ಕಾರ್ಯ ಕಲಾಪಗಳಿಗೆ ನೆರವು ನೀಡುವರು. ಹೊಸ ಬಂಡವಾಳ ಹೂಡಿಕೆಗಳನ್ನು ಮಾಡಲು ಅಡ್ಡಿ ಇಲ್ಲ. ಇಂಟರ್‌ವ್ಯೂಗಳಲ್ಲಿ ಯಶಸ್ಸು ದೊರಕುವುದು. ಸಾಲ ಕೊಟ್ಟು ಕೈ ಸುಟ್ಟುಕೊಳ್ಳದಿರಿ. ವಾರದ ಕಡೆಗೆ ತೀರ್ಥಯಾತ್ರೆಯಿಂದ ಧನ್ಯತಾಭಾವ.

ಶ್ರೀ ಶಿರಡಿಸಾಯಿಸೇವೆ. ಶುಭ ಸಂಖ್ಯೆ-1.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದ ಪೂರ್ವಾರ್ಧಕ್ಕೆ ಸಹೋದ್ಯೋಗಿಗಳ ಸಹಕಾರ, ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ಆದಾಯ ಇದ್ದರೂ ಸಾಲ ಮಾಡಬೇಕಾದ ಪರಿಸ್ಥಿತಿ, ಸಂಕಷ್ಟಗಳು ಉಂಟಾದರೂ ಜಯಿಸಿಕೊಳ್ಳುವಿರಿ. ಪೂರ್ವಭಾವಿ ತಯಾರಿ ಇಲ್ಲದೆ ಯಾವ ಕೆಲಸವನ್ನೂ ಮಾಡದಿರಿ. ಯಾರೊಡನೆಯೂ ದ್ವೇಷ ಸಾಧನೆ ಬೇಡ. ಕುಟುಂಬದಲ್ಲಿ ವಿರಸದ ಮಾತುಗಳು ಉಂಟಾಗಬಹುದು. ಮನೆಯಲ್ಲಿ ಹಿರಿಯರ ಆರೋಗ್ಯದಲ್ಲಿ ವ್ಯತ್ಯಯ.

ಶ್ರೀ ಶಿವಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ-6.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಹೆಚ್ಚಿನ ಗ್ರಹಗಳು ನಿಮಗೆ ಅನುಕೂಲವಾಗಿಲ್ಲ. ಭಾಗ್ಯವಿದ್ದಂತೆ ಫಲ, ವಿದ್ಯೆ, ಪೌರುಷ ಯಾವುದೂ ಪ್ರಯೋಜನಕ್ಕೆ ಬಾರದು. ಆದಾಯ ತಕ್ಕಮಟ್ಟಿಗೆ ಇದ್ದರೂ ಗುರಿಹೀನ ಖರ್ಚುಗಳು. ಮಾಡುವ ಕೆಲಸಕ್ಕೆ ಅಡ್ಡಿ ಆತಂಕಗಳು ಉಂಟಾಗುವುದು. ವಾರದ ಕಡೆಗೆ ಕೆಲವು ಸರ್ಕಾರಿ ಕೆಲಸಗಳು ನಿಮ್ಮ ಪರವಾಗುವುದು. ಎಲ್ಲರೂ ಮೆಚ್ಚಿಕೊಳ್ಳುವ ಕೆಲಸವನ್ನು ಮಾಡಿ ಜನರ ಪ್ರೀತಿ ಗಳಿಸುವಿರಿ. ನಿತ್ಯ ಮೆಡಿಟೇಷನ್ ಮಾಡಿ.

ಶ್ರೀ ಶಮೀವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ-9.


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಬೃಹಸ್ಪತಿಯ ಕೃಪೆಯಿಂದ ಉದ್ಯೋಗ ವ್ಯವಹಾರಗಳು ಲಾಭದಾಯಕವಾಗಿ ನಡೆಯುವುದು. ನಿಂತು ಹೋಗಿದ್ದ ಕೆಲಸಗಳ ಮರುಚಾಲನೆ ಪಡೆಯಲಿದೆ. ಸತಿ-ಪತಿಯರಲ್ಲಿ ಉಂಟಾಗಿದ್ದ ವಿರಸ ನಿವಾರಣೆ ಆಗುವುದು. ಶಿಕ್ಷಣ ಕ್ಷೇತ್ರದವರಿಗೆ ಸರ್ಕಾರದಿಂದ ಗೌರವ ಪ್ರಾಪ್ತಿ. ನ್ಯಾಯಾಲಯ ವಿಚಾರಗಳಲ್ಲಿ ಪರಾಭವವನ್ನು ಎದುರಿಸಬೇಕಾದೀತು. ದಾಯಾದಿಗಳು ಆಸ್ತಿ ಬಗ್ಗೆ ತಕರಾರು ಉಂಟು ಮಾಡುವರು.

ಶ್ರೀ ಗುರುರಾಯರ ಉಪಾಸನೆ. ಶುಭ ಸಂಖ್ಯೆ-2.

ಮಕ್ಕಳ ಚಿತ್ರಕಥೆ: ನಾವು ಕೆಲಸ ಮಾಡಿಕೊಂಡು ತಿನ್ನಬೇಕು...!

-ಹೆಚ್.ಜಿ.ಎನ್.ಪ್ರಸಾದ್, ಮೊ:9845376199



ನೀತಿ: ಸಂತೃಪ್ತ ಮನಸ್ಸಿಗಿಂತ ಶ್ರೇಷ್ಠ ವರದಾನ ಈ ಜೀವನದಲ್ಲಿ ಬೇರೊಂದಿಲ್ಲ. ಯಾರಲ್ಲಿ ಅಸಂತೃಪ್ತಿ ಇರುತ್ತದೋ ಅವನೇ ಬಡವ. ಯಾರಲ್ಲಿ ಸಂತೃಪ್ತಿ ಇರುತ್ತದೆಯೋ ಅವನು ಧನವಿಲ್ಲದಿದ್ದರೂ ಸಿರಿವಂತ.

ಅಂತರ ಕಾಲೇಜು ಮಹಿಳೆಯರ ಕ್ರೀಡಾಕೂಟಕ್ಕೆ ಚಾಲನೆ

ಸಾಧಿಸುವ ಛಲ ನಿಮ್ಮಲ್ಲಿದ್ದಲ್ಲಿ ಸಾಧನೆ ನಿಮ್ಮದಾಗುತ್ತದೆ: ಶಾಸಕ ಜಿಡಿ ಹರೀಶ್‌ಗೌಡ



ಹುಣಸೂರು, ಜು.15– ಕ್ರೀಡಾ ಮನೋಭಾವನೆ ಮೆರೆಯುವ ಮೂಲಕ ಕ್ರೀಡೆಯನ್ನು ಗೆಲ್ಲಿಸಿರಿ ಎಂದು ಕರೆ ನೀಡಿದ ಶಾಸಕ ಜಿ.ಡಿ.ಹರೀಶ್‌ಗೌಡ, ಸಾಧಿಸುವ ಛಲ ನಿಮ್ಮಲ್ಲಿದ್ದರೆ ಸಾಧನೆ ನಿಮ್ಮದಾಗುತ್ತದೆ ಎಂದರು.

ಹುಣಸೂರು ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಶನಿವಾರ ಸರ್ಕಾರಿ ಮಹಿಳಾ ಕಾಲೇಜು ಆತಿಥ್ಯದಲ್ಲಿ ಆಯೋಜಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ವಲಯ ಮಹಿಳೆಯರ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನಿತ್ಯ ಬದುಕಿನಲ್ಲಿ ಬಿಸಿಲು, ಮಳೆ, ಚಳಿಯನ್ನು ಲೆಕ್ಕಿಸದೆ ಬದುಕಬೇಕೆನ್ನುವ ಮಹದಾಸೆಯಿಂದ ಎಲ್ಲವನ್ನೂ ಸಹಿಸಿಕೊಂಡು ಬದುಕುತ್ತೇವೆ. ಅಂತೆಯೇ ಕ್ರೀಡೆಯೆನ್ನುವ ಜೀವನದಲ್ಲೂ ಇಂತಹ ಅಡೆತಡೆಗಳನ್ನು ಧೈರ್ಯದಿಂದ ಎದುರಿಸುವ ಮನೋಭಾವ ನಿಮ್ಮಲ್ಲಿರಲಿ. ಕ್ರೀಡಾಕೂಟದಲ್ಲಿ ಭಾಗವಹಿಸಿದ್ದೇವೆ, ಹೊರಟಿದ್ದೇವೆ ಎನ್ನುವ ಮನೋಭಾವ ತೊರೆಯಿರಿ. ಕ್ಷೇತ್ರದಲ್ಲಿ ಏನನ್ನಾದರೂ ಸಾಧಿಸಬೇಕೆನ್ನುವ ಛಲ ನಿಮ್ಮದಾದರೆ ಸಾಧನೆ ನಿಮ್ಮದಾಗುತ್ತದೆ. ಕ್ರೀಡಾಕೂಟದಲ್ಲಿ ಪಾಲ್ಗೊಂಡು ಕ್ರೀಡೆಯನ್ನು ಗೆಲ್ಲಿಸಿರಿ ಎಂದರು.

ವಿಶೇಷ ಆಹ್ವಾನಿತರಾಗಿದ್ದ ಅಂತಾರಾಷ್ಟ್ರೀಯ ವಾಲಿಬಾಲ್ ಆಟಗಾರ್ತಿ ಎಚ್.ಎಸ್.ಹೇಮಲತಾ ಮಾತನಾಡಿ, ಕ್ರೀಡೆ ಆರೋಗ್ಯ, ಸಮೃದ್ಧಿತನದೊಂದಿಗೆ ಆತ್ಮಗೌರವ ನೀಡುತ್ತದೆ. ಬದುಕನ್ನು ಎದುರಿಸುವ ಕಲೆಯನ್ನು ಕ್ರೀಡೆಯು ಕಲಿಸುತ್ತದೆ. ಸಮೀಕ್ಷೆಯೊಂದರ ಪ್ರಕಾರ ಕ್ರೀಡೆಯಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳ ಬುದ್ಧಿ ಮತ್ತೆಂಯೂ ಹೆಚ್ಚುತ್ತದೆ ಎನ್ನಲಾಗಿದೆ. ವಿದ್ಯಾರ್ಥಿಗಳು ಕನಿಷ್ಠ ಒಂದು ಕ್ರೀಡೆಯಲ್ಲಾದರೂ ತಮ್ಮನ್ನು ತೊಡಗಿಸಿಕೊಳ್ಳುವುದು ಸೂಕ್ತ ಎಂದರು.

ಉಪವಿಭಾಗಾಧಿಕಾರಿ ರುಚಿ ಬಿಂದಾಲ್, ಪ್ರಾಂಶುಪಾಲ ಪುಟ್ಟಶೆಟ್ಟಿ ಸಿಡಿಸಿ ಉಪಾಧ್ಯಕ್ಷ ಮೋದೂರು ಮಹೇಶಾರಾಧ್ಯ ಮಾತನಾಡಿದರು. ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಸಿ.ವೆಂಕಟೇಶ್, ಸಹನಿರ್ದೇಶಕ ಡಾ.ಪಿ.ಕೃಷ್ಣಯ್ಯ, ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಕೆ.ಎಸ್.ಭಾಸ್ಕರ್, ಜಿಲ್ಲಾ ಪತ್ರಕರ್ತರ ಸಂಘದ ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ್, ನಗರಸಭಾ ಸದಸ್ಯ ಶ್ರೀನಾಥ್, ಸಿಡಿಸಿ ಸದಸ್ಯರಾದ ಜ್ಯೋತಿ ವಿಶ್ವನಾಥ್, ಸತೀಶ್ ಪಾಪಣ್ಣ, ದಾ.ರಾ.ಮಹೇಶ್, ಶಿವನಂಜು, ಪ್ರಜ್ವಲ್, ರಾಜಶೇಖರ್, ಅನಂತಮೂರ್ತಿ, ಪ್ರದೀಪ್, ಹರ್ಷವರ್ಧನ್ ರಮೇಶ್ ಹಾಗೂ 36 ಕಾಲೇಜುಗಳಿಂದ ಆಗಮಿಸಿದ್ದ 800ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಹಾಜರಿದ್ದರು.

ಕ್ರೀಡಾಕೂಟದ ಅಂಗವಾಗಿ ಕಾಲೇಜು ಆವರಣದಿಂದ ಮೈದಾನದವರೆಗೆ ಜಾನಪದ ಕಲಾತಂಡಗಳಾದ ಕಂಸಾಳೆ, ಡೊಳ್ಳು ಕುಣಿತ, ನಗಾರಿ ತಂಡ, ಪಟ ಕುಣಿತದೊಂದಿಗೆ ಆಕರ್ಷಕ ಮೆರವಣಿಗೆ ಮೂಲಕ ಬರಲಾಯಿತು. ಶಾಸಕ ಹರೀಶ್‌ಗೌಡ ವಿದ್ಯಾರ್ಥಿನಿಯೊರೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡರು. ಸಂತಸಗೊಂಡ ವಿದ್ಯಾರ್ಥಿನಿಯರು ಕುಣಿದು ಕುಪ್ಪಳಿಸಿದರು. ಶಾಸಕರನ್ನೂ ಕುಣಿಯಲು ಒತ್ತಾಯಿಸಿದಾಗ ಶಾಸಕರೂ ಹೆಜ್ಜೆ ಹಾಕಿದರು. ಮೈದಾನದಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು. ಬಲೂನುಗಳನ್ನು ಹಾರಿಸಿ ಕ್ರೀಡಾಕೂಟಕ್ಕೆ ಚಾಲನೆ ನೀಡಲಾಯಿತು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ಬಂಪರ್ (ತ): ಮ.1.25ಕ್ಕೆ, ನೀಯತ್ (ಹಿಂ): ರಾ.7ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 2	ಇನ್ಸಿಡಿಯಸ್ ದಿ ರೆಡ್ ಡೋರ್ (ಇಂ): ಬೆ.11.30ಕ್ಕೆ, ರಾ.7.20ಕ್ಕೆ, ರಾ.9.45ಕ್ಕೆ, ನ್ಯಾನೋ ನಾರಾಯಣಪ್ಪ (ಕ): ಮ.1.45ಕ್ಕೆ, ರುದ್ರಾಂಗಿ (ತೆ): ಸಂ.4.30ಕ್ಕೆ.
ಸ್ಕ್ರೀನ್ 3	ರಾಯರು ಬಂದರು ಮಾವನ ಮನೆಗೆ (ಕ): ಬೆ.10.30ಕ್ಕೆ, ಓ ಸಾತಿಯಾ (ತೆ): ಮ.1.15ಕ್ಕೆ, ರಾ.10ಕ್ಕೆ, ಕಬಡಿ ಬ್ರೋ (ತ): ಸಂ.4ಕ್ಕೆ, 72 ಹೂರೇನ್ (ಹಿಂ): ಸಂ.6.25ಕ್ಕೆ, ರಾ.8.15ಕ್ಕೆ.
ಸ್ಕ್ರೀನ್ 4	ಮಧುರ ಮನೋಹರ ಮೋಹನ (ಮ): ಬೆ.10.50ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.1.25ಕ್ಕೆ, ರಾ.9.40ಕ್ಕೆ, ಶ್ರೀ ಪ್ರಸನ್ನ ವೆಂಕಟದಾಸರು (ಕ): ಸಂ.4.30ಕ್ಕೆ, ರಾ.7ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.
ಸ್ಕ್ರೀನ್ 3	ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.
ಸ್ಕ್ರೀನ್ 4	ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಮಹಾವೀರುಡು (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಅಪರೂಪ (ಕ)	2 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
1920 ಹಾರರ್ಸ್ ಆಫ್ ದಿ ಹಾರ್ಟ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಓ ಮನಸೇ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾಮನ್ನಾನ್ (ತ)	4 ಪ್ರದರ್ಶನಗಳು
ರಾಜ್‌ಕಮಲ್	
ಮಹಾವೀರನ್ (ತ)	4 ಪ್ರದರ್ಶನಗಳು
ಸಂಗಂ	
ಮಿಷನ್ ಇಂಪಾಸಿಬಲ್ (ಇ)	4 ಪ್ರದರ್ಶನಗಳು
ಲಿಡೋ	
ಬೇಬಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾವಣಸುರ (ತ)	4 ಪ್ರದರ್ಶನಗಳು
ಪ್ರಭಾ	
ಮಿಷ್ಟರಿ (ಕ)	4 ಪ್ರದರ್ಶನಗಳು

ಶಿವಾರ್ಚಕ ಸಂಘದ ಅಧ್ಯಕ್ಷರಾಗಿ ತೆರಣಿಮುಂಟಿ ಕೆ.ಜಿ.ಯಶವಂತ್ ಆಯ್ಕೆ

ಸರಗೂರು, ಜು.15– ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಶಿವಾರ್ಚಕ ಸಂಘದ ನೂತನ ಅಧ್ಯಕ್ಷರಾಗಿ ತೆರಣಿಮುಂಟಿ ಕೆ.ಜಿ.ಯಶವಂತ್ ಆಯ್ಕೆಯಾಗಿದ್ದಾರೆ.

ಪಟ್ಟಣದ ಸೋಮೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ಶಾಂತಿಪುರ ಪ್ರಸನ್ನಕುಮಾರ್, ಕಾರ್ಯದರ್ಶಿ ಕುಂದೂರು ವೀರಣ್ಣ, ಖಜಾಂಚಿ ಕುಂದೂರು ಶಿವಕುಮಾರ್, ಗೌರವಾಧ್ಯಕ್ಷರಾಗಿ ಕಲ್ಲಾಂಬಾಳು ಕೆ.ವಿ.ನಾಗರಾಜಪ್ಪ, ಸರಗೂರು ಸುಬ್ಬಣ್ಣ, ಶಾಂತಿಪುರ ನಾಗರಾಜಪ್ಪ, ಸಲಹಾ ಸಮಿತಿ ಸದಸ್ಯರಾಗಿ ಶಾಂತಿಪುರ ಮಹದೇವಸ್ವಾಮಿ, ಬೀಚನಹಳ್ಳಿ ನಂಜುಂಡಸ್ವಾಮಿ, ಮಾಗುಡಿಲು ಜಗದೀಶ್, ನಿರ್ದೇಶಕರಾಗಿ ರವಿಶಾಸ್ತ್ರಿ, ರಾಜಪ್ಪಾಜಿ, ಚಂದ್ರಪ್ಪ, ಮಹದೇವಪ್ಪ, ನಂಜಪ್ಪ, ಸುರೇಶ್, ಸತೀಶ್, ನೀಲಕಂಠ, ನಟರಾಜು, ಹರೀಶ್, ರಘುಕೀರ್ತಿ ಆಯ್ಕೆಯಾದರು. ಸರ್ವ ಸದಸ್ಯರು ಉಪಸ್ಥಿತರಿದ್ದರು. ಶ್ರೀ ಚಿಕ್ಕದೇವಮ್ಮನವರ ಬೆಟ್ಟದ ಪಾರುಪತ್ತೇದಾರ್, ಮಹದೇವಸ್ವಾಮಿ ಮಾತನಾಡಿ ಶುದ್ಧ ಶೈವ ಪರಂಪರೆಯಂತೆ ನಿಮ್ಮಗಳ ಕಾಯಕದ ಜೊತೆ ವೃತ್ತಿ ಬದುಕನ್ನು ಮುನ್ನಡೆಸಬೇಕು ಎಂದು ಸಲಹೆ ನೀಡಿದರು.



ಹೆಚ್.ಡಿ.ಕೋಟೆಯಲ್ಲಿ ಅದ್ದೂರಿ ಬಸವ ಜಯಂತಿ ಮೆರವಣಿಗೆ



ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಶನಿವಾರ ಹೆಚ್.ಡಿ.ಕೋಟೆಯಲ್ಲಿ ನಡೆದ ಬಸವ ಜಯಂತಿ ಅದ್ದೂರಿ ಮೆರವಣಿಗೆಯಲ್ಲಿ ಸಾಂಸ್ಕೃತಿಕ ಕಲಾತಂಡಗಳು ಪಾಲ್ಗೊಂಡು, ಮೆರುಗು ನೀಡಿದವು.

ನೇರ ನಗದು ಮೂಲಕ ಅನ್ನಭಾಗ್ಯ ಯೋಜನೆಯ ಹಣ



ತಿ.ನರಸೀಪುರ. ಜು.15– ಸರ್ಕಾರದ ಗ್ಯಾರಂಟಿ ಯೋಜನೆಯಾದ ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿಯಾಗಿ ನೀಡುತ್ತಿರುವ 5 ಕೆ.ಜಿ.ಅಕ್ಕಿಯ ಬಾಬ್ತು ಪಡಿತರ ಕಾರ್ಡ್‌ದಾರರ ಕುಟುಂಬದ ಮುಖ್ಯಸ್ಥರಿಗೆ ನೇರ ನಗದು ವರ್ಗಾವಣೆ ಮಾಡಲಾಗಿದೆ ಎಂದು ಆಹಾರ ಇಲಾಖೆಯ ಶಿರಸ್ತೇದಾರ್ ಎಲ್.ಮಂಜುನಾಥ್ ತಿಳಿಸಿದ್ದಾರೆ.

ತಾಲೂಕು ಕಚೇರಿಯಲ್ಲಿನ ಆಹಾರ ಇಲಾಖೆಯ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 6375 ಅಂತ್ಯೋದಯ ಅನ್ನಭಾಗ್ಯ ಯೋಜನೆ ಪಡಿತರ ಕಾರ್ಡ್‌ಗಳಿದ್ದು 28013 ಸದಸ್ಯರು ಆದ್ಯತಾ ಪಡಿತರ (ಬಿಪಿಎಲ್) 76988 ಕಾರ್ಡುಗಳು, ಹಾಗೂ 85363 ಪಡಿತರ ಕಾರ್ಡ್‌ಗಳಿದ್ದು 266549 ಕುಟುಂಬದ ಸದಸ್ಯರಿದ್ದಾರೆ. ನೇರ ನಗದು ಸೌಲಭ್ಯಕ್ಕೆ ಅರ್ಹ ಅಂತ್ಯೋದಯ ಯೋಜನೆಯಡಿಯಲ್ಲಿ 6375 ಕಾರ್ಡ್ ಮತ್ತು 28013 ಸದಸ್ಯರಿದ್ದು, 3 ಯೂನಿಟ್ ಇರುವ ಕಾರ್ಡ್‌ದಾರರಿಗೆ ಈಗಾಗಲೇ 35 ಕೆಜಿ ಆಹಾರಧಾನ್ಯವನ್ನು ವಿತರಣೆ ಮಾಡಿರುವುದರಿಂದ 1871 ಪಡಿತರ ಕಾರ್ಡ್‌ನ 6051 ಸದಸ್ಯರುಗಳಿಗೆ ನೇರ ನಗದು ಸೌಲಭ್ಯ ಇರುವುದಿಲ್ಲ ಎಂದರು.

76985 ಆದ್ಯತಾ ಪಡಿತರ ಕಾರ್ಡ್‌ಗಳ 238536 ಸದಸ್ಯರುಗಳು ನೇರ ಸೌಲಭ್ಯಕ್ಕೆ ಅರ್ಹರಾಗಿದ್ದು, ತಾಲೂಕಿನಲ್ಲಿ ಜುಲೈ ತಿಂಗಳಿನಲ್ಲಿ 83363 ಪಡಿತರ ಕಾರ್ಡ್‌ಗಳ ಪೈಕಿ ಬಹುತೇಕ ಪಡಿತರ ಕಾರ್ಡುಗಳು ವರ್ಗಾವಣೆಯಾಗಿದೆ ಎಂದು ತಿಳಿಸಿದರು.

1871 ಕುಟುಂಬಗಳ ಪಡಿತರ ಕಾರ್ಡ್ ಬ್ಯಾಂಕಿನ ಖಾತೆ ನಿಷ್ಕ್ರಿಯವಾಗಿದ್ದು, 6051 ಯೂನಿಟ್ ಕುಟುಂಬಗಳ ಆಧಾರ್ ನೋಂದಾವಣೆ ಬ್ಯಾಂಕ್ ಖಾತೆಯಲ್ಲಿ ಡಿಸ್ಪ್ಲೇ ಆಗಿರುವುದಿಲ್ಲ. ಕುಟುಂಬದ ಕಾರ್ಡ್‌ದಾರರ ಆಧಾರ್ ಸಂಖ್ಯೆ ಮಾನ್ಯವಾಗದೇ ಇರುವುದರಿಂದ 4180 ಯೂನಿಟ್‌ಗೆ ಸೌಲಭ್ಯ ತಲುಪಲಾಗಿಲ್ಲ ಎಂದು ತಿಳಿಸಿದರು. ಹಾಗಾಗಿ ಬ್ಯಾಂಕ್ ಖಾತೆ ನಿಷ್ಕ್ರಿಯವಾಗಿರುವ ಕುಟುಂಬಗಳು ಖಾತೆ ಇರುವ ಬ್ಯಾಂಕ್‌ಗೆ ತೆರಳಿ ಆಧಾರ್ ಜೋಡಣೆ ಮಾಡಿಸಿ ಖಾತೆಯನ್ನು ಸಕ್ರಿಯಗೊಳಿಸಬೇಕು ಮತ್ತು ಖಾತೆ ಹೊಂದಿಲ್ಲದೇ ಇರುವ ಕುಟುಂಬಗಳು ಅಂಚೆ ಕಚೇರಿ ಅಥವಾ ಬ್ಯಾಂಕಿಗೆ ತೆರಳಿ ಖಾತೆ ತೆರೆಯಬೇಕಿದೆ ಮೊಬೈಲ್, ಆಧಾರ್ ಕಾರ್ಡ್‌ನೊಂದಿಗೆ 200 ರೂಗಳನ್ನು ತೆಗೆದುಕೊಂಡು ಹೋದಲ್ಲಿ ಅಂಚೆ ಕಚೇರಿಯಲ್ಲಿ ಶೀಘ್ರವಾಗಿ ಖಾತೆ ತೆರೆಯಬಹುದಾಗಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಆಹಾರ ನಿರೀಕ್ಷಕರಾದ ಎಂ.ಎಚ್.ಕಂಠೀರವ, ಕೆ.ದೇವಣ್ಣ ಹಾಜರಿದ್ದರು.

ಶಿಸ್ತು, ಸಮಯ ಪಾಲನೆಯಿಂದ ಗುರಿ ಸಾಧಿಸಲು ಸಾಧ್ಯ

ಶೀಘ್ರ ಬಸ್ಸುಗಳ ಸಮಸ್ಯೆ ಬಗೆಹರಿಯಲಿದೆ: ಶಾಸಕ ದರ್ಶನ್



ನಂಜನಗೂಡು, ಜು.15– ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಶಿಸ್ತು ಮತ್ತು ಸಮಯ ಪರಿಪಾಲನೆಯನ್ನು ಮೈಗೂಡಿಸಿಕೊಳ್ಳುವ ಮೂಲಕ ಗುರಿ ಸಾಧನೆಗೆ ಮುಂದಾಗಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕ್ರೀಡಾ ಮತ್ತು ಸಾಂಸ್ಕೃತಿಕ, ರಾಷ್ಟ್ರೀಯ ಸೇವಾ ಯೋಜನೆ, ಸ್ಕೌಟ್ಸ್ ಅಂಡ್ ಗೈಡ್ಸ್, ರೆಡ್ ಕ್ರಾಸ್ ಸಮಿತಿಗಳ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಮೌಲ್ಯಗಳು ಮರೆಯಾಗುತ್ತಿವೆ. ಇದರಿಂದಾಗಿ ಸಂಬಂಧಗಳು ಕೂಡ ಮರೆಯಾಗಿ ಎಲ್ಲರೂ ಅಪರಿಚಿತರಂತೆ ಬದುಕು ನಡೆಸುವಂತಾಗಿದೆ. ನೀವೆಲ್ಲರೂ ನೈತಿಕ ಮೌಲ್ಯಗಳನ್ನು ಬೆಳೆಸಿಕೊಂಡು ಸಂಬಂಧಗಳಿಗೆ ಬೆಲೆ ಕೊಡುವಂತಾಗಬೇಕು, ತಂದೆ ತಾಯಿಗಳು ಎಲ್ಲರಿಗೂ ದೇವರಿದ್ದಂತೆ. ನನಗೆ ನನ್ನ ತಂದೆ ತಾಯಿ ಹಾಕಿಕೊಟ್ಟ ಅಡಿಪಾಯ, ಸಲಹೆ ಸೂಚನೆಗಳು ನನ್ನ ಜೀವನದಲ್ಲಿ ಮರೆಯುವಂತಿಲ್ಲ. ಆದ್ದರಿಂದ ನೀವೆಲ್ಲರೂ ನಿಮ್ಮ ತಂದೆ ತಾಯಿಯ ಮಾತುಗಳನ್ನು ಉದಾಸೀನ ಮಾಡದೆ ಗಂಭೀರವಾಗಿ ಪರಿಗಣಿಸಿ, ಜೊತೆಗೆ ಸೇವಾ ಮನೋಭಾವ ಬೆಳೆಸಿಕೊಂಡು ಸಾಮಾಜಿಕ ಸೇವೆಯಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಬಸ್ ವ್ಯವಸ್ಥೆ ಇಲ್ಲ ಎಂಬ ದೂರು ವ್ಯಾಪಕವಾಗಿ ಕೇಳಿಬರುತ್ತಿದೆ. ಕೊರೊನಾ ನಂತರ ಸಾರಿಗೆ ನಿಗಮ ಆರ್ಥಿಕ ನಷ್ಟದ ನೆಪವೊಡ್ಡಿ ಬಸ್ಸುಗಳ ಸಂಖ್ಯೆಯನ್ನು ಕಡಿಮೆಗೊಳಿಸಿದೆ. ಈ ಬಗ್ಗೆ ಸಾರಿಗೆ ಸಚಿವರು ಕ್ರಮವಹಿಸುವುದಾಗಿ ಹೇಳಿಕೆ ನೀಡಿದ್ದು ಹೆಚ್ಚಿನ ಬಸ್‌ಗಳನ್ನು ನಿಯೋಜಿಸಿ ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

ಸಮಾರಂಭದಲ್ಲಿ ಪ್ರಾಂಶುಪಾಲರಾದ ಪ್ರೊ.ವಿ.ರೇಣುಕಾ ಬಾಯಿ, ಚಲನಚಿತ್ರ ಹಿನ್ನೆಲೆ ಗಾಯಕರಾದ ನಿಶ್ಚಯ್ ಜೈನ್, ಭಾಗ್ಯಶ್ರೀ ಗೌಡ, ಸಾಂಸ್ಕೃತಿಕ ಸಮಿತಿ ಸಂಚಾಲಕರಾದ ಮಹದೇವಸ್ವಾಮಿ, ಉಪನ್ಯಾಸಕರಾದ ಪ್ರೊ.ಮಂಜು, ಡಾ.ಉಷಾ, ಡಾ.ಮಹದೇವಪ್ರಸಾದ್, ಪ್ರೊ.ಈಶಕುಮಾರ್, ಪ್ರೊ.ಶ್ರೀಧರ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮುಖಂಡರುಗಳಾದ ದೊರೆಸ್ವಾಮಿ, ನಗರಸಭಾ ಸದಸ್ಯರಾದ ಸ್ವಾಮಿ, ಮಹೇಶ್, ಸೇರಿದಂತೆ ಹಲವಾರು ಪ್ರಮುಖರು ಭಾಗವಹಿಸಿದ್ದರು.

ಶಿಥಿಲಾವಸ್ಥೆಯಲ್ಲಿರುವ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ ಅಭಿವೃದ್ಧಿಗೆ ಸಚಿವರ ಸೂಚನೆ

ಬೆಟ್ಟದಪುರ, ಜು.15– ಬೆಟ್ಟದಪುರದ ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ ಶಿಥಿಲಾವಸ್ಥೆ ತಲುಪಿದ್ದು, ತಕ್ಷಣವೇ ದುರಸ್ತಿ ಕಾರ್ಯ ಕೈಗೊಂಡು ಹಾಗೂ ಅತ್ಯುತ್ತಮ ದೇವಸ್ಥಾನ ನಿರ್ಮಾಣ ಮಾಡಲು ಕ್ರಿಯೆ ಯೋಜನೆ ತಯಾರಿಸುವಂತೆ ಸಚಿವ ವೆಂಕಟೇಶ್ ತಹಶೀಲ್ದಾರ್ ಅವರಿಗೆ ಸೂಚಿಸಿದ್ದಾರೆ.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವಾಲಯವು ಶಿಥಿಲಾವಸ್ಥೆಯಲ್ಲಿರುವುದರಿಂದ ತಕ್ಷಣವೇ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಈ ಬಾರಿಯ ದೀಪಾವಳಿ ಹಾಗೂ ರಥೋತ್ಸವ ನಡೆಯುವಂತೆ ನೋಡಿಕೊಂಡು ಮುಂದಿನ ವರ್ಷ ಬೃಹತ್ ದೇವಾಲಯ ನಿರ್ಮಿಸಲು ಕ್ರಿಯಾಯೋಜನೆ ತಯಾರಿಸುವಂತೆ ತಹಶೀಲ್ದಾರ್ ಕುಂಜಿ ಅಹಮದ್ ಅವರಿಗೆ ಸೂಚಿಸಿದ್ದಾರೆ. ಅಲ್ಲದೆ ಬೆಟ್ಟದಪುರ ಪ್ರಮುಖ ಪ್ರವಾಸಿ ಕ್ಷೇತ್ರವಾಗಿದ್ದು, ಅದರ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡುವುದಾಗಿ, ಬೆಟ್ಟದ ತಪ್ಪಲಿನಲ್ಲಿ ಭಕ್ತಾದಿಗಳಿಗೆ, ಪ್ರವಾಸಿಗರಿಗೆ ಮೂಲಸೌಕರ್ಯ ಒದಗಿಸುವ ಬಗ್ಗೆ ಸರ್ಕಾರದ ಗಮನಕ್ಕೆ ತಂದು, ಹೆಚ್ಚಿನ ಅನುದಾನವನ್ನು ತಂದು ಅಭಿವೃದ್ಧಿಪಡಿಸುವ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ಮೈಸೂರು ಜಿಲ್ಲೆಯ ಪ್ರಮುಖ ಪ್ರವಾಸಿ ಕ್ಷೇತ್ರವಾಗಿ ಅಭಿವೃದ್ಧಿ ಮಾಡಲಾಗುವುದೆಂದು ಸಚಿವರು ತಿಳಿಸಿದರು


ಚಿಕ್ಕದೇವಮ್ಮ ದೇವಿಗೆ ಆಷಾಢ ಮಾಸದ ರಾಜೋಪಚಾರ ಪೂಜೆ



ಸರಗೂರು, ಜು.15– ತಾಲೂಕಿನ ಅಧಿದೇವತೆ ಚಿಕ್ಕದೇವಮ್ಮನ ಬೆಟ್ಟದಲ್ಲಿ ಶುಕ್ರವಾರದಿಂದ ಚಿಕ್ಕದೇವಮ್ಮ ದೇವಿಗೆ ಆಷಾಢ ಮಾಸದ ವಿಶೇಷ ಪೂಜೆ ಆರಂಭವಾಗಿದ್ದು, ದೇವಿಗೆ ರಾಜೋಪಚಾರ ಪೂಜೆ ವಿಜೃಂಭಣೆಯಿಂದ ನಡೆಯಿತು.

ದೇವಿಯನ್ನು ಹೂವಿನಿಂದ ಅಲಂಕಾರಗೊಳಿಸಿ, ಬೆಳಗ್ಗೆ 6 ಗಂಟೆಯಿಂದಲೇ ಪೂಜೆ ನೆರವೇರಿಸಲಾಯಿತು. ಮೊದಲಿಗೆ ಅಭಿಷೇಕದೊಂದಿಗೆ ಪೂಜೆ ಆರಂಭವಾಯಿತು. ರುದ್ರಾಭಿಷೇಕ, ಮಹಾಮಂಗಳಾರತಿ ಸೇರಿದಂತೆ ನಾನಾ ಪೂಜಾ ಕೈಂಕರ್ಯಗಳು ಜರುಗಿದವು. ನಂತರ ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದ ಭಕ್ತರು ವಿಶೇಷ ಪೂಜೆ ಸಲ್ಲಿಸಿ, ಹರಕೆ ತೀರಿಸಿದರು.

ಆಷಾಢ ಮಾಸದ ದಿನ, ವಿಶೇಷ ಪೂಜೆ ಸಂದರ್ಭಗಳಲ್ಲಿ ಬೆಟ್ಟಕ್ಕೆ ಬರುವ ಭಕ್ತರ ಅನುಕೂಲಕ್ಕಾಗಿ ತಾಲೂಕು ಆಡಳಿತ ವಿಶೇಷ ಬಸ್ ಸೌಲಭ್ಯ ಕಲ್ಪಿಸಿರಲಿಲ್ಲ. ಇದರಿಂದ ಖಾಸಗಿ ವಾಹನಗಳಲ್ಲಿ ಭಕ್ತರು ಬೆಟ್ಟಕ್ಕೆ ಬಂದು ದೇವಿಯ ದರ್ಶನ ಪಡೆಯುತ್ತಿದ್ದರು. ಇದಲ್ಲದೆ ಸರಗೂರು ಪಟ್ಟಣದ ಚೌಡೇಶ್ವರಿ ದೇವಸ್ಥಾನ, ಸಂತೆ ಮಾಸ್ತಮ್ಮನ ದೇವಸ್ಥಾನ, ಕಾಳಮ್ಮತಾಯಿ ದೇವಸ್ಥಾನಗಳಲ್ಲಿ ಆಷಾಢ ಮಾಸದ ವಿಶೇಷ ಪೂಜೆ ನೆರವೇರಿತು. ದೇವಸ್ಥಾನದ ಪಾರುಪತ್ತೇದಾರರಾದ ಮಹದೇವಸ್ವಾಮಿ, ಅರ್ಚಕರಾದ ನಾಗಣ್ಣ, ಚಿಕ್ಕದೇವಣ್ಣ ಉಪ್ಪಿ, ರವಿ, ಪ್ರಸನ್ನ, ಮಣಿ, ಶ್ರೀಂತ ಪ್ರಸಾದ್, ಮಂಜು, ರಘು ಸೇರಿದಂತೆ ದೇವಸ್ಥಾನದ ಸಿಬ್ಬಂದಿ ಹಾಜರಿದ್ದರು.



ಎರಡು ದಿನಗಳ ಪ್ರವಾಸಕ್ಕಾಗಿ ಮೈಸೂರಿಗೆ ಆಗಮಿಸಿದ ಅರಣ್ಯ ಮತ್ತು ಪರಿಸರ ಇಲಾಖೆ ಸಚಿವ ಈಶ್ವರ ಖಂಡ್ರೆ ಅವರನ್ನು ಕೆಪಿಸಿಸಿ ಕಾರ್ಯದರ್ಶಿ ಗುರುಪಾದಸ್ವಾಮಿ, ಕಾಂಗ್ರೆಸ್ ಮುಖಂಡರಾದ ಧರ್ಮಮಂಜುನಾಥ ಮತ್ತು ಜಂಬುಪುರ ಡಿ. ಮಹದೇವಸ್ವಾಮಿ ಮೈಸೂರಿನ ದಿ ಏಟ್ರೀಯಂ ಹೋಟೆಲ್ ಬಳಿ ಅಭಿನಂದಿಸಿದರು.

ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ್ ಹತ್ಯೆ ಪ್ರಕರಣ

ಕುಟುಂಬಕ್ಕೆ ನ್ಯಾಯ ಕೊಡಿಸಲು ಬಿಜೆಪಿ ಹೋರಾಟಕ್ಕೆ ಸಿದ್ಧ



ತಿ.ನರಸೀಪುರ, ಜು.15–ಕಳೆದ ಭಾನುವಾರ ದುಷ್ಕರ್ಮಿಗಳಿಂದ ಹತ್ಯೆಯಾದ ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ್ ಸಾವಿಗೆ ನ್ಯಾಯ ಮತ್ತು ಆರೋಪಿಗಳಿಗೆ ಕಠಿಣ ಶಿಕ್ಷೆ ಕೊಡಿಸಲು ಬಿಜೆಪಿ ಪಕ್ಷ ಹೋರಾಟಕ್ಕೂ ಸಿದ್ಧವಿದೆ ಎಂದು ಮಾಜಿ ಸಚಿವ ಸುರೇಶ್ ಕುಮಾರ್ ತಿಳಿಸಿದ್ದಾರೆ.

ಪಟ್ಟಣದ ಶ್ರೀರಾಂಪುರ ಬೀದಿಯ ಲಾಲ್ ಬಹದ್ದೂರ್ ಶಾಸ್ತ್ರಿ ಕಾಲೋನಿಯಲ್ಲಿರುವ ವೇಣುಗೋಪಾಲ್ ಮನೆಗೆ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿ, ವೈಯಕ್ತಿಕ ಸಹಾಯಧನ ನೀಡಿ ನಂತರ ಪತ್ರಕರ್ತರೊಂದಿಗೆ ಮಾತನಾಡಿದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಮಾಜಿ ಉಪಮುಖ್ಯಮಂತ್ರಿ ಸಿ.ಅಶ್ವತ್ ನಾರಾಯಣ್, ಮಾಜಿ ಸಚಿವ ಶ್ರೀರಾಮುಲು ಮತ್ತು ಕೇಂದ್ರ ಸಚಿವೆಯಾದ ಶೋಭಾ ಕರಂದ್ಲಾಜೆ ಮೃತನ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿದ್ದು, ಬಿಜೆಪಿ ಪಕ್ಷ ಸಂತ್ರಸ್ತ ಕುಟುಂಬದ ಪರವಾಗಿದೆ. ಅಲ್ಲದೇ ಕುಟುಂಬಕ್ಕೆ ನ್ಯಾಯ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು.ಅವಶ್ಯವಿದ್ದಲ್ಲಿ ಪಕ್ಷ ಹೋರಾಟ ನಡೆಸಲು ಸಿದ್ಧವಿದೆ ಎಂದರು.

ಮಹದೇವಪ್ಪ ತನಿಖಾಧಿಕಾರಿಯೇ?: ವೇಣುಗೋಪಾಲ್ ಕೊಲೆ ಧರ್ಮಕ್ಕಾಗಿ ನಡೆದಿಲ್ಲ. ಹತ್ಯೆಗೂ ಧರ್ಮಕ್ಕೂ ಸಂಬಂಧವಿಲ್ಲ. ಹತ್ಯೆಯಲ್ಲಿ ಯಾರದೂ ಕೈವಾಡ ಇಲ್ಲವೆಂದು ಹೇಳಲು ಸಚಿವ ಮಹದೇವಪ್ಪನವರೇನು ತನಿಖಾಧಿಕಾರಿಯೇ ಎಂದು ಕಿಡಿಕಾರಿದ ಸುರೇಶ್ ಕುಮಾರ್, ಕೊಲೆ ಪ್ರಕರಣದಲ್ಲಿ ಒಬ್ಬ ಅನುಭವಿ ರಾಜಕಾರಣಿಯಿಂದ ಇಂತಹ ಬಾಲಿಶ ಹೇಳಿಕೆಯನ್ನು ನಿರೀಕ್ಷಿಸಿರಲಿಲ್ಲ. ತನಿಖೆಯನ್ನು ದಿಕ್ಕು ತಪ್ಪಿಸುವ ದೃಷ್ಟಿಯಿಂದ ಲಾಭದಾಯಕ ಹೇಳಿಕೆಗಳನ್ನು ನೀಡುವುದನ್ನು ಮಹದೇವಪ್ಪ ಬಿಡಬೇಕು. ತನಿಖೆಯ ವರದಿ ಬಂದ ನಂತರ ಪೊಲೀಸರು ಆರೋಪಿಗಳು ಯಾರು ಎಂಬುದನ್ನು ನಿರ್ಧರಿಸುತ್ತಾರೆ ಎಂದರು.

ವೇಣುಗೋಪಾಲ್ ಹತ್ಯೆ ಪ್ರಕರಣದಲ್ಲಿ ನಿಷ್ಪಕ್ಷಪಾತ ತನಿಖೆಯಾಗಿ ಆರೋಪಿಗಳಿಗೆ ಕಠಿಣ ಶಿಕ್ಷೆಯಾದಾಗ ಮಾತ್ರವೇ ಸಮಾಜಕ್ಕೆ ಒಳ್ಳೆಯ ಸಂದೇಶ ರವಾನೆಯಾಗುತ್ತದೆ. ಆರೋಪಿಗಳು ಎಷ್ಟೇ ಪ್ರಭಾವಿಗಳಾಗಿದ್ದರೂ ಅವರ ವಿರುದ್ಧ ಕ್ರಮಕೈಗೊಳ್ಳಲು ಅಧಿಕಾರಿಗಳಿಗೆ ಸ್ವತಂತ್ರ ನೀಡಬೇಕು. ನಿಷ್ಪಕ್ಷಪಾತ ತನಿಖೆ ನಡೆಸಲು ಅಧಿಕಾರಿಗಳಿಗೆ ಸಹಕಾರ ನೀಡುವುದು ಈ ಕ್ಷೇತ್ರದ ಶಾಸಕ ಮತ್ತು ಸಚಿವರಾದ ಮಹದೇವಪ್ಪ ಕರ್ತವ್ಯ ಎಂದರು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಂಜಯ್ ಶರ್ಮ, ಡಾ.ರೇವಣ್ಣ ಮಾಜಿ ತಾ.ಪಂ. ಸದಸ್ಯ ಬಸವರಾಜು, ಚೌಹಳ್ಳಿ ಸಿದ್ದರಾಜು, ನಿಖಿಲ್, ಮರಡೀಪುರ ನಾಗರಾಜು ಸೇರಿದಂತೆ ಮತ್ತಿತರರು ಹಾಜರಿದ್ದರು.

ಮೈಸೂರು ವಕೀಲರ ಸಂಘದಿಂದ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ

ನಮ್ಮನ್ನಾಳುವವರಲ್ಲಿ ದಾರ್ಶನಿಕರ ಮನಸ್ಥಿತಿ ಇರಬೇಕು

● ಸ್ಫಟಿಕಪುರಿ ಮಠದ ಡಾ.ನಂಜಾವಧೂತ ಸ್ವಾಮೀಜಿ ಅಭಿಮತ ● ಆಳುವವರೂ ಸದಾ ಒಳ್ಳೆ ಸಂದೇಶಗಳ ಪರಿಪಾಲಿಸಬೇಕು



ಮೈಸೂರು ವಕೀಲರ ಸಂಘದ ವತಿಯಿಂದ ನ್ಯಾಯಾಲಯದ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವವನ್ನು ಸ್ಫಟಿಕಪುರಿ ಮಹಾಸಂಸ್ಥಾನದ ಶ್ರೀ ಡಾ.ನಂಜಾವಧೂತ ಸ್ವಾಮೀಜಿ ಸಾನ್ನಿಧ್ಯದಲ್ಲಿ ಹೈಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಬಿ.ಶ್ರೀನಿವಾಸಗೌಡ ಅವರು ಉದ್ಘಾಟಿಸಿದರು. ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಗಡಿಗೆಪ್ಪ ಸಣ್ಣಬಸಪ್ಪ ಸಂಗ್ರೇಶಿ, ಮನೋವೈದ್ಯ ಡಾ.ಬಿ.ಎನ್.ರವೀಶ್, ರಾಜ್ಯ ವಕೀಲರ ಪರಿಷತ್ ಸದಸ್ಯ ಬಿ.ಆರ್.ಚಂದ್ರಮೌಳಿ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಜು.15(ಎಸ್‌ಬಿಡಿ)– ಆಳುವವರಲ್ಲಿ ನಾಡಿನ ದಾರ್ಶನಿಕರ ಮನಃಸ್ಥಿತಿ ಇರಬೇಕು ಎಂದು ತುಮಕೂರು ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ.ನಂಜಾವಧೂತ ಸ್ವಾಮೀಜಿ ಹೇಳಿದರು. ಮೈಸೂರು ವಕೀಲರ ಸಂಘದ ವತಿಯಿಂದ ನ್ಯಾಯಾಲಯದ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 514ನೇ ಜಯಂತ್ಯುತ್ಸವದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ದಾರ್ಶನಿಕ ಪುರುಷರ ಜಯಂತಿ ಆಚರಣೆ ಜೊತೆಗೆ ಅವರ ತತ್ವ ಆದರ್ಶಗಳನ್ನು ಜನಪ್ರತಿನಿಧಿಗಳಾದವರು ಅಳವಡಿಸಿಕೊಳ್ಳಬೇಕು. ಆಗ ಮಾತ್ರ ನೀವು ತೆಗೆದುಕೊಂಡ ಪ್ರಮಾಣ ವಚನ ನಿಜವಾಗುತ್ತದೆ. ಇಲ್ಲವಾದರೆ ನಿಮ್ಮ ಪ್ರಮಾಣಕ್ಕೆ ಚ್ಯುತಿಯಾಗುತ್ತದೆ ಎಂದು ಆಳುವ ಸರ್ಕಾರಗಳಿಗೆ ಮನವಿ ಮಾಡುತ್ತಿರುತ್ತೇವೆ ಎಂದರು.

ರಾಜ ಉದಾರನಾದರೆ ಪ್ರಜೆಗಳು ಯಾವ ರೀತಿ ಬದುಕುತ್ತಾರೆ, ರಾಜನ ಒಂದು ಸಣ್ಣ ತಪ್ಪು ನಿರ್ಧಾರದಿಂದ ಪ್ರಜೆಗಳು ಹೇಗೆ ನರಳುತ್ತಾರೆ ಎನ್ನುವುದನ್ನು ಚರಿತ್ರೆಯಲ್ಲಿ ನೋಡಿದ್ದೇವೆ. ಒಳ್ಳೆಯ ಹಾಗೂ ಕೆಟ್ಟ ಸಂದೇಶಗಳನ್ನು ಸಾರುವ ಸಂಗತಿಗಳು ಚರಿತ್ರೆಯಲ್ಲಿವೆ. ಆದರೆ ಆಳುವವರು ಒಳ್ಳೆಯ ಸಂದೇಶವನ್ನು ಪರಿಪಾಲಿಸಬೇಕು. ನಾಡಪ್ರಭು ಕೆಂಪೇಗೌಡರು, ನಾಲ್ವಡಿ ಕೃಷ್ಣರಾಜ ಒಡೆಯರ್, ರಾಣಿ ಚೆನ್ನಮ್ಮ, ಅವರ ಅನುಯಾಯಿಯಾಗಿದ್ದ ಸಂಗೊಳ್ಳಿ ರಾಯಣ್ಣ ಅವರಂತಹ ಮನಃಸ್ಥಿತಿ ಹೊಂದಬೇಕು. ಆಳುವವರಲ್ಲಿ ಉತ್ತಮ ಧ್ಯೇಯ, ಆದರ್ಶ, ಸ್ವಾಭಿಮಾನ, ಕರುಣೆ, ಪ್ರೀತಿ ಇದ್ದಾಗ ಮಾತ್ರ ಪ್ರಜೆಗಳು ಸುಸ್ಥಿತಿಯಲ್ಲಿರಲು ಸಾಧ್ಯ. ಇಂತಹ ಜಯಂತಿ ಆಚರಣೆಗಳು ಆಳುವ ವ್ಯವಸ್ಥೆಗೆ ಪಾಠ ಆಗಬೇಕು ಎಂದು ತಿಳಿಸಿದರು.

ದಾರ್ಶನಿಕರ ಜಯಂತಿ ಆಚರಿಸಿ, ಸರ್ವ ಜನಾಂಗದ ಶಾಂತಿಯ ತೋಟ, ಇವನಾರವನೆಂದೆನಿಸದಿರಯ್ಯಾ, ಕುಲ ಕುಲವೆಂದು ಹೊಡೆದಾಡದಿರಿ... ಎಂಬ ಸಂದೇಶಗಳನ್ನು ಸುಮ್ಮನೆ ಹೇಳಿದರೆ ಏನೂ ಪ್ರಯೋಜನವಿಲ್ಲ. ಹಾಗೆಯೇ ನಡೆದುಕೊಳ್ಳಬೇಕು. ಕೆಂಪೇಗೌಡರನ್ನು ಗೌರವಿಸಿ ಎಲ್ಲರನ್ನೂ ಸಮಾನವಾಗಿ ಕಾಣಲಿಲ್ಲ ಎಂದರೆ, ಶೋಷಿತರು–ದಮನಿತರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನ ಮಾಡದಿದ್ದರೆ ಯಾವುದಕ್ಕೂ ಅರ್ಥ ಬರುವುದಿಲ್ಲ. ಮಹಾತ್ಮರ ಗೌರವಿಸುವ ಮುನ್ನ ಅವರ ವ್ಯಕ್ತಿತ್ವ ವಿಶೇಷತೆಯ ಬಗ್ಗೆ ಅಧ್ಯಯನ ಮಾಡಿ ಸ್ವಲ್ಪ ಮಟ್ಟಿಗಾದರೂ ತತ್ವ ಮೌಲ್ಯ, ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ನುಡಿದರು.

ನಾಡಪ್ರಭು ಕೆಂಪೇಗೌಡರು ದೊಡ್ಡ ಸಾಮ್ರಾಜ್ಯ ಕಟ್ಟಲಿಲ್ಲ. 500 ವರ್ಷಗಳ ದೂರದೃಷ್ಟಿತ್ವದೊಂದಿಗೆ ಅಚ್ಚುಕಟ್ಟಾದ ಬೆಂಗಳೂರು ನಗರ ಕಟ್ಟಿದರು. ಈಗ ಅದು ಸಿಲಿಕಾನ್ ಸಿಟಿ, ಗಾರ್ಡನ್ ಸಿಟಿಯಾಗಿ ಹೊರಹೊಮ್ಮಿದೆ. ರಾಜ್ಯದ ಆರ್ಥಿಕ ಸಂಪನ್ಮೂಲದ ಶೇ.60ಕ್ಕಿಂತ ಹೆಚ್ಚು ಬೆಂಗಳೂರಿನಿಂದ ಬರುತ್ತಿದೆ. ಈ ಸಂದರ್ಭದಲ್ಲಿ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ತತ್ವವನ್ನು ಅಳವಡಿಸಿಕೊಂಡಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಸ್ಮರಿಸಿಕೊಳ್ಳಬೇಕು. ಉದಾತ್ತರಾಗಿದ್ದ ಮೈಸೂರು ಅರಸರು ನೀಡಿರುವ ಕೊಡುಗೆ ಸ್ಮರಣೀಯ. ಮಧ್ಯ ಕರ್ನಾಟಕದಲ್ಲಿ ರಾಣಿ ಕೆರೆ, ವಾಣಿವಿಲಾಸ ಸಾಗರ ಹೀಗೆ ನೀರಾವರಿ, ಶಿಕ್ಷಣ, ಕೈಗಾರಿಕೆ ಕೊಡುಗೆ ನೀಡಿದರು. ಆಳುವವರಲ್ಲಿ ಶೇ.1ರಷ್ಟು ಇಂತಹ ಮನಸ್ಥಿತಿ ಬಂದರೆ ಎಲ್ಲರ ಕನಸಿನ ರಾಜ್ಯ ನಿರ್ಮಾಣವಾಗುತ್ತದೆ ಎಂದರು. ಮೈಸೂರು ವಕೀಲರ ಸಂಘದಲ್ಲಿ ಬಹಳ ವಿಶೇಷತೆ ಇದೆ. ಎಲ್ಲಾ ಮಹನೀಯರ ಜಯಂತಿಗಳನ್ನು ತುಂಬಾ ಕಾಳಜಿಯಿಂದ ಎಲ್ಲರೂ ಸೇರಿ ಆಚರಿಸುತ್ತಾರೆ ಎಂದು ತಿಳಿದು ಸಂತೋಷವಾಯಿತು. ಇದು ಬೇರೆ ಜಿಲ್ಲೆಗಳಿಗೂ ಮಾದರಿಯಾಗಲಿ ಎಂದು ಶ್ರೀಗಳು ಇದೇ ವೇಳೆ ಆಶಿಸಿದರು.

ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿರುವ ವಕೀಲರ ಮಕ್ಕಳನ್ನು ಇದೇ ಸಂದರ್ಭದಲ್ಲಿ ಪುರಸ್ಕರಿಸಲಾಯಿತು. ಹೈಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಹಾಗೂ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ನಿವೃತ್ತ ನ್ಯಾಯ ನಿರ್ಣಯಾಧಿಕಾರಿ ಬಿ.ಶ್ರೀನಿವಾಸಗೌಡ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಗಡಿಗೆಪ್ಪ ಸಣ್ಣಬಸಪ್ಪ ಸಂಗ್ರೇಶಿ, ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ ಮನೋರೋಗ ವಿಭಾಗದ ಮುಖ್ಯಸ್ಥ ಡಾ.ಬಿ.ಎನ್.ರವೀಶ್, ಕರ್ನಾಟಕ ರಾಜ್ಯ ವಕೀಲರ ಪರಿಷತ್ ಸದಸ್ಯ ಬಿ.ಆರ್.ಚಂದ್ರಮೌಳಿ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು.

> “ಕೆಂಪೇಗೌಡರು, ಬಸವಣ್ಣ, ಸಂಗೊಳ್ಳಿ ರಾಯಣ್ಣ, ರಾಣಿ ಚೆನ್ನಮ್ಮರಂತಹ ಮಹಾನ್ ದಾರ್ಶನಿಕರನ್ನು ಜಾತಿಯಿಂದ ಹೊರಗಿಟ್ಟು ನೋಡಬೇಕು. ಇವರ್‍ಯಾರೂ ಒಂದು ಜಾತಿಗಾಗಿ ಹೋರಾಡಿದವರಲ್ಲ. ಇಡೀ ಸಮಾಜದ ಒಳಿತಿಗಾಗಿ ದುಡಿದವರು. ಅದಕ್ಕಾಗಿಯೇ ಇವರನ್ನು ಮಹಾತ್ಮರು ಎನ್ನುವುದು.
> –ಬಿ.ಶ್ರೀನಿವಾಸಗೌಡ, ಹೈಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ



ಮೈಸೂರು ನ್ಯಾಯಾಲಯದ ಆವರಣದಲ್ಲಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವಕ್ಕೆ ಆಗಮಿಸಿದ ಶ್ರೀ.ಡಾ.ನಂಜಾವಧೂತ ಸ್ವಾಮೀಜಿ ಅವರನ್ನು ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು. ಹಿರಿಯ ವಕೀಲ ಲಾ ಗೈಡ್ ವೆಂಕಟೇಶ್ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ನ್ಯಾಯಾಧೀಶರು, ವಕೀಲರು ಒಂದು ವ್ಯವಸ್ಥೆಯಾಗಿ ಕಾರ್ಯನಿರ್ವಹಿಸಬೇಕು

ಮೈಸೂರು: ನ್ಯಾಯಾಧೀಶರು ಹಾಗೂ ವಕೀಲರು ರಥದ ಎರಡು ಚಕ್ರಗಳಂತಿರಬೇಕು ಎಂದು ಹೈಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಬಿ.ಶ್ರೀನಿವಾಸಗೌಡ ಅಭಿಪ್ರಾಯಿಸಿದರು. ಮೈಸೂರು ವಕೀಲರ ಸಂಘದ ವತಿಯಿಂದ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ ಜಯಂತ್ಯುತ್ಸವ ಉದ್ಘಾಟಿಸಿ ಮಾತನಾಡಿದ ಅವರು, ನ್ಯಾಯಾಧೀಶರು ಹಾಗೂ ವಕೀಲರು ರಥದ ಎರಡು ಚಕ್ರಗಳಂತೆ, ನಾಣ್ಯದ ಎರಡು ಮುಖಗಳಂತೆ ಇದ್ದರೆ ಚೆಂದ. ಎಲ್ಲವೂ ತಿಳಿದಿದೆ ಎಂಬ ಭಾವನೆ ಇಬ್ಬರಲ್ಲೂ ಮೂಡಬಾರದು. ನಾನೀಗ ಅಂಬೆ ಗಾಲಿಡುವ ಮಗುವಿನಂತೆ ಎಂದು ಕಿವಿ, ಕಣ್ಣು, ಮನಸ್ಸು ತೆರೆದರೆ ವೃತ್ತಿಯಲ್ಲಿ ಯಶಸ್ಸಿನ ಶಿಖರವೇರಬಹುದು ಎಂದು ಸಲಹೆ ನೀಡಿದರು.

ಸಿದ್ದರಾಮಯ್ಯ ನನ್ನ ಗುರು: ನಾನು ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಪದವಿ ವ್ಯಾಸಂಗ ಮಾಡುವಾಗ ನ್ಯಾಯಾಲಯಕ್ಕೆ ಬಂದುಹೋಗುತ್ತಿದ್ದೆ. ವಕೀಲರ ಸಂಘಕ್ಕೆ ಬಂದಾಗ ನನ್ನ ತವರಿಗೆ ಬಂದ ಭಾವನೆ ಮೂಡಿತು. ನಾವು ಓದುವಾಗ ನುರಿತ ವಕೀಲರು ಪಾಠ ಮಾಡುತ್ತಿದ್ದರು. ಕೇಶವಮೂರ್ತಿ, ಸಂಪತ್‌ಕುಮಾರ್, ಚಿಕ್ಕಬೋರಯ್ಯ, ಅಬ್ದುಲ್ ಘನಿ, ವಿ.ಹೆಚ್.ಗೌಡರು, ಎ.ಶಂಕರ್, ರಾಮಕೃಷ್ಣ, ಎಂ.ಕೆ.ರಮೇಶ್ ಸೇರಿದಂತೆ ಅನೇಕ ಗುರುಗಳಿದ್ದರು. ಚಿಕ್ಕಬೋರಯ್ಯನವರೊಂದಿಗೆ ಜೂನಿಯರ್ ಆಗಿ ಪ್ರಾಕ್ಟೀಸ್ ಮಾಡಿದ್ದ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಮ್ಮ ಕಾಲೇಜಿನಲ್ಲಿ ತಾತ್ಕಾಲಿಕ ಉಪನ್ಯಾಸಕರಾಗಿದ್ದರು. ಅವರೂ ನನ್ನ ಗುರುಗಳೇ ಎಂದು ಸ್ಮರಿಸಿಕೊಂಡ ಶ್ರೀನಿವಾಸಗೌಡರು, ನಾಡಪ್ರಭು ಕೆಂಪೇಗೌಡರ ಸಾರ್ಥಕ ಸಾಧನೆಯನ್ನು ಬಣ್ಣಿಸಿದರು.

ಕೌಟುಂಬಿಕ ಕಲಹ: ಇರಿದು ಪತ್ನಿ ಹತ್ಯೆಗೈದ ಪತಿ

ಕುಂಬಾರಕೊಪ್ಪಲಿನಲ್ಲಿ ಶನಿವಾರ ಮಧ್ಯಾಹ್ನ ಘಟನೆ: ಆರೋಪಿ ಸೆರೆ

ಮೈಸೂರು, ಜು. 15 (ಆರ್‌ಕೆ)– ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ವ್ಯಕ್ತಿಯೋರ್ವ ಚಾಕುವಿನಿಂದ ಪತ್ನಿಯನ್ನು ಹಾಡಹಗಲೇ ಹತ್ಯೆಗೈದಿರುವ ಘಟನೆ ಶನಿವಾರ ಮಧ್ಯಾಹ್ನ ಮೈಸೂರಿನ ಕುಂಬಾರಕೊಪ್ಪಲಿನಲ್ಲಿ ಸಂಭವಿಸಿದೆ.



ಮಹದೇವ



ಹರ್ಷಿತಾ

ಕುಂಬಾರಕೊಪ್ಪಲಿನ ಲೋಕೇಶ್ ಅವರ ಪುತ್ರಿ ಹರ್ಷಿತಾ (21) ಹತ್ಯೀಡಾದ ನವವಿವಾಹಿತೆ. ಹೆಚ್.ಡಿ. ಕೋಟೆ ತಾಲೂಕಿನ ಬೀರಂಬಳ್ಳಿ ಗ್ರಾಮದ ಮಹದೇವ (30) ಪತ್ನಿ ಕೊಲೆಗೈದವನಾಗಿದ್ದು, ಮೇಟಗಳ್ಳಿ ಠಾಣೆ ಪೊಲೀಸರು ಆತನನ್ನು ಬಂಧಿಸಿದ್ದಾರೆ.

ಕಳೆದ ಒಂದೂವರೆ ವರ್ಷದ ಹಿಂದೆ ಹರ್ಷಿತಾಳನ್ನು ಸಂಬಂಧಿಯೇ ಆದ ಮಹದೇವನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಆರಂಭದಲ್ಲಿ ಚೆನ್ನಾಗಿದ್ದ ಗಂಡ–ಹೆಂಡತಿ ಕ್ರಮೇಣ ವೈಮನಸ್ಸು ಉಂಟಾದ ಪರಿಣಾಮ ಹರ್ಷಿತಾ ಆಗಿಂದಾಗ್ಗೆ ತವರು ಮನೆಗೆ ಬಂದು ಉಳಿದುಕೊಳ್ಳುತ್ತಿದ್ದಳು.

ಸಂಬಂಧಿಕರು, ಹಿರಿಯರು ಹಲವು ಬಾರಿ ನ್ಯಾಯ–ಪಂಚಾಯ್ತಿ ಮಾಡಿ ಬುದ್ಧಿವಾದ ಹೇಳಿ ಒಂದು ಮಾಡಿದರೂ, ಬಗೆಹರಿಯದ ಕಾರಣ ಹರ್ಷಿತಾ ತವರಿಗೆ ಬಂದು ವಾಸಿಸುತ್ತಿದ್ದು, ಆಗಿಂದಾಗ್ಗೆ ಮಹದೇವ ಕೂಡ ಬಂದು ಹೋಗುತ್ತಿದ್ದ. ಶನಿವಾರ ಮಧ್ಯಾಹ್ನ ಕುಂಬಾರಕೊಪ್ಪಲಿನ ಅತ್ತೆ ಮನೆಗೆ ಬಂದ ಮಹದೇವ, ಪತ್ನಿಗೆ ತಮ್ಮ ಮನೆಗೆ ಬರುವಂತೆ ಹೇಳಿದ್ದಾನೆ. ಅದಕ್ಕೆ ಆಕೆ ಒಪ್ಪದ ಕಾರಣ ಚಾಕುವಿನಿಂದ ಇರಿದು ಪರಾರಿಯಾಗಲೆತ್ನಿಸಿದಾಗ ಮನೆಯವರು ಹಾಗೂ ನೆರೆಹೊರೆಯವರು ಹಿಡಿದು ಆತನನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ತೀವ್ರ ರಕ್ತಸ್ರಾವದಿಂದ ಒದ್ದಾಡುತ್ತಿದ್ದ ಹರ್ಷಿತಾಳನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೇ ಆಕೆ ಮಧ್ಯಾಹ್ನ 2 ಗಂಟೆ ವೇಳೆಗೆ ಕೊನೆಯುಸಿರೆಳೆದರು ಎಂದು ಪ್ರಕರಣ ದಾಖಲಿಸಿಕೊಂಡಿರುವ ಮೇಟಗಳ್ಳಿ ಠಾಣೆ ಇನ್ಸ್‌ಪೆಕ್ಟರ್ ದಿವಾಕರ ತಿಳಿಸಿದ್ದಾರೆ. ಆರೋಪಿ ಮಹದೇವನನ್ನು ವಿಚಾರಣೆ ನಡೆಸಿದ ಬಳಿಕ ಸಂಜೆ ಆತನನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ಹರ್ಷಿತಾ ದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿರಿಸಲಾಗಿದೆ.

ಕಳೆದಿದೆ

ಮೈಸೂರು ಸಿಟಿ, ಜಯನಗರ, 5ನೇ ತಿರುವು, 4ನೇ ಮೇನ್, ಮನೆ ನಂ.40/2 ರಲ್ಲಿ ವಾಸವಾಗಿರುವ ನಾಗರಾಜುರವರ ಪತ್ನಿ ಸುಮಾರು 38 ವರ್ಷ ವಯಸ್ಸುಳ್ಳ ಸವಿತ ಬಿ ಆದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಸತ್ಯವಾಗಿ ಹೇಳುವುದೇನೆಂದರೆ:–

1. ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು ಖಾಯಂ ನಿವಾಸಿಯಾಗಿರುತ್ತೇನೆ.

2. ನಾನು ದಿ–04–12–2023ರಂದು ಎಸ್.ಮಂಜುನಾಥಗುಪ್ತ ಉರುಫ್ ಎಂ.ಎಸ್.ಮಂಜುನಾಥ ಶೆಟ್ಟಿ ಎಂಬುವರಿಂದ ಚಾಮರಾಜನಗರ ಟೌನ್, ನಗರಸಭೆ ವ್ಯಾಪ್ತಿಗೆ ಒಳಪಟ್ಟ ಡಿ ವಿಭಾಗಕ್ಕೆ ಸೇರಿ ಸಂತೇಮರಹಳ್ಳಿ ರಸ್ತೆ, ಸುಧಾಮನಗರ ಬಡಾವಣೆಗೆ ಸೇರಿದ ನಗರ ಸಭೆ ಕ್ರಮಾಂಕ 1360/80,ಆಸ್ತಿ ನಂ.1363/80, ನಿವೇಶನ ಸಂಖ್ಯೆ 81ರ ಒಂದು ನಿವೇಶನವನ್ನು ನೋಂದಣಿ ಕ್ರಯಕ್ಕೆ ಪಡೆದಿದ್ದು, ಸದರಿ ಕ್ರಯಪತ್ರ ಹಿರಿಯ ಉಪನೋಂದಣಾಧಿಕಾರಿ, ಚಾಮರಾಜನಗರ ಇವರ ಕಚೇರಿಯಲ್ಲಿ ನೋಂದಣಿ ಆಗಿರುತ್ತದೆ. ಸದರಿ ಅಸಲು ಕ್ರಯ ಪತ್ರವನ್ನು ನಾನು ಪಡೆದುಕೊಂಡಿರುತ್ತೇನೆ. ಸದರಿ ಅಸಲು ಕ್ರಯ ಪತ್ರ ದಿ. 25–06–23ರಂದು ಮಧ್ಯಾಹ್ನ ಸುಮಾರು 3–00 ಗಂಟೆ ಸಮಯದಲ್ಲಿ ಚಾಮರಾಜನಗರ ಟೌನ್, ಜೋಡಿ ರಸ್ತೆಯಲ್ಲಿ ಜೆರಾಕ್ಸ್ ಮಾಡಿಸಲು ಹೋದಾಗ ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ. ನಂತರ ನಾನು ಎಷ್ಟೇ ಹುಡುಕಿದರೂ ಸದರಿ ಅಸಲು ಕ್ರಯಪತ್ರ ಸಿಕ್ಕಿರುವುದಿಲ್ಲ. ಸದರಿ ಅಸಲು ಕ್ರಯಪತ್ರವನ್ನು ನಾನು ಅಥವಾ ನಮ್ಮ ಕುಟುಂಬದ ಯಾವುದೇ ಸದಸ್ಯರು ಯಾವುದೇ ಬ್ಯಾಂಕಿಗೆ ನೀಡಿರುವುದಿಲ್ಲ ಅಥವಾ ಯಾವುದೇ ಸರ್ಕಾರಿ ಕಛೇರಿಗೆ ನೀಡಿರುವುದಿಲ್ಲ ಅಥವಾ ಸದರಿ ಕ್ರಯಪತ್ರದ ಮೇಲೆ ಯಾವುದೇ ಹಣಕಾಸು ಸಂಸ್ಥೆಯಲ್ಲಿ ಅಡಮಾನ ಮಾಡಿ ಸಾಲ ಪಡೆದಿರುವುದಿಲ್ಲ, ಸದರಿ ಕ್ರಯಪತ್ರದ ವಿಚಾರದಲ್ಲಿ ನ್ಯಾಯಾಲಯ ದಾವೆ ಇದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಮುಂದೆ ಒಂದು ವೇಳೆ ಅಸಲು ಪತ್ರ ಸಿಕ್ಕಲ್ಲಿ ಆ ವಿಚಾರವನ್ನು ಸಂಬಂಧಪಟ್ಟವರಿಗೆ ತಿಳಿಸುತ್ತೇನೆ. ಒಂದು ವೇಳೆ ನಾನು ಮೇಲ್ಕಂಡ ವಿಚಾರಗಳಿಗೆ ಬದ್ಧಳಾಗದಿದ್ದಲ್ಲಿ ನನ್ನ ಮೇಲೆ ಯಾವುದೇ ಕ್ರಮ ತಗೆದುಕೊಳ್ಳಬಹುದು ಎಂದು ಈ ಪ್ರಮಾಣಪತ್ರದ ಮೂಲಕ ಪ್ರಮಾಣೀಕರಿಸುತ್ತೇನೆ. ಆದ್ದರಿಂದ ಅಸಲು ಕ್ರಯಪತ್ರ ಕಳೆದು ಹೋಗಿರುವ ಬಗ್ಗೆ ಹಿಂಬರಹ ಪಡೆಯಲು ದೂರು ಸಲ್ಲಿಸಿದ್ದು.

ಸಿಕ್ಕವರು ಈ ಕೆಳಕಂಡ ಮೊಬೈಲ್ ನಂಬರಿಗೆ ಸಂಪರ್ಕಿಸಿ:

7829889079



ಎರಡನೇ ವರ್ಷದ ಸವಿನೆನಪು

ಹೆಚ್.ಕೆ.ರವಿಶಂಕರ್
(ಮಾಜಿ ಅಧ್ಯಕ್ಷರು, ಆರ್.ಎಂ.ಸಿ, ಮೈಸೂರು)

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ನಿಮ್ಮ ನೆನಪು ನಮ್ಮೆಲ್ಲರ ಹೃದಯದಲ್ಲಿ ಇಂದಿಗೂ ಅಮರವಾಗಿದೆ.

ಜನನ: 01.11.1961 ನಿಧನ: 16.07.2021

ದುಃಖತಪ್ತರು:
ತಾಯಿ: ನಾಗರತ್ನಮ್ಮ, ಪತ್ನಿ: ಮಧು, ಮಕ್ಕಳು: ರಶ್ಮಿ, ರಾಕೇಶ್.
ತಮ್ಮಂದಿರು : ಹೆಚ್.ಕೆ.ರಾಜು, ಕೃಷ್ಣ, ತಂಗಿಯಂದಿರು: ರತ್ನ, ಶೋಭ, ಕಾಂತಮಣಿ & ಭಾವಂದಿರು ಹಾಗೂ ಕುಟುಂಬವರ್ಗ

In the Court of the III Addl. Senior Civil Judge & CJM at Mysuru
O.S. No. 483/2015

Between
Smt. H.K. Bhagyalakshmi and another ....Plaintiffs
AND
Smt. Neelamma and others ....Defendants

To
Sri Chandrashekar H.M., S/o Sri Mahadeva H.B.
Major ...Defendant No. 9
Smt. Poojashree P.
W/o Sri Chandrashekar H.M.
Major
Both are residing at No. 520/3, Maarigudibeedhi, 2nd Division, Hunsur Town, Mysore District.
Defendant No. 10

NOTICE

Whereas, the above named plaintiff has filed the above suit against you & other defendants for Partition and separate possession of the suit schedule properties. You are hereby Notice to appear in this Court in person or by a pleader duly instructed, and able to answer all material questions relating to the suit, or who shall be accompanied by some person able to answer all such questions, on the 01st Day of August 2023 at 11 O' Clock in the fore noon to answer the claim, and you are directed to produce on that day all the documents upon which you intend to rely in support of your defense.

Take notice that, in default of your appearance on the day before mentioned the suit will be heard and determined in your absence.

Given under my hand and the seal of the Court, this the 14th day of July 2023.

By Order of the Court
Sd/- Chief Ministerial Officer
Court of Senior Civil Judge and CJM, Mysuru

Sd/- Sri R.S. Prasanna Kumar,
Sri G.V. Srinivasa
Advocate for the plaintiff
#No. 19/1, 2nd Floor, S-6, K.C.D. Complex, C.S.I. Compound, 3rd Cross, Mission Road, Bangalore-560 027

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : transportmymul@gmail.com

ಸಂಖ್ಯೆ:04/ಸಾರಿಗೆ/ಮೈಮುಲ್/ಟೆಂ.ಪ್ರ/2023 ದಿನಾಂಕ: 15.7.2023

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆಗಳನ್ನು ನೀಡಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಅಡಿ https://kppp.karnataka.gov.in ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	IFT NO:KMF/ 2023-24/SE0168	1.) ಒಕ್ಕೂಟದ ವಿವಿಧ ಬಿ.ಎಂ.ಸಿ ಕೇಂದ್ರಗಳಿಂದ ಮೆಗಾ ಡೇರಿ ಮತ್ತು ಹುಣಸೂರು ಸಿ.ಸಿ.ಗೆ ಹಾಲು ಸಾಗಾಣಿಕೆ ಮಾಡಲು ಟ್ಯಾಂಕರ್ ವಾಹನಗಳನ್ನು ಎರಡು ವರ್ಷದ ಅವಧಿಗೆ ಗುತ್ತಿಗೆ ಟೆಂಡರ್ ಪಡೆಯುವ ಬಗ್ಗೆ. 2.) ಪ್ರಾ.ಹಾ.ಉ.ಸಂಘಗಳ ಮಾರ್ಗದಿಂದ ಬಿ.ಎಂ.ಸಿ ಕೇಂದ್ರಗಳಿಗೆ ಹಾಲು ಸಾಗಾಣಿಕೆ ಮಾಡಲು ವಾಹನಗಳನ್ನು ಎರಡು ವರ್ಷದ ಅವಧಿಗೆ ಗುತ್ತಿಗೆ ಟೆಂಡರ್ ಪಡೆಯುವ ಬಗ್ಗೆ. 3.) ಪ.ವ್ಯ.ಸೇ. ತುರ್ತುಕರೆ ಮಾರ್ಗಗಳಿಗೆ ಟಾಟಾ ಇಂಡಿಕಾ ಕಾರುಗಳು ಹಾಗೂ ಕಛೇರಿ ಕೆಲಸಗಳಿಗೆ ಎಟಿಯೋಸ್ ಕಾರುಗಳು ಮತ್ತು ದ್ರವಸಾರಜನಕ ವಿತರಣಾ ಮಾರ್ಗಗಳಿಗೆ ಮಹೀಂದ್ರ ಬೊಲೇರೊ ಎರಡು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ಟೆಂಡರ್ ಪಡೆಯುವ ಬಗ್ಗೆ.	09.08.2023 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಸಾರಿಗೆ ವಿಭಾಗದ ಅಧೀಕ್ಷಕರು (6366430832/9449056797) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,